ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೈಸೂರು ಮಿತ್ರ ಸ್ಥಾಪನೆ: 1980 43 ಅತ್ಯುತ್ತಮ ಪತ್ರಿಕೋದ್ಯಮ

ಏಪ್ರಿಲ್ 28 ಗುರುವಾರ 2022

ಸಂಪುಟ: 43 | ಸಂಚಿಕೆ: 13 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೋವಿಡ್ ನಾಲ್ಕನೇ ಅಲೆ ಹಿನ್ನೆಲೆ

T ಸೂತ್ರ ಪಾಲಿಸಿ

ಮೂರು ಅಲೆ ಗೆದ್ದಿದ್ದೇವೆ, 4ನೇ ಅಲೆಯನ್ನೂ ಗೆಲ್ಲೋಣ: ಸಂವಾದದಲ್ಲಿ ಪ್ರಧಾನಿ ಸಲಹೆ

ಬೆಂಗಳೂರು, ಏ.27(ಕೆಎಂಶಿ)– ಕೋವಿಡ್ ನಾಲ್ಕನೇ ಅಲೆ ಹಿನ್ನೆಲೆಯಲ್ಲಿ ಅನಗತ್ಯ ನಿರ್ಬಂಧಗಳನ್ನು ಹೇರದೆ ಆರ್ಥಿಕ ಚಟುವಟಿಕೆ ಸಹಜ ಸ್ಥಿತಿಯಲ್ಲಿರುವಂತೆ ನೋಡಿ ಕೊಳ್ಳಬೇಕು. ಮೇಲಾಗಿ ಟೆಸ್ಟಿಂಗ್, ಟ್ರ್ಯಾಕಿಂಗ್, ಟ್ರೀಟ್‌ಮೆಂಟ್–'T' ಸೂತ್ರ ಪಾಲಿಸಿ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಸಲಹೆ ನೀಡಿದ್ದಾರೆ.

ಬುಧವಾರ ವಿಡಿಯೊ ಸಂವಾದದ ಮೂಲಕ ಕೋವಿಡ್ 4ನೇ ಅಲೆಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮ ಮತ್ತು ಎಚ್ಚರಿಕೆಗಳ ಬಗ್ಗೆ ವಿವರ ನೀಡಿದ ಪ್ರಧಾನಿ ಅವರು, ಮೂರು ಅಲೆಯನ್ನು ಗೆದ್ದಿದ್ದೇವೆ, 4ನೇ ಅಲೆಯನ್ನೂ ಗೆಲ್ಲೋಣ, ಇದಕ್ಕೆ ಜನರ ಸಹಕಾರ ಮುಖ್ಯ ಎಂದಿದ್ದಾರೆ. ಪ್ರಧಾನಿ ಜೊತೆಗಿನ ಸಂವಾದದ ನಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದಲ್ಲದೆ, ಕೇಂದ್ರ ಜಾರಿಗೊಳಿಸಿರುವ ಕೋವಿಡ್ ನಿಯಮಾವಳಿಗಳನ್ನು ತಪ್ಪದೇ ಪಾಲಿಸಬೇಕು ಎಂದಿದ್ದಾರೆ.

● 8ನೇ ಪುಟಕ್ಕೆ



ಬುಧವಾರ ಪ್ರಧಾನಿ ನರೇಂದ್ರ ಮೋದಿ ವಿಡಿಯೋ ಸಂವಾದದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆರೋಗ್ಯ ಸಚಿವ ಡಾ.ಸುಧಾಕರ್ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಪಡಿತರದಲ್ಲಿ ಸಿರಿಧಾನ್ಯ

ಬೆಂಗಳೂರು,ಏ.27(ಕೆಎಂಶಿ)–ರಾಜ್ಯದ ಜನರ ಆರೋಗ್ಯದ ದೃಷ್ಟಿಯಿಂದ ಪಡಿತರ ವ್ಯವಸ್ಥೆಯಡಿ ಅಕ್ಕಿಯ ಜತೆ ಸಿರಿಧಾನ್ಯ, ಜೋಳ ಮತ್ತು ರಾಗಿಯನ್ನು ಸಮ ಪ್ರಮಾಣದಲ್ಲಿ ವಿತರಿಸಲು ಸರ್ಕಾರ ಚಿಂತನೆ ನಡೆಸಿದೆ. ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಉಚಿತವಾಗಿ ನೀಡುವ ಆಹಾರ ಧಾನ್ಯಗಳಲ್ಲಿ ಶೇ.50ರಷ್ಟು ಅಕ್ಕಿ, ಉಳಿದ ಶೇ.50ರಷ್ಟು ರಾಗಿ ಅಥವಾ ಜೋಳ

● 8ನೇ ಪುಟಕ್ಕೆ

ವಿದೇಶಿ, ವಲಸೆ ಪಕ್ಷಿಗಳ ಆಕರ್ಷಣೆಯ ತಾಣವಾಗಿರುವ

ಹದಿನಾರು ಗ್ರಾಮದ ಕೆರೆ ಬಳಿ ಅನಧಿಕೃತವಾಗಿ ರಸ್ತೆ ನಿರ್ಮಾಣ

- ಗ್ರಾಮಸ್ಥರು, ಪಕ್ಷಿ ವೀಕ್ಷಕರು ಬೇಸರ, ಕಾಮಗಾರಿ ತಡೆಗೆ ಆಗ್ರಹ
- ಇಂದು ತಹಸೀಲ್ದಾರ್, ಜಿಲ್ಲಾಧಿಕಾರಿಗೆ ದೂರು



ಹದಿನಾರು ಕೆರೆಗೆ ಹೊಂದಿಕೊಂಡಂತೆ ಅನಧಿಕೃತ ಕಚ್ಚಾ ರಸ್ತೆ ನಿರ್ಮಿಸುತ್ತಿರುವುದು.

ಮೈಸೂರು, ಏ.27(ಎಂಟಿವೈ)– ವಿದೇಶಿ ಹಾಗೂ ವಲಸೆ ಪಕ್ಷಿಗಳಿಗೆ ಆಕರ್ಷಣೆಯ ತಾಣವಾಗಿರುವ ಮೈಸೂರು ತಾಲೂಕಿನ ಹದಿನಾರು ಕೆರೆಗೆ ಹೊಂದಿಕೊಂಡಂತೆ ಖಾಸಗಿ ವ್ಯಕ್ತಿಯೊಬ್ಬರು ಅನಧಿಕೃತವಾಗಿ ರಸ್ತೆ ನಿರ್ಮಿಸುತ್ತಿರುವುದನ್ನು ತಡೆ ಹಿಡಿಯುವಂತೆ ಹದಿನಾರು ಗ್ರಾಮಸ್ಥರು ಹಾಗೂ ಪಕ್ಷಿವೀಕ್ಷಕರು ಮನವಿ ಮಾಡಿದ್ದಾರೆ.

ಹದಿನಾರು ಗ್ರಾಮದ ಕೆರೆಗೆ ಪ್ರತಿ ವರ್ಷ ವಿದೇಶಿ ಪಕ್ಷಿಗಳು ವಲಸೆ ಬಂದು ಸಂತಾನೋತ್ಪತ್ತಿ ಮಾಡುತ್ತವೆ. ಮೈಸೂರು ಜಿಲ್ಲೆ ಪ್ರಮುಖ ಕೆರೆಗಳಲ್ಲಿ ಒಂದಾಗಿರುವ ಹದಿನಾರು ಕೆರೆಯನ್ನು 125ಕ್ಕೂ ಹೆಚ್ಚು ಬಗೆಯ ಜೀವವೈವಿಧ್ಯತೆ ಅವಲಂಬಿಸಿವೆ. ಆದರೆ ಕೆರೆ ಸಮೀಪ ತೋಟ ಹೊಂದಿರುವ ವ್ಯಕ್ತಿಯೊಬ್ಬರು ಅನಧಿಕೃತವಾಗಿ ಕೆರೆ ಜಾಗಕ್ಕೆ ಹೊಂದಿಕೊಂಡಂತೆ ರಸ್ತೆ ನಿರ್ಮಿಸುತ್ತಿದ್ದಾರೆ. ಕೆರೆ ಅಂಚಿಗೆ ಚರಂಡಿ ತೋಡಿರುವುದರಿಂದ ಮಳೆ ನೀರು ಕೆರೆಗೆ ಹರಿದು ಬರಲು ತೊಡಕಾಗಲಿದೆ. ಇದರಿಂದ ಮುಂಬರುವ ದಿನಗಳಲ್ಲಿ ಕೆರೆ ವೈವಿಧ್ಯತೆ ಕಳೆದುಕೊಳ್ಳುವ ಆತಂಕವಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಕೆರೆ ಸುತ್ತಮುತ್ತ ಇರುವ ತೋಟಕ್ಕೆ ಹೋಗಲು ಹಳೆಯ ರಸ್ತೆ ಇದೆ. ಆದರೆ ಕೆಲವು ವೈಯಕ್ತಿಕ ಕಾರಣದಿಂದ ವ್ಯಕ್ತಿಯೊಬ್ಬರು ಕೆರೆ ಜಾಗ ಸೇರಿಸಿಕೊಂಡು ತಮ್ಮ ತೋಟಕ್ಕೆ ಅನಧಿಕೃತವಾಗಿ ಕಚ್ಚಾ ರಸ್ತೆಯನ್ನು ಜೆಸಿಬಿ ಮೂಲಕ ನಿರ್ಮಿಸುತ್ತಿದ್ದಾರೆ. ಕೆರೆ ನಿಯಮಗಳ ಸಂಪೂರ್ಣ ಉಲ್ಲಂಘಿಸಲಾಗಿದೆ. ಗ್ರಾ.ಪಂ ಪಿಡಿಒಗೆ ದೂರು ನೀಡಿದರೂ, ಕೆರೆ ಒತ್ತುವರಿ ತೆರವು ಹಾಗೂ ಅನಧಿಕೃತ ರಸ್ತೆ ನಿರ್ಮಾಣ ತಡೆಗಟ್ಟುವ ಪ್ರಕ್ರಿಯೆ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಮಧ್ಯ ಪ್ರವೇಶಿಸಿ ಅನಧಿಕೃತ ರಸ್ತೆ ನಿರ್ಮಾಣಕ್ಕೆ ತಡೆಯೊಡ್ಡಿ ಕೆರೆ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಕೋರಿದರು.

ಪಕ್ಷಿ ವೀಕ್ಷಕರ ವಿರೋಧ: ಹದಿನಾರು ಕೆರೆಯಲ್ಲಿರುವ ವಿವಿಧ ಪಕ್ಷಿಗಳ ವೀಕ್ಷಣೆಗೆಂದು ಮೈಸೂರಿಂದ ತೆರಳುವ ಪಕ್ಷಿ ವೀಕ್ಷಕರ ತಂಡದ ಸದಸ್ಯರು ದಿನಾರು ಕೆರೆ ಪಕ್ಕ ನಿರ್ಮಿಸುತ್ತಿರುವ ಅನಧಿಕೃತ ರಸ್ತೆ ನಿರ್ಮಾಣಕ್ಕೆ ಆಕ್ಷೇಪವೆತ್ತಿದ್ದಾರೆ. ಅಲ್ಲದೆ, ನಾಳೆ ತಹಸೀಲ್ದಾರ್ ಹಾಗೂ ಡಿಸಿಗೆ ದೂರು ನೀಡಲು ನಿರ್ಧರಿಸಿದ್ದಾರೆ. ಈಗಾಗಲೇ ತಹಸೀಲ್ದಾರ್ ಅವರಿಗೆ ರಸ್ತೆ ನಿರ್ಮಾಣದ ಬಗ್ಗೆ ಗ್ರಾಮಸ್ಥರು ಆಕ್ಷೇಪ ವ್ಯಕ್ತಪಡಿಸಿದ್ದು, ನಾಳೆ ಲಿಖಿತ ರೂಪದಲ್ಲಿ ದೂರು ನೀಡಲು ನಿರ್ಧರಿಸಿದ್ದಾರೆ. ಈ ಕೆರೆಯಲ್ಲಿ ವಿದೇಶಿ ಹಾಗೂ ಅಪರೂಪದ ಪಕ್ಷಿಗಳೊಂದಿದೆ, ನೀರು ನಾಯಿ, ನರಿ, ಮೊಲ ಸೇರಿದಂತೆ ಇನ್ನಿತರ ಸಣ್ಣ ಪ್ರಾಣಿಗಳ ಆವಾಸ ಸ್ಥಾನವೂ ಆಗಿದೆ. ಯಂತ್ರೋಪಕರಣ ಬಳಸಿ ರಸ್ತೆ ನಿರ್ಮಾಣ ಮಾಡುತ್ತಿರುವುದರಿಂದ ಗಿಡ–ಮರದಲ್ಲಿ ಗೂಡು ಕಟ್ಟಿರುವ ಪಕ್ಷಿಗಳಿಗೆ ದಕ್ಕೆಯಾಗುತ್ತದೆ. ಅಲ್ಲದೆ, ಪ್ರಾಣಿ–ಪಕ್ಷಿಗಳ ಬೇಟೆಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ಪಕ್ಷಿ ವೀಕ್ಷಕರು ಆರೋಪಿಸಿದ್ದಾರೆ.

ಮೇಟಗಳ್ಳಿಯಲ್ಲಿ ಒತ್ತುವರಿ ತೆರವು

50 ಕೋಟಿ ಮೌಲ್ಯದ ಆಸ್ತಿ ಮುಡಾ ವಶಕ್ಕೆ

ಮೈಸೂರು, ಏ.27(ಆರ್‌ಕೆ)– ಒತ್ತುವರಿ ಮಾಡಿ ಅನಧಿಕೃತವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ತೆರವುಗೊಳಿಸಿರುವ ಮುಡಾ ಅಧಿಕಾರಿಗಳು, ಸುಮಾರು 50 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಪ್ರಾಧಿಕಾರದ ವಶಕ್ಕೆ ಪಡೆದಿದ್ದಾರೆ. ಮುಡಾ ಆಯುಕ್ತ



ಡಾ.ಡಿ.ಬಿ.ನಟೇಶ್ ಅವರ ನಿರ್ದೇಶನದಂತೆ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು, ಜೆಸಿಬಿ ಮೂಲಕ 3 ಶೀಟ್ ಮನೆಗಳು, 1 ಗುಡಿಸಲು, 1 ಕಾರ್ ಶೆಡ್ ಅನ್ನು ತೆರವುಗೊಳಿಸಿದರು. ಮೇಟಗಳ್ಳಿ ಗ್ರಾಮದ ಸರ್ವೆ ನಂ. 161ರಲ್ಲಿ 2.39 ಎಕರೆ, ಸರ್ವೆ ನಂ. 162ರಲ್ಲಿ 5 ಗುಂಟೆ, ಸರ್ವೆ ನಂ. 167ರಲ್ಲಿ 1.08 ಎಕರೆ ಹಾಗೂ ಸರ್ವೆ ನಂ. 165ರಲ್ಲಿ 3.05 ಎಕರೆ ಜಮೀನನ್ನು 1962ರಲ್ಲಿ ಪ್ರಾಥಮಿಕ ಅಧಿಸೂಚನೆ ಹಾಗೂ 1965ರಲ್ಲಿ ಅಂತಿಮ ಅಧಿಸೂಚನೆ ಮೂಲಕ ವಸತಿ ಬಡಾವಣೆಗಾಗಿ ಭೂಸ್ವಾಧೀನಪಡಿಸಿಕೊಂಡು 1999ರಲ್ಲಿ ಅವಾರ್ಡ್ ಮಾಡಲಾಗಿದೆ. ಆ ಪೈಕಿ ಸರ್ವೆ ನಂ. 162ರಲ್ಲಿ 5 ಗುಂಟೆ, 167ರಲ್ಲಿ 1.08 ಎಕರೆ ಜಮೀನಿಗೆ ಭೂ ಮಾಲೀಕ ತಿಮ್ಮೇಗೌಡ ಎಂಬುವರಿಗೆ 2,666 ರೂ.ಗಳ ಪರಿಹಾರದ ಹಣ ಪಾವತಿಸಲಾಗಿದ್ದರೂ, ಅಲ್ಲಿ ಒತ್ತುವರಿ ಮಾಡಿ ಗುಡಿಸಲು, ಶೆಡ್‌ಗಳನ್ನು ನಿರ್ಮಿಸಲಾಗಿತ್ತು.

ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣ: ಎಜಿಡಿಪಿ ಅಮೃತ್ ಪೌಲ್ ವರ್ಗಾವಣೆ

ಬೆಂಗಳೂರು, ಏ. 27– ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ



ರಾಜ್ಯ ಸರ್ಕಾರ ನೇಮಕಾತಿ ವಿಭಾಗದ ಎಜಿಡಿಪಿ ಅಮೃತ್ ಪೌಲ್‌ರನ್ನು ವರ್ಗಾವಣೆ ಮಾಡಿದೆ. 1995 ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿರುವ ಅಮೃತ್ ಪೌಲ್ ಅವರನ್ನು ಆಂತರಿಕ ಭದ್ರತಾ ದಳದ ಎಡಿಜಿಪಿ ಆಗಿ ವರ್ಗಾವಣೆ ಮಾಡಲಾಗಿದೆ. ಇನ್ನು ನೇಮಕಾತಿ ವಿಭಾಗದ ನೂತನ ಎಡಿಜಿಪಿ ಆಗಿ ಆರ್ ಹಿತೇಂದ್ರ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಅವರಿಗೆ ಹೆಚ್ಚುವರಿ ಹೊಣೆ ನೀಡಲಾಗಿದೆ.

ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದಲ್ಲಿ ಅಮೃತ್ ಪೌಲ್ ಭಾಗಿಯಾಗಿದ್ದಾರೆ ಎಂದು ಕಾಂಗ್ರೆಸ್ ಆರೋಪ ಮಾಡಿತ್ತು. ಕಾಂಗ್ರೆಸ್ ಆರೋಪದ ಹಿನ್ನೆಲೆಯಲ್ಲಿ ಅಮೃತ್ ಪೌಲ್‌ರನ್ನು ವರ್ಗಾವಣೆ ಮಾಡಲಾಗಿದೆ.

545 ಪಿಎಸ್‌ಐ ಹುದ್ದೆಗಳಿಗೆ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ಪೊಲೀಸರು ಮಹಾರಾಷ್ಟ್ರದ ಪುಣೆ ಹೊರವಲಯದಲ್ಲಿ ಅಡಗಿದ್ದ ಮತ್ತೋರ್ವ ಕಿಂಗ್ ಪಿನ್ ರುದ್ರಗೌಡ ಪಾಟೀಲ್ ಎಂಬಾತನನ್ನು ಬಂಧಿಸಿದ್ದಾರೆ. ಈ ಮೂಲಕ ಪರೀಕ್ಷಾ ಅಕ್ರಮದಲ್ಲಿ ತೊಡಗಿದ್ದವರಿಗೆ ಆತಂಕ ಎದುರಾಗಿದ್ದು, ಪಿಎಸ್‌ಐ, ಕಾನ್ಸ್‌ಟೇಬಲ್, ಎಫ್‌ಡಿಎ, ಎಸ್‌ಡಿಎ ಸೇರಿದಂತೆ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ಎಸಗಿದ ಅನುಮಾನ ಕಿಂಗ್ ಪಿನ್ ರುದ್ರಗೌಡ ಪಾಟೀಲ್ ಮೇಲಿದೆ. ನೇಮಕಾತಿ ವಿಭಾಗದಿಂದ ಕೆಳಹಂತದವರೆಗೆ ಪಾಟೀಲ್‌ಗೆ ಸಂಪರ್ಕವಿದೆ ಎಂದು ಹೇಳಲಾಗುತ್ತಿದೆ.

3 ದಿನಗಳ ಹಿಂದೆ ನಿವೃತ್ತಿಯಾಗಿದ್ದ ಡಾ. ಎ.ವಿ. ಸುರೇಶ್ ನಿಧನ

ಮೈಸೂರು, ಏ. 27– ಮೈಸೂರಿನ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ



(ಎನ್‌ಐಇ–ಐಟಿ) ಸಂಸ್ಥೆಯ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು ಹಾಗೂ ಮೈಸೂರಿನ ಜಯನಗರದ ನಿವಾಸಿ ಡಾ. ಎ.ವಿ. ಸುರೇಶ್ (59) ಮಂಗಳವಾರ ಮಧ್ಯರಾತ್ರಿ ತಮ್ಮ ನಿವಾಸದಲ್ಲಿ ನಿಧನರಾದರು. ಶ್ರೀಯುತರು ಮೂರು ದಿನಗಳ ಹಿಂದೆ ಸೇವೆಯಿಂದ ನಿವೃತ್ತರಾಗಿದ್ದರು.

ಡಾ.ಸುರೇಶ್ ಅವರು 23 ವರ್ಷಗಳ ಕಾಲ ಬೆಂಗಳೂರಿನ ಆರ್‌ವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮತ್ತು 6 ವರ್ಷ ಬಿಎಂಎಸ್ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ, ಓರ್ವ ಪುತ್ರ ಮತ್ತು ಅಪಾರ ಬಂಧು ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಬುಧವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣಗೆ ಮಾತೃ ವಿಯೋಗ



ಮೈಸೂರಿನ ಗಾಯತ್ರಿಪುರಂ ನಿವಾಸಿ ದಿವಂಗತ ಪುಟ್ಟಸ್ವಾಮಿ ಅವರ ಪತ್ನಿ ಪಾರ್ವತಮ್ಮ (75) ಏ.24ರಂದು ನಿಧನರಾದರು. ಮೃತರು ಪುತ್ರಿ ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ ಮತ್ತು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಏ.25ರಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್‌ರಿಗೆ ಬೆಳಗಾವಿ ರಾಣಿ ಚನ್ನಮ್ಮ ವಿವಿಯಿಂದ ಗೌರವ ಡಾಕ್ಟರೇಟ್ ಪ್ರದಾನ

ಘಟಿಕೋತ್ಸವದಲ್ಲಿ ಭಾಗವಹಿಸದ ಕಾರಣ ಮೈಸೂರು ಮನೆಯಲ್ಲಿಯೇ ಗೌರವ ಸಮರ್ಪಣೆ

- ಕೆಲವರಿಗೆ ದೇವರು ಹೃದಯಲ್ಲಿದ್ದರೆ, ನನಗೆ ಬೆರಳ ತುದಿಯಲ್ಲಿದ್ದಾನೆ
- ಡಾಕ್ಟರೇಟ್ ಪ್ರದಾನದಿಂದ ರಾಣಿ ಚನ್ನಮ್ಮ ವಿವಿ ಘನತೆ ಹೆಚ್ಚಿದೆ



ಮೈಸೂರು,ಏ.27(ಎಂಟಿವೈ)–ಹೆಸರಾಂತ ಸರೋದ್ ವಾದಕ, ಪದ್ಮಶ್ರೀ ಪುರಸ್ಕೃತ ಪಂಡಿತ್ ರಾಜೀವ್ ತಾರಾನಾಥ್ ಅವರಿಗೆ ಬುಧವಾರ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿ ಗೌರವಿಸಿತು.

ಮೈಸೂರಿನ ಕುವೆಂಪುನಗರದಲ್ಲಿರುವ ಪಂಡಿತ್ ತಾರಾನಾಥ್ ಅವರ ನಿವಾಸಕ್ಕೆ ಬುಧವಾರ ಬೆಳಗಾವಿಯ ರಾಣಿ ಚನ್ನಮ್ಮ ವಿವಿಯ ಕುಲಪತಿ, ಕುಲಸಚಿವರೂ ಸೇರಿದಂತೆ ಸಿಂಡಿಕೇಟ್ ಸದಸ್ಯರು ಆಗಮಿಸಿ ಪಂಡಿತ್ ತಾರಾನಾಥ್ ಅವರಿಗೆ 'ಡಾಕ್ಟರ್ ಆಫ್ ಲೆಟರ್ಸ್ ಗೌರವ ಡಾಕ್ಟರೇಟ್' ಪದವಿ ಪ್ರದಾನ ಮಾಡಿ ಸನ್ಮಾನಿಸಿದರು. ಕಳೆದ ತಿಂಗಳು ನಡೆದ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯದ 9ನೇ ಘಟಿಕೋತ್ಸವದಲ್ಲಿ ರಾಜೀವ ತಾರಾನಾಥ ಅವರನ್ನು ಗೌರವ ಡಾಕ್ಟರೇಟ್ ಪದವಿ ಪ್ರದಾನಕ್ಕೆ ಆಯ್ಕೆ ಮಾಡಲಾಗಿತ್ತು. ಕೆಲ ಕಾರಣದಿಂದ ಘಟಿಕೋತ್ಸವ ಸಮಾರಂಭದಲ್ಲಿ ತಾರಾನಾಥರು ಪಾಲ್ಗೊಳ್ಳದ ಹಿನ್ನೆಲೆಯಲ್ಲಿ ಇಂದು ವಿವಿಯ ಅಧಿಕಾರಿಗಳು ತಾರಾನಾಥ್ ಅವರ ನಿವಾಸಕ್ಕೆ ಬಂದು ಪದವಿ ಪ್ರದಾನ ಮಾಡಿ ಗೌರವಿಸಿದರು.

ಗೌರವ ಡಾಕ್ಟರೇಟ್ ಪದವಿ ಸ್ವೀಕರಿಸಿದ ಬಳಿಕ ಪಂ.ರಾಜೀವ ತಾರಾನಾಥ್ ಮಾತನಾಡಿ, ಬೆಳಗಾವಿಯ ರಾಣಿ ಚೆನ್ನಮ್ಮ ವಿವಿ ಪ್ರೀತಿಯಿಂದ ತಮ್ಮನ್ನು ನೆನಪಿಸಿಕೊಂಡಿದೆ. ನನ್ನ ಬಗ್ಗೆ ಒಳ್ಳೆಯ ಮಾತುಗಳನ್ನಾಡಿದ್ದಾರೆ. ನೀವು ಕೊಟ್ಟ ಪ್ರೀತಿಯನ್ನು ಏಕೆ ಮರಳಿ ಕೊಡಲಿ, ಇದಕ್ಕಾಗಿ ನಾನು ಬಹಳ ಅಭಾರಿಯಾಗಿದ್ದೇನೆ ಎಂದು ಸಂತಸ ವ್ಯಕ್ತಪಡಿಸಿದರು.

ಸಂಗೀತದಲ್ಲಿ ನಾನೊಬ್ಬ ಶಿಷ್ಯ. ನನ್ನ ಗುರು ಉಸ್ತಾದ್ ಅಲಿ ಅಕ್ಬರ್ ಖಾನ್. ಅವರೇ ನನ್ನ ದೇವರು ಹಾಗೂ ಗುರುಗಳು. ಕೆಲವರು ದೇವರು ಹೃದಯಲ್ಲಿದ್ದಾನೆ ಎನ್ನುತ್ತಾರೆ. ಆದರೆ ಯಾವಾಗಲೂ ನನ್ನ 3 ಬೆರಳಿನ ತುದಿಯಲ್ಲಿ ದೇವರು ಕುಳಿತಿರುತ್ತಾರೆ. ಉತ್ತಮವಾಗಿ ಸರೋದ್ ನುಡಿಸಿದರೆ ನನ್ನ ಬೆರಳಲ್ಲೇ ಇವರು ಇರುತ್ತಾರೆ. ಇಲ್ಲದಿದ್ದರೆ ಹೊರಟು ಹೋಗುತ್ತಾರೆ ಎಂದು ಗುರುಗಳನ್ನು ಸ್ಮರಿಸಿದರು.

ಕರ್ನಾಟಕ ಬಹಳಷ್ಟು ಪ್ರೀತಿ ಕೊಟ್ಟಿದೆ. ಟೀಕೆ, ಬೈಯುವುದನ್ನು ಹೊಟ್ಟೆಗೆ ಹಾಕಿಕೊಂಡು ಹೂವಿನ ಹಾರ ಹಾಕಿ ಸನ್ಮಾನಿಸಿದ್ದಾರೆ. ಸರೋದ್ ಸಂಗೀತವನ್ನು ಪ್ರೀತಿಸಿದ್ದಾರೆ. ಇಂದು ನನ್ನ ಮನೆಗೆ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯದ ವೈಸ್ ಚಾನ್ಸಿಲರ್ ಹಾಗೂ ಇನ್ನಿತರರು ಬಂದಿದ್ದಾರೆ. ನಾನು ಕುಲಪತಿ ಎನ್ನುವುದಿಲ್ಲ. ಕುಲಪತಿ ಅನ್ನುವುದು ಕನ್ನಡ ಪದವಲ್ಲ. ಹಾಗಾಗಿಯೇ ನಾನು ವೈಸ್ ಛಾನ್ಸಲರ್ ಅನ್ನುತ್ತೇನೆ. ಕನ್ನಡವಲ್ಲದ ಭಾಷೆ ಬಳಸಬೇಕೆ? ರಾಣಿ ಚನ್ನಮ್ಮ ಅನ್ನುವುದು ಕನ್ನಡ. ಶುದ್ಧ ಕನ್ನಡ ಎಂದು ಕನ್ನಡಾಭಿಮಾನ ಪ್ರದರ್ಶಿಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಂ.ರಾಮಚಂದ್ರ ಗೌಡ ಮಾತನಾಡಿ, 9ನೇ ಘಟಿಕೋತ್ಸವದಲ್ಲಿ ರಾಜೀವ ತಾರಾನಾಥ್ ಅವರಿಗೆ ಗೌರವ ಡಾಕ್ಟರೇಟ್ ಕೊಡುವ ಮೂಲಕ ವಿವಿ ತನ್ನ ಘನತೆಯನ್ನು ಹೆಚ್ಚಿಸಿಕೊಂಡಿದೆ. ವಿಶ್ವವಿದ್ಯಾ ನಿಲಯದ ಇತಿಹಾಸದಲ್ಲಿ ಗೌರವ ಡಾಕ್ಟರೇಟ್‌ಗೆ ಶಿಫಾರಸ್ಸು ಮಾಡಿದ ಮೂವರು ಹೆಸರುಗಳಿಗೆ ರಾಜ್ಯಪಾಲರ ಅಂಕಿತ ದೊರೆತಿದ್ದು, ಮೊದಲು. ಘಟಿಕೋತ್ಸವಕ್ಕೆ ಬರಲಾಗದ ಹಿನ್ನೆಲೆಯಲ್ಲಿ ರಾಜೀವ ತಾರಾನಾಥರ ಮನೆಗೆ ಬಂದು ಸನ್ಮಾನಿಸುತ್ತಿದ್ದೇವೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಪಂಡಿತ್ ಇಂದೂಧರ ನಿರೋಡಿ, ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿ ಡಾ. ನಾಗೇಶ್ ವಿ.ಬೆಟ್ಟ ಕೋಟೆ, ಕುಲಸಚಿವ ಡಾ. ದೇವರಾಜ್, ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ ಬಸವರಾಜ ಪದ್ಮಶಾಲಿ, ಮೌಲ್ಯಮಾಪನ ಕುಲಸಚಿವ ಪ್ರೊ ವೀರನಗೌಡ ಬಿ.ಪಾಟೀಲ, ಸಿಂಡಿಕೇಟ್ ಸದಸ್ಯ ಶ್ರೀನಿವಾಸ ಶಾಸ್ತ್ರಿ, ಪ್ರೊ. ಶ್ರೀನಾಥ್, ಧ್ವನ್ಯಲೋಕದ ನಿರ್ದೇಶಕ ಪ್ರೊ. ಶ್ರೀನಾಥ್, ಲೇಖಕ ಪ್ರೊ. ಕೃಷ್ಣಮೂರ್ತಿ ಚಂದರ್, ಪ್ರೊ. ಕೃಷ್ಣಾ ಮನವಳ್ಳಿ, ಪತ್ರಕರ್ತ ಗಣೇಶ ಅಮೀನಗಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಿಜಿಎಸ್ ಬಿಇಡಿ ಕಾಲೇಜಿನ ವಿದ್ಯಾರ್ಥಿಗಳ ಕಲಾಂ–ಸಲಾಂ ವಸ್ತು ಪ್ರದರ್ಶನ

ಗಮನ ಸೆಳೆದ 'ಅಗ್ನಿಯ ರೆಕ್ಕೆಗಳು' ನಾಟಕ ಪ್ರದರ್ಶನ



ಮೈಸೂರಿನ ಬಿಜಿಎಸ್ ಬಿಇಡಿ ಕಾಲೇಜಿನಲ್ಲಿ 'ಕಲಾಂ–ಸಲಾಂ' ಕಾರ್ಯಕ್ರಮದಲ್ಲಿ ಡಾ.ಎಪಿಜೆ ಅಬ್ದುಲ್ ಕಲಾಂ ಅವರನ್ನು ಕುರಿತ ವಸ್ತು ಪ್ರದರ್ಶನವನ್ನು ಬಿಜಿಎಸ್ ವಿದ್ಯಾಪೀಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ವೀಕ್ಷಿಸಿದರು.

ಮೈಸೂರು, ಏ.27(ಆರ್‌ಕೆಬಿ)– ವಿಶ್ವದ ವಿಶಿಷ್ಟ ವ್ಯಕ್ತಿಗಳ ಮಧ್ಯೆ ಡಾ.ಎಪಿಜೆ ಅಬ್ದುಲ್ ಕಲಾಂ ಅವರು ಈ ದೇಶ ಕಂಡ ವಜ್ರ. ತಮಿಳುನಾಡಿನ ರಾಮೇಶ್ವರದವರಾದ ಕಲಾಂ ಅವರು ಭಾರತದ 11ನೇ ರಾಷ್ಟ್ರಪತಿಯಾಗಿದ್ದು ವಿಸ್ಮಯಕಾರಿ. ದೇಶದ ಮಿಸೈಲ್ ಮ್ಯಾನ್ ಎಂದು ಕರೆಯಲ್ಪಟ್ಟ ಅವರು, ದೇಶದ ಪ್ರತಿಯೊಬ್ಬ ಪ್ರಜೆಗೂ ಸ್ಫೂರ್ತಿಯಾದರು. ಸಂಪೂರ್ಣ ನಾಗರಿಕ ಮತ್ತು ಮಾನವತಾವಾದಿಯಾಗಿದ್ದ ಅವರು ಇಡೀ ಜೀವನ ಸಾಧನೆಯ ಸಂಕೇತವಾಯಿತು.

ಮೈಸೂರಿನ ಆದಿಚುಂಚನಗಿರಿ ರಸ್ತೆಯಲ್ಲಿರುವ ಬಿಜಿಎಸ್ ಬಿಇಡಿ ಕಾಲೇಜಿನಲ್ಲಿ ಬುಧವಾರ 'ಕಲಾಂ–ಸಲಾಂ' ಕಾರ್ಯಕ್ರಮದ ಮೂಲಕ ಅವರನ್ನು ಸ್ಮರಿಸಲಾಯಿತು. ಇದರ ಅಂಗವಾಗಿ ಕಾಲೇಜಿನ ವಿದ್ಯಾರ್ಥಿಗಳು ಕಲಾಂ ಅವರ ಬಾಲ್ಯ, ವಿದ್ಯಾರ್ಥಿ ಜೀವನ, ವಿಜ್ಞಾನಿ, ಮಾನವತಾವಾದಿ, ಮಾಸ್ಟರ್‌ಮೈಂಡ್, ರಾಷ್ಟ್ರಪತಿ, ಶಿಕ್ಷಣ ತಜ್ಞ, ವಾಗ್ಮಿ ಹೀಗೆ ಅವರ ವ್ಯಕ್ತಿತ್ವವನ್ನು ತೆರೆದಿಡುವ ಪ್ರಯತ್ನವಾಗಿ ರೂಪಿಸಿದ್ದ ವಸ್ತು ಪ್ರದರ್ಶನ ಗಮನ ಸೆಳೆಯಿತು.

ಶಿಕ್ಷಕರಿಗೆ ಆದರ್ಶಪ್ರಾಯರಾಗಿರುವ ಕಲಾಂ ಅವರ ಸಾಹಸಗಾಥೆಯನ್ನು ಆಧರಿಸಿದ 'ಅಗ್ನಿಯ ರೆಕ್ಕೆಗಳು' ಒಂದು ಗಂಟೆ ಅವಧಿಯ ನಾಟಕವನ್ನು ಕಾಲೇಜಿನ ದ್ವಿತೀಯ ವರ್ಷದ ಬಿಇಡಿ ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದರು. ಬಿ.ಶ್ರೇಯಸ್ ನಿರ್ದೇಶನದಲ್ಲಿ ನಾಗೇಶ್ ಕಂದೇಗಾಲ ಸಂಗೀತ ನಿರ್ದೇಶನದಲ್ಲಿ ನಾಟಕ ಎಲ್ಲರ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು.

ಬಿಜಿಎಸ್ ವಿದ್ಯಾಪೀಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕ ಸಿ.ಬಸವಲಿಂಗಯ್ಯ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಹಿರಿಯ ರಂಗಕರ್ಮಿ ಪ್ರೊ.ಎಚ್.ಎಸ್. ಉಮೇಶ್, ಕಾಲೇಜಿನ ಆಡಳಿತಾಧಿಕಾರಿ ಎಚ್.ಯಶೋಧಾ, ಪ್ರಾಂಶುಪಾಲ ಡಾ. ನಾಗರಾಜು ಇನ್ನಿತರರು ಉಪಸ್ಥಿತರಿದ್ದರು.

ದಕ್ಷಿಣ ಪದವೀಧರ ಕ್ಷೇತ್ರ: ಎಸ್‌ಡಿಪಿಐ ಅಭ್ಯರ್ಥಿಯಾಗಿ ರಫತ್‌ಖಾನ್ ಕಣಕ್ಕೆ



ಮೈಸೂರು, ಏ.27(ಆರ್‌ಕೆಬಿ)– ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳು ಜನಸಾಮಾನ್ಯರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದ್ದು, ಜನರ ಸಂಕಷ್ಟಗಳಿಗೆ ಆಡಳಿತ ಪಕ್ಷವಾಗಲೀ, ವಿರೋಧ ಪಕ್ಷವಾಗಲೀ ಸ್ಪಂದಿಸಿ ಕೆಲಸ ಮಾಡುತ್ತಿಲ್ಲ ಎಂದು ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಆರೋಪಿಸಿದೆ.

ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಬುಧವಾರ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹೀಗಾಗಿ ರಾಜಕೀಯ ಅಧಿಕಾರ, ಸಾಮಾಜಿಕ ಪಿಡುಗನ್ನು ಹೋಗಲಾಡಿಸುವ ಧ್ಯೇಯದೊಂದಿಗೆ ಪಕ್ಷವು ಮುಂಬರುವ ದಕ್ಷಿಣ ಪದವೀಧರ ಕ್ಷೇತ್ರದಿಂದ ರಫತ್‌ಖಾನ್ ಅವರನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಲು ನಿರ್ಧರಿಸಿದೆ ಎಂದು ತಿಳಿಸಿದರು. ರಫತ್‌ಖಾನ್ ಅನೇಕ ವರ್ಷಗಳಿಂದ ಸಾಮಾಜಿಕ ಸೇವೆಯಲ್ಲಿ ತೊಡಗಿ, ಎಲ್ಲ ವರ್ಗದ ಜನರ ಅಭಿವೃದ್ಧಿಗೆ ಪ್ರತ್ಯಕ್ಷ–ಪರೋಕ್ಷವಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಸರ್ಕಾರಿ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನ ವಿರೋಧಿ ನೀತಿಗಳ ವಿರುದ್ಧ ಹೋರಾಟಗಳನ್ನು ನಡೆಸಿದ್ದಾರೆ. ಪ್ರಜ್ಞಾವಂತ ಮತದಾರರು ರಫತ್ ಖಾನ್ ಅವರನ್ನು ಬೆಂಬಲಿಸಬೇಕು ಎಂದು ಅವರು ಮನವಿ ಮಾಡಿದರು.

ಅಭ್ಯರ್ಥಿ ರಫತ್‌ಖಾನ್ ಮಾತನಾಡಿ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಖಾಸಗೀಕರಣದಿಂದ ಸರ್ಕಾರಿ ಹುದ್ದೆಗಳು ನಷ್ಟವಾಗುತ್ತಿದೆ. ಇದರ ವಿರುದ್ಧ ಧ್ವನಿ ಎತ್ತುವುದು. ಲಂಚಮುಕ್ತ ಉದ್ಯೋಗ ಖಾತರಿಪಡಿಸುವುದು ನಮ್ಮ ಉದ್ದೇಶ. ರಾಜ್ಯದ ಎಲ್ಲ ವರ್ಗದ ಪದವೀಧರರ ಕ್ಷೇಮಾಭಿವೃದ್ಧಿಗಾಗಿ ಪದವೀಧರರ ಕ್ಷೇಮಾಭಿವೃದ್ಧಿ ನಿಗಮ ಸ್ಥಾಪನೆ, ನಿರುದ್ಯೋಗ ಸಮಸ್ಯೆ ನಿವಾರಿಸಲು ಸರ್ಕಾರಿ ಹಾಗೂ ಖಾಸಗಿ ಕಂಪನಿಗಳ ಜೊತೆ ಒಡಂಬಡಿಕೆ, ಪದವೀಧರರ ಮದುವೆ ಸಮಾರಂಭ ನಡೆಸಲು ತಾಲೂಕು ಮಟ್ಟದಲ್ಲಿ ಪದವೀಧರರ ಕಲ್ಯಾಣ ಮಂಟಪ ನಿರ್ಮಿಸಿ ಉಚಿತವಾಗಿ ನೀಡುವುದು ನಮ್ಮ ಪ್ರಣಾಳಿಕೆಯಲ್ಲಿದೆ ಎಂದರು. ಗೋಷ್ಠಿಯಲ್ಲಿ ಎಸ್‌ಡಿಪಿಐ ಹಿರಿಯ ಮುಖಂಡ ದೇವನೂರು ನಂಜಯ್ಯ, ಡಾ.ಪ್ರಮೀಳಾ ದೇವಿ, ಪಾಲಿಕೆ ಮಾಜಿ ಸದಸ್ಯ ಸ್ವಾಮಿ, ಅಮ್ಜದ್‌ಖಾನ್ ಉಪಸ್ಥಿತರಿದ್ದರು.

ಏ.30, ಅಂಬೇಡ್ಕರ್ ಜಯಂತಿ ಕಾರ್ಯಕ್ರಮ

ಮೈಸೂರು,ಏ.27(ಆರ್‌ಕೆಬಿ)–ಪರಿಶಿಷ್ಟ ಜಾತಿ ನಾಗರಿಕ ಕ್ಷೇಮಾಭಿವೃದ್ಧಿ ಸಂಘ,



ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆಗಳ ಸಹಯೋಗದಲ್ಲಿ ಏ.30ರಂದು ಸಂಜೆ 5.30 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಬಿ.ಬೋರಯ್ಯ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕುವೆಂಪುನಗರದ ಸಾಮ್ರಾಟ್ ಕಲ್ಯಾಣ ಮಂಟಪದಲ್ಲಿ ಕಾರ್ಯಕ್ರಮಕ್ಕೆ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಉದ್ಘಾಟಿಸುವರು. ಉರಿಲಿಂಗಿಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ, ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಭಾಗವಹಿಸುವರು. ಇದೇ ವೇಳೆ ಗೌರವ ಡಾಕ್ಟರೇಟ್ ಪುರಸ್ಕೃತರಾದ ಜನಪದ ಗಾಯಕ ಮಳವಳ್ಳಿ ಡಾ.ಮಹದೇವಸ್ವಾಮಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಚಿನ್ನದ ಪದಕ ಪಡೆದ ವಿ.ತೇಜಸ್ವಿನಿ ಹಾಗೂ ಮಹದೇವಸ್ವಾಮಿ ಅವರನ್ನು ಅಭಿನಂದಿಸಲಾಗುವುದು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಆರ್.ಟಿ.ಸಿದ್ದರಾಜು, ಹಿರಿಯಣ್ಣ, ಮಲ್ಲಿಕಾರ್ಜುನಸ್ವಾಮಿ, ಬ್ರಹ್ಮಾನಂದ ಉಪಸ್ಥಿತರಿದ್ದರು.

ಸಿದ್ಧಸಮಾಧಿ ಯೋಗ ಉಚಿತ ಪರಿಚಯ ಕಾರ್ಯಕ್ರಮ

ಮೈಸೂರು, ಏ.27– ಮೈಸೂರಿನ ಕುವೆಂಪು ನಗರದಲ್ಲಿರುವ ಋಷಿ ಸಂಸ್ಕೃತಿ ವಿದ್ಯಾಕೇಂದ್ರದಲ್ಲಿ ಸಿದ್ಧ ಸಮಾಧಿ ಯೋಗದ ಉಚಿತ ಪರಿಚಯ ಕಾರ್ಯಕ್ರಮವನ್ನು ಮೇ 1ರ ಸಂಜೆ 6.30ಕ್ಕೆ ಏರ್ಪಡಿಸಲಾಗಿದೆ. ಮೇ 2ರಿಂದ 14 ದಿನಗಳ ಸಿದ್ಧ ಸಮಾಧಿ ಯೋಗ ಶಿಬಿರ ಪ್ರಾರಂಭವಾಗಲಿದೆ. ಶಿಬಿರದಲ್ಲಿ ಪ್ರಾಣಾಯಾಮ, ಧ್ಯಾನ, ಆಹಾರ ಕ್ರಮ ಹಾಗೂ ವ್ಯಕ್ತಿತ್ವ ವಿಕಸನದ ಬಗ್ಗೆ ತರಬೇತಿ ನೀಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಉಚಿತ ಪರಿಚಯ ಕಾರ್ಯಕ್ರಮ ಏರ್ಪಡಿಸಿದೆ. ನೋಂದಣಿ ಹಾಗೂ ವಿವರಗಳಿಗೆ ಸಂಸ್ಥೆ ಧರ್ಮದರ್ಶಿ ರಮೇಶ್ ಚಂದ್ರ ಮೊ. 9448458050, ಪಿ.ಎ.ಮನೋಹರ್ 8618762110 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಜನ ಚೈತನ್ಯ ಫೌಂಡೇಷನ್ ವತಿಯಿಂದ ಇತ್ತೀಚೆಗೆ ಪುರಭವನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ 'ಭೀಮ ಚೈತನ್ಯ ಸಮಾರಂಭ' ಹಮ್ಮಿಕೊಳ್ಳಲಾಗಿತ್ತು. ಚಿತ್ರದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ನಿವೃತ್ತ ಪ್ರಾಧ್ಯಾಪಕ ಡಾ.ಎಂ.ಹೆಚ್.ರುದ್ರಮುನಿ, ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಎಸ್.ಉಮೇಶ್, ಹಿರಿಯ ವಕೀಲ ಎಂ.ದಾಸಪ್ಪ, ಫೌಂಡೇಷನ್‌ನ ಅಧ್ಯಕ್ಷ ಆರ್.ಲಕ್ಷ್ಮಣ್, ವಕೀಲರಾದ ಜಿ.ಎಸ್.ಶಿವಸ್ವಾಮಿ, ಉಮೇಶ್ ಇದ್ದಾರೆ.

'ಬೆಕ್ಕು–ಬಾವಿ' ನಾಟಕ ಪ್ರದರ್ಶನ

ಮೈಸೂರು,ಏ.27–ರಂಗಾಯಣದ ಭಾರತೀಯ ರಂಗ ವಿದ್ಯಾಲಯದ ವಿದ್ಯಾರ್ಥಿಗಳಿಂದ 'ಬೆಕ್ಕು–ಬಾವಿ' 2ನೇ ಚಾತುರ್ಮಾಸದ ನಾಟಕ ಪ್ರದರ್ಶನವನ್ನು ಏ.30 ಮತ್ತು ಮೇ 1ರಂದು ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ಏರ್ಪಡಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.04.2022 ಗುರುವಾರ, ಮಳೆ ನಕ್ಷತ್ರ : ಭರಣಿ 27.04.2022 ರಿಂದ 10.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ
ತಿಥಿ: ತ್ರಯೋದಶಿ, ನಕ್ಷತ್ರ: ಉಭಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ :** ಬೆಳಗ್ಗೆ 9.30ಕ್ಕೆ ಉದ್ಯಮಿಯಾಗು – ಉದ್ಯೋಗ ನೀಡು ಕಾರ್ಯಾಗಾರ, ಉಪಸ್ಥಿತರು : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಉದ್ಘಾಟನೆ : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಡಾ. ಮುರುಗೇಶ ಆರ್. ನಿರಾಣಿ, ಮುಖ್ಯ ಅತಿಥಿಗಳು : ಪೌರಾಡಳಿತ, ಸಣ್ಣ ಕೈಗಾರಿಕೆ, ಸಾರ್ವಜನಿಕ ಉದ್ದಿಮೆಗಳ ಸಚಿವ ಎಂ.ಟಿ.ಬಿ. ನಾಗರಾಜು, ಅಧ್ಯಕ್ಷತೆ : ಶಾಸಕ ಎಲ್. ನಾಗೇಂದ್ರ, ವಿಶೇಷ ಅತಿಥಿಗಳು : ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ವಿ. ಶ್ರೀನಿವಾಸ ಪ್ರಸಾದ್, ಪ್ರತಾಪ್‌ಸಿಂಹ, ಸುಮಲತಾ ಅಂಬರೀಶ್, ಮಧ್ಯಾಹ್ನ 3.30ಕ್ಕೆ ಕೈಗಾರಿಕಾ ಅದಾಲತ್, ಸ್ಥಳ: ಘಟಿಕೋತ್ಸವ ಭವನ (ಕೆಎಸ್‌ಒಯು), ಮಾನಸಗಂಗೋತ್ರಿ.

■ **ಅಥರ್ವ ಡೆಂಟಲ್ :** ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಎಸ್.ಎ.ರಾಮದಾಸ್, ಪಾಲಿಕೆ ಸದಸ್ಯ ಎಂ.ಸಿ. ರಮೇಶ್, ಆದಾಯ ಇಲಾಖೆ ಜಂಟಿ ಆಯುಕ್ತ ಚೇತನ್ ರಂಗಸ್ವಾಮಿ, ಸ್ಥಳ: ಎಂಐಜಿ, 20, ನೃಪತುಂಗ ರಸ್ತೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ–ಬಾನುಲಿ ಸರಣೀ, ಪ್ರಸ್ತುತಿ –ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಜಯಂತಿ ವಿ.ಭಟ್, ಅಮೃತಾ ನಿತಿನ್ ಶಾಸ್ತ್ರಿ, ವ್ಯಾಖ್ಯಾನ– ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ', 10.05 ಖೇಲೋ ಇಂಡಿಯಾ ಯೂನಿವರ್ಸಿಟಿ ಕ್ರೀಡಾಕೂಟದ ಬುಧವಾರದ ಆಟಗಳ ಅವತರಣಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ಅಮೃತಾ ವೆಂಕಟೇಶ್, ರೇಖಾ ವೆಂಕಟೇಶ್, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ, 4.00 ಹಳ್ಳಿ ಹಾಡು–ಶಂಕರೇಗೌಡ ಮತ್ತು ತಂಡ, 6.50 ಕೃಷಿರಂಗ–ಕಿಸಾನ್‌ವಾಣಿ, ಅರಿಸಿನ ಬೆಳೆಯಲ್ಲಿ ಸಮಗ್ರ ನಿರ್ವಹಣಾ ಕ್ರಮಗಳು ಕುರಿತು ಡಾ.ಎ.ಬಿ.ಮೋಹನ್‌ಕುಮಾರ್ ಅವರೊಡನೆ ಸಂದರ್ಶನ, 9.30 ಯುವವಾಣಿ–ಚರ್ಚೆ, "ಮಾಧ್ಯಮ ಮತ್ತು ಆನ್‌ಲೈನ್ ಶಿಕ್ಷಣದಲ್ಲಿ ಯುವಜನತೆಯ ಪಾತ್ರ.

■ **ಮೈಸೂರು ಶರಣ ಮಂಡಲಿ :** ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ, ಉದ್ಘಾಟನೆ : ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸನ್ಮಾನಿಸುವವರು : ಸರ್ಕಾರಿ ನೌಕರರ ಸಂಘದ ಮಾಜಿ ರಾಜ್ಯಾಧ್ಯಕ್ಷ ಹೆಚ್.ಕೆ.ರಾಮು, ಮುಖ್ಯ ಅತಿಥಿಗಳು : ಅಖಿಲ ಭಾರತ ವೀರಶೈವ ಮಹಾಸಭಾ ನಂಜನಗೂಡು ತಾಲೂಕು ಅಧ್ಯಕ್ಷ ಮಹದೇವಪ್ಪ, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಸಮಾಜ ಕಾರ್ಯ ಅಧ್ಯಯನ ವಿಭಾಗ, ಸಾಮಾಜಿಕ ನ್ಯಾಯ ವೇದಿಕೆ ಮತ್ತು ಸಾಮರಸ್ಯ ವೇದಿಕೆ :** ಡಾ. ಬಿ.ಆರ್. ಅಂಬೇಡ್ಕರ್‌ರವರ 131ನೇ ಜಯಂತ್ಯೋತ್ಸವದ ಪ್ರಯುಕ್ತ ವಿಶೇಷ ಉಪನ್ಯಾಸ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಉದ್ಘಾಟನೆ : ಸಾಮಾಜಿಕ ಕಾರ್ಯಕರ್ತ ವಾದಿರಾಜ್, ಉಪಸ್ಥಿತರು : ಸಮಾಜ ಕಾರ್ಯ ಅಧ್ಯಯನ ವಿಭಾಗದ ಅಧ್ಯಕ್ಷ ಡಾ. ಹೆಚ್.ಪಿ. ಜ್ಯೋತಿ, ಸಹ ಪ್ರಾಧ್ಯಾಪಕ ಡಾ. ಚಂದ್ರಮೌಳಿ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11.30ಕ್ಕೆ.

ಮೈಸೂರಿನ ಪ್ರಧಾನ ಸ್ಥಳದಲ್ಲಿ 38 ವರ್ಷದ ಹಿಂದೆ 10.26 ಎಕರೆ ಭೂಮಿ ಮಂಜೂರಾತಿಯಲ್ಲಿ ನಿಯಮ ಉಲ್ಲಂಘನೆ ಆರೋಪ

ಗೋಕುಲಂ ಕಲ್ಯಾಣ ಮಂಟಪ ಟ್ರಸ್ಟ್‌ಗೆ ಮುಡಾ ನೋಟಿಸ್

- ಮೂರು ದಿನದಲ್ಲಿ ಉತ್ತರಿಸಲು ಸೂಚನೆ: ಹೆಚ್ಚುವರಿ ಕಾಲಾವಕಾಶಕ್ಕೆ ಟ್ರಸ್ಟ್ ಕೋರಿಕೆ
- 1984ರಲ್ಲಿ ಕಲ್ಯಾಣ ಮಂಟಪ, ಧಾರ್ಮಿಕ ಚಟುವಟಿಕೆಗೆ 10.26 ಎಕರೆ ಜಾಗ ಮಂಜೂರು
- ಸದರಿ ಜಾಗ ಉದ್ಯಾನವನ, ತೋಟಗಾರಿಕೆಗೆ ಸೂಕ್ತ ಎಂದು ಅಭಿಪ್ರಾಯಪಟ್ಟಿದ್ದ ಸರ್ಕಾರ
- ಹಾಲಿ ಸದರಿ ಜಾಗದಲ್ಲಿ ಕಲ್ಯಾಣ ಮಂಟಪವಿದ್ದು ಉಳಿದ ಜಾಗ ಖಾಲಿ......ಖಾಲಿ.... ಬಿದ್ದಿದೆ
- ಈ ಆಸ್ತಿ ಮೌಲ್ಯ ಬರೋಬ್ಬರಿ 200 ಕೋಟಿಗೂ ಅಧಿಕ; 38 ವರ್ಷದ ನಂತರ ಮುಡಾ ಗಮನ





ಏನೆಲ್ಲಾ ಉಲ್ಲಂಘನೆ?
- 'ಮಂಜೂರು' ಬದಲು 'ಖರೀದಿ' ಎಂದು ನಮೂದು
- ಸ್ವತ್ತಿನ ಮೌಲೀಕರಣಕ್ಕಿಂತ ಕಡಿಮೆ ಮೊತ್ತ ಪಾವತಿ
- ನಿಯಮ ಪಾಲಿಸದಿರುವುದು
- ನೋಂದಣಿ ಆಗದೇ 'ಕರಾರಾಗಿಂಯೇ' ಉಳಿದಿರುವುದು
- ಬಲ್ಕ್ ಲ್ಯಾಂಡ್ ಮಂಜೂರು ನಿಯಮ ಉಲ್ಲಂಘನೆ

ಎಸ್.ಟಿ.ರವಿಕುಮಾರ್

ಮೈಸೂರು, ಏ.27– ಸಾರ್ವಜನಿಕರಿಗೆ ಅನುಕೂಲಕಾರಿ ಸೌಕರ್ಯಕ್ಕಾಗಿ ಸಿಐಟಿಬಿ (ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್) 38 ವರ್ಷದ ಹಿಂದೆ ಗೋಕುಲಂ ಕಲ್ಯಾಣ ಮಂಟಪ ಟ್ರಸ್ಟ್‌ಗೆ ಮಂಜೂರು ಮಾಡಿದ್ದ 10.26 ಎಕರೆ ಭೂಮಿ, ಮಂಜೂರಾತಿ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘನೆಯಾಗಿದೆ ಎಂದು ಆರೋಪಿಸಿ ಈಗ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನೋಟಿಸ್ ಜಾರಿ ಮಾಡಿದೆ.

2022ರ ಏ.13ರಂದು ಮೈಸೂರು ಯಾದವಗಿರಿಯ ಪರಮಹಂಸ ರಸ್ತೆ 3ನೇ ಮುಖ್ಯ ರಸ್ತೆಯಲ್ಲಿರುವ ಗೋಕುಲಂ ಕಲ್ಯಾಣ ಮಂಟಪ ಟ್ರಸ್ಟ್ ಅಧ್ಯಕ್ಷರಿಗೆ ವಿವರಣೆ ಕೋರಿ ನೋಟಿಸ್ ನೀಡಿರುವ ಮುಡಾ ಆಯುಕ್ತ ಡಾ. ಡಿ.ಬಿ.ನಟೇಶ್, ಮೂರು ದಿನದೊಳಗಾಗಿ ಲಿಖಿತ ಸಮಜಾಯಿಷಿ ನೀಡುವಂತೆ ತಿಳಿಸಿದ್ದಾರೆ.

ಕಲ್ಯಾಣ ಮಂಟಪ, ವಸತಿಗೃಹ ಮತ್ತು ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಮೈಸೂರು ತಾಲೂಕು, ಕಸಬಾ ಹೋಬಳಿ ಮಾರಗೌಡನಹಳ್ಳಿ ಗ್ರಾಮ (ಕೆಆರ್‌ಎಸ್ ರಸ್ತೆಯ ಇಎಸ್‌ಐ ಆಸ್ಪತ್ರೆ ಹಿಂಭಾಗ ಕಾಮಧೇನು ಕಲ್ಯಾಣ ಮಂಟಪ ಇರುವ ಜಾಗ)ದ ಸರ್ವೆ ನಂ. 7, 8 ಮತ್ತು 9ರಲ್ಲಿ ಬರುವ 11.6 ಎಕರೆ ಭೂಮಿಯನ್ನು ಮಂಜೂರು ಮಾಡಿಕೊಡುವಂತೆ ಗೋಕುಲಂ ಕಲ್ಯಾಣ ಮಂಟಪ ಟ್ರಸ್ಟ್ ಅಧ್ಯಕ್ಷರು 1984ರ ಜನವರಿ 23ರಂದು ಅಂದಿನ ಸಿಐಟಿಬಿ (ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್) ಅಧ್ಯಕ್ಷರಿಗೆ ಅರ್ಜಿ ಸಲ್ಲಿಸಿದ್ದರು.

ಕೇವಲ 2.26 ಲಕ್ಷ ರೂಗಳಿಗೆ: ಗೋಕುಲಂ ಕಲ್ಯಾಣ ಮಂಟಪ ಟ್ರಸ್ಟ್ ಅಧ್ಯಕ್ಷರ ಕೋರಿಕೆಯಂತೆ ಟ್ರಸ್ಟ್‌ಗೆ ಸದರಿ ಸರ್ವೆ ನಂಬರ್‌ನಲ್ಲಿ 10.26 ಎಕರೆ ಜಾಗ ಮಂಜೂರು ಮಾಡಲು 1984ರ ಫೆಬ್ರವರಿ 4ರಂದು ಸಿಐಟಿಬಿ ನಿರ್ಣಯಿಸಿ, 2 ವರ್ಷದೊಳಗಾಗಿ ಉದ್ದೇಶಿತ ಕಟ್ಟಡ ನಿರ್ಮಿಸುವಂತೆ ಷರತ್ತು ವಿಧಿಸಲಾಗಿತ್ತು. ಆ ಜಾಗವನ್ನು ಕೇವಲ 2,26,644 ರೂಗಳಿಗೆ ಖರೀದಿಗೆ ಕೊಡಲಾಗುತ್ತದೆ ಎಂದು ಉಲ್ಲೇಖಿಸಿ ಸಿಐಟಿಬಿ ಅಧ್ಯಕ್ಷರು ಟ್ರಸ್ಟ್‌ಗೆ ಹಿಂಬರಹ ನೀಡಿರುವುದು ಕಡತದ ಮಾಹಿತಿಯಿಂದ ದೃಢಪಟ್ಟಿದೆ.

ನೋಂದಣಿಯಾಗದ ಕರಾರು ಪತ್ರ: ಸಿಐಟಿಬಿಯಲ್ಲಿ 'ಮಂಜೂರು' ಎಂದು ನಿರ್ಣಯವಾಗಿದ್ದರೂ ಅಧ್ಯಕ್ಷರು 'ಖರೀದಿ' ಎಂದು ಹಿಂಬರಹ ನೀಡಿರುವುದು ನಿಯಮ ಉಲ್ಲಂಘನೆ ಎಂದಿರುವ ಮುಡಾ ಆಯುಕ್ತರು 1984ರ ಜುಲೈ 9ರಂದು ನೋಂದಣಿಯಾಗದ ಕರಾರು ಪತ್ರವನ್ನು 2.26 ಲಕ್ಷ ರೂ.ಗಳಿಗೆ ಟ್ರಸ್ಟ್‌ಗೆ ನೀಡಲಾಗಿದೆ. ಆ ಭೂಮಿಯನ್ನು ಕಲ್ಯಾಣ ಮಂಟಪ, ಶೈಕ್ಷಣಿಕ, ಧಾರ್ಮಿಕ ಉದ್ದೇಶಗಳಿಗೆ ಮಾತ್ರ ಬಳಸಬೇಕೆಂಬ ಷರತ್ತು ಪತ್ರಕ್ಕೆ ಅಂದಿನ ಸಿಐಟಿಬಿ ಅಧ್ಯಕ್ಷ ಬಿ.ಕೆ.ಪುಟ್ಟಯ್ಯ ಮತ್ತು ಟ್ರಸ್ಟ್ ಅಧ್ಯಕ್ಷರಾಗಿದ್ದ ಪ್ರೊ. ಪಿ.ಎಂ.ಚಿಕ್ಕಬೋರಯ್ಯ ಅವರು ಸಹಿ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಎಂಜಿಪಿ ರಿಟ್ ಪಿಟಿಷನ್: ಆ ಭೂಮಿ ಮಂಜೂರು ಸಂಬಂಧ ಮೈಸೂರು ಗ್ರಾಹಕರ ಪರಿಷತ್(ಎಂಜಿಪಿ) 2005ರಲ್ಲಿ ರಾಜ್ಯ ಹೈಕೋರ್ಟ್‌ಗೆ ಸಲ್ಲಿಸಿದ್ದ ರಿಟ್ ಪಿಟಿಷನ್‌ನಲ್ಲಿ ಪ್ರಾಧಿಕಾರದ ಆಯುಕ್ತರು ಸೂಕ್ತ ಕ್ರಮ ಕೈಗೊಳ್ಳುವಂತೆ 2006ರಲ್ಲಿ ಆದೇಶಿಸಲಾಗಿದೆ.

ಈ ಹಿಂದೆಯೂ ನೋಟಿಸ್: ನ್ಯಾಯಾಲಯದ ಆದೇಶದಂತೆ ಭೂಮಿ ಮಂಜೂರು ಷರತ್ತು ಉಲ್ಲಂಘನೆಯಾಗಿದ್ದು, ಸದರಿ ಭೂಮಿಯನ್ನು ಉದ್ದೇಶಕ್ಕೆ ಬಳಸದಿರುವುದರಿಂದ ಭೂಮಿಯನ್ನು ಹಿಂಪಡೆಯಬಾರದೇಕೇ ಎಂಬ ಕಾರಣ ಕೇಳಿ 2007ರಲ್ಲಿ ಮುಡಾ ಆಯುಕ್ತರು ನೀಡಿದ್ದ ನೋಟಿಸ್‌ಗೆ ಸಮಜಾಯಿಷಿ ನೀಡಿದ್ದ ಟ್ರಸ್ಟ್ ಅಧ್ಯಕ್ಷರು, ಸದರಿ ಸ್ವತ್ತಿಗೆ ಟ್ರಸ್ಟ್ ಸಂಪೂರ್ಣ ಮಾಲೀಕರಾಗಿದ್ದು, ಪ್ರಶ್ನಿಸಲು ಪ್ರಾಧಿಕಾರಕ್ಕೆ ಯಾವುದೇ ಹಕ್ಕಿಲ್ಲ ಎಂದು ಉತ್ತರಿಸಿದ್ದರು.

ಜಾಗ ವಶಪಡಿಸಿಕೊಳ್ಳಬಹುದೆಂದು ಅಭಿಪ್ರಾಯ: 'ಮಂಜೂರು' ಎಂದು ನಿರ್ಣಯಿಸಿರುವುದನ್ನು 'ಖರೀದಿ'ಗೆ ನೀಡಲಾಗಿದೆ ಎಂದಿರುವುದು ಮಂಡಳಿ ನಿರ್ಣಯಕ್ಕೆ ವಿರುದ್ಧವಾಗಿದ್ದು, ಉದ್ದೇಶವೂ ಉಲ್ಲಂಘನೆಯಾಗಿರುವುದರಿಂದ ನೋಟಿಸ್ ನೀಡಿ ಸದರಿ ಜಾಗವನ್ನು ಪ್ರಾಧಿಕಾರದ ಸುಪರ್ದಿಗೆ ಪಡೆಯಬಹುದೆಂದು ಮುಡಾ ವಕೀಲರು ಅಭಿಪ್ರಾಯಪಟ್ಟಿದ್ದಾರೆ.

ಯಾವುದೇ ಕ್ರಮವಿಲ್ಲ: ನಿಯಮಾವಳಿಯ ಸ್ಪಷ್ಟ ಉಲ್ಲಂಘನೆಯಾಗಿರುವುದು ದೃಢಪಟ್ಟಿದ್ದು, ಸರ್ಕಾರವೂ ಸಹ 2007ರಲ್ಲೇ ಸೂಕ್ತ ಕ್ರಮಕೈಗೊಳ್ಳುವಂತೆ ನಿರ್ದೇಶನ ನೀಡಿದ್ದಾಗ್ಯೂ ಮುಡಾ ಮೌನ ವಹಿಸಿದೆ. ಅಲ್ಲದೇ ಸರ್ಕಾರದ ಆದೇಶದ ವಿರುದ್ಧ ಟ್ರಸ್ಟ್‌ಗೆ **Bulk Land** ಅನ್ನು ಮಂಜೂರು ಮಾಡಲಾಗಿದ್ದು, ಹಣವನ್ನೂ ಸರಿಯಾಗಿ ಲೆಕ್ಕ ಹಾಕಿ ಪಾವತಿಸದಿರುವುದು ಕಂಡು ಬಂದಿದೆ.

ಉದ್ಯಾನವನ, ತೋಟಗಾರಿಕೆಗೆ ಮೀಸಲು: ಸದರಿ ಭೂಮಿ ತಗ್ಗು ಪ್ರದೇಶವಾಗಿದ್ದು, ಇದನ್ನು ಉದ್ಯಾನವನ ಮತ್ತು ತೋಟಗಾರಿಕೆ ಉದ್ದೇಶಕ್ಕೆ ಕಾಯ್ದಿರಿಸುವಂತೆಯೂ ಯಾವುದೇ ಸಂಸ್ಥೆಗಳಿಗೆ ಹಂಚಿಕೆ ಮಾಡಬಾರದೆಂದು 1984ರಲ್ಲೇ ಸರ್ಕಾರದ ಕಾರ್ಯದರ್ಶಿಗಳು ಸಿಐಟಿಬಿಗೆ ನಿರ್ದೇಶನ ನೀಡಿದ್ದರು. ಅಲ್ಲದೇ ಎಕರೆಗೆ 36,000 ರೂ.ಗಳಂತೆ 3,84,400 ರೂ. ಮೌಲೀಕರಣ ಮಾಡಬೇಕೆಂದು ನಿರ್ಧರಿಸಿದ್ದರೂ, ಕೇವಲ 2,26,644 ರೂ. ಗಳಿಗೆ ಲೆಕ್ಕ ಹಾಕಿ ಟ್ರಸ್ಟ್‌ನಿಂದ ಹಣ ಪಾವತಿಸಿಕೊಂಡಿರುವುದು ಕಂಡು ಬಂದಿದೆ.

ಕರಾರು ಮಾತ್ರ, ನೋಂದಣಿಯಾಗಿಲ್ಲ: ಗೋಕುಲಂ ಕಲ್ಯಾಣ ಮಂಟಪ ಟ್ರಸ್ಟ್‌ಗೆ ಕರಾರು ಪತ್ರ ನೀಡಲಾಗಿದೆಯೇ ಹೊರತು, ಈವರೆಗೂ ನೋಂದಣಿ ಮಾಡದಿರುವುದು ಸಿಎ ನಿವೇಶನಗಳ ಹಂಚಿಕೆ ನಿಯಮ ಉಲ್ಲಂಘನೆಯಾಗಿರುವುದರಿಂದ ಸದರಿ ಸ್ವತ್ತು ಅಕ್ರಮವಾಗಿ ಟ್ರಸ್ಟ್‌ನ ಸ್ವಾಧೀನದಲ್ಲಿದೆ. ಈ ಬಗ್ಗೆ 3 ದಿನದೊಳಗೆ ಲಿಖಿತ ಸಮಜಾಯಿಷಿ ನೀಡಬೇಕೆಂದು ಮುಡಾ ಆಯುಕ್ತರು ಏ.13ರಂದು ಕಾರಣ ಕೇಳಿ ನೋಟಿಸ್ ನೀಡಿದ್ದಾರೆ.

ನಿಯಮ ಉಲ್ಲಂಘಿಸಿಲ್ಲ, ಉತ್ತರ ನೀಡಲು ಕಾಲಾವಕಾಶ ಕೋರಿದ್ದೇನೆ



ಮೈಸೂರು, ಏ.27– ನಾವು ಭೂಮಿ ಮಂಜೂರಾತಿ ನಿಯಮಾವಳಿ ಹಾಗೂ ಷರತ್ತು ಉಲ್ಲಂಘನೆ ಮಾಡಿಲ್ಲ. ಮುಡಾ ಆಯುಕ್ತರು ನಮೂದಿಸಿರುವ ಎಲ್ಲಾ ಅಂಶಗಳಿಗೆ ಉತ್ತರ ನೀಡಲು ಕಾಲಾವಕಾಶ ಕೋರಿ, ನೋಟಿಸ್‌ನಲ್ಲಿ ತಿಳಿಸಿರುವಂತೆ ಮೂರು ದಿನದೊಳಗೆ ತಾವು ಪತ್ರ ಸಲ್ಲಿಸಿರುವುದಾಗಿ ಗೋಕುಲಂ ಕಲ್ಯಾಣ ಮಂಟಪ ಟ್ರಸ್ಟ್ ಹಾಲಿ ಅಧ್ಯಕ್ಷ ಪಿ.ವಿಶ್ವನಾಥ್ ತಿಳಿಸಿದ್ದಾರೆ.

ಈ ಹಿಂದಿನ ಸಿಐಟಿಬಿಯಿಂದ ಅಂದಿನ ನಿಯಮಾವಳಿ ಪ್ರಕಾರವೇ ಜಾಗ ನೀಡಲಾಗಿದೆ. ಷರತ್ತಿಗೆ ಒಳಪಟ್ಟಂತೆಯೇ ಉದ್ದೇಶಕ್ಕೆ ಬಳಸುತ್ತಿದ್ದೇವೆ. ಶೈಕ್ಷಣಿಕ ಸಂಸ್ಥೆ, ಕಟ್ಟಡ ನಿರ್ಮಿಸಲು ನಕ್ಷೆ ಅನುಮೋದನೆ ಕೋರಿರುವುದರಿಂದ ಮುಡಾ ಆಯುಕ್ತರು ಈ ರೀತಿ ನೋಟಿಸ್ ನೀಡಿದ್ದಾರೆ. ಒಂದು ವೇಳೆ ನಿಯಮ ಉಲ್ಲಂಘನೆಯಾಗಿದ್ದರೆ 38 ವರ್ಷಗಳಿಂದ ಏಕೆ ಕ್ರಮ ವಹಿಸಿಲ್ಲ? ಎಂದು ಪ್ರಶ್ನಿಸಿದ್ದಾರೆ.

ಅವರು 4 ಪುಟಗಳ ನೋಟಿಸ್‌ನಲ್ಲಿ ತಿಳಿಸಿರುವ ಅಂಶಗಳಿಗೆ 3 ದಿನದಲ್ಲಿ ಉತ್ತರಿಸಲು ಸಾಧ್ಯವಿಲ್ಲದಿರುವುದರಿಂದ ಹೆಚ್ಚುವರಿ ಕಾಲಾವಕಾಶ ಕೋರಿದ್ದೇವೆ ಎಂದು ಪಿ.ವಿಶ್ವನಾಥ್ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದರು.

ಮಂಜೂರಾತಿ ನಿಯಮ ಸ್ಪಷ್ಟ ಉಲ್ಲಂಘನೆಯಾಗಿದೆ



ಮೈಸೂರು, ಏ.27– ಸಾರ್ವಜನಿಕ ಉಪಯೋಗಕ್ಕಾಗಿ ನೀಡಲಾಗುವ ಭೂಮಿ ಮಂಜೂರಾತಿ ನಿಯಮದ ಸ್ಪಷ್ಟ ಉಲ್ಲಂಘನೆಯಾಗಿರುವುದು ಕಂಡುಬಂದಿರುವುದರಿಂದ ಗೋಕುಲಂ ಕಲ್ಯಾಣ ಮಂಟಪ ಟ್ರಸ್ಟ್‌ಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ ಎಂದು ಮುಡಾ ಆಯುಕ್ತ ಡಾ. ಡಿ.ಬಿ. ನಟೇಶ್ ಸ್ಪಷ್ಟಪಡಿಸಿದ್ದಾರೆ. 'ಮಂಜೂರು' ಬದಲು 'ಖರೀದಿ'ಗೆ ನೀಡಲಾಗಿದೆ ಎಂದಿರುವುದು, ಸ್ವತ್ತಿಗೆ ಮೌಲೀಕರಣ ಮಾಡುವಾಗ ಕಡಿಮೆ ಹಣ ಪಾವತಿಸಿರುವುದು, ಉದ್ದೇಶ ಈಡೇರಿಸದಿರುವುದು, ನೋಂದಣಿ ಮಾಡಿಸದಿರುವುದು, ಬಲ್ಕ್ ಲ್ಯಾಂಡ್ ಹಂಚಿಕೆ ನಿಯಮ ಉಲ್ಲಂಘನೆ ಸೇರಿದಂತೆ ಹಲವು ಲೋಪದೋಷ, ಅಕ್ರಮವಾಗಿರುವುದು ದಾಖಲೆಯಿಂದ ಕಂಡುಬಂದಿರುವುದರಿಂದ ಸಮಜಾಯಿಷಿ ಕೇಳಲಾಗಿದೆ ಎಂದು ತಿಳಿಸಿದರು.

ಕಣ್ಣಾಮುಚ್ಚಾಲೆಯಲ್ಲಿ ಖಾಲಿ ಐಸ್‌ಕ್ರೀಂ ಬಾಕ್ಸ್‌ನಲ್ಲಿ ಬಚ್ಚಿಟ್ಟುಕೊಂಡ

ಬಾಲಕಿಯರಿಬ್ಬರು ದುರ್ಮರಣ

- ನಂಜನಗೂಡಿನ ಮಸಗೆ ಗ್ರಾಮದಲ್ಲಿ ದುರಂತ
- ಐಸ್‌ಕ್ರೀಂ ಬಾಕ್ಸ್‌ನಲ್ಲಿ ಅಡಗಿದ್ದ ಜವರಾಯ



ಬಾಲಕಿಯರ ಬಲಿ ಪಡೆದ ಖಾಲಿ ಐಸ್‌ಕ್ರೀಮ್ ಬಾಕ್ಸ್.

ನಂಜನಗೂಡು,ಏ.27–ಕಣ್ಣಾಮುಚ್ಚಾಲೆ ಆಡುತ್ತಿದ್ದ ವೇಳೆ ಖಾಲಿ ಇದ್ದ ಐಸ್‌ಕ್ರೀಂ ಬಾಕ್ಸ್‌ನಲ್ಲಿ ಅವಿತುಕೊಂಡ ಇಬ್ಬರು ಬಾಲಕಿಯರು ಅದರ ಮುಚ್ಚಳ ಲಾಕ್ ಆಗಿದ್ದರಿಂದ ಉಸಿರುಗಟ್ಟಿ ಸಾವನ್ನಪ್ಪಿದ ದಾರುಣ ಘಟನೆ ನಂಜನಗೂಡು ತಾಲೂಕು ಮಸಗೆ ಗ್ರಾಮದಲ್ಲಿ ಬುಧವಾರ ಸಂಭವಿಸಿದೆ.

ಈ ಗ್ರಾಮದ ನಾಗರಾಜ ನಾಯಕ ಮತ್ತು ಚಿಕ್ಕದೇವಮ್ಮ ದಂಪತಿ ಪುತ್ರಿ ಭಾಗ್ಯ(12) ಹಾಗೂ ರಾಜನಾಯಕ ಮತ್ತು ಗೌರಮ್ಮ ದಂಪತಿ ಪುತ್ರಿ ಕಾವ್ಯ(7) ಮೃತಪಟ್ಟ ದುರ್ದೈವಿಗಳು. ತಗಡೂರು ಗ್ರಾಮದ ಹನುಮಂತ ನಾಯಕ ಎಂಬುವರು ಮಸಗೆ ಗ್ರಾಮದ ನಾಗರಾಜನಾಯಕ ಅವರ ಮನೆ ಮುಂದೆ ಐಸ್‌ಕ್ರೀಂ ವ್ಯಾಪಾರ ಮಾಡುತ್ತಿದ್ದರೆಂದು ಹೇಳಲಾಗಿದ್ದು, ಕಳೆದ ಸುಮಾರು 6 ತಿಂಗಳಿಂದ ವ್ಯಾಪಾರ ಸ್ಥಗಿತಗೊಂಡಿತ್ತು ಎನ್ನಲಾಗಿದೆ. ಹೀಗಾಗಿ ನಾಗರಾಜ ನಾಯಕ ಮನೆ ಮುಂದೆ ಐಸ್‌ಕ್ರೀಂ ಇಲ್ಲದ ಖಾಲಿ ಬಾಕ್ಸ್‌ಗಳು ಇದ್ದವು.

ಬೇಸಿಗೆ ರಜೆ ಹಿನ್ನೆಲೆಯಲ್ಲಿ ಬುಧವಾರ ಬೆಳಗ್ಗೆ 10 ಗಂಟೆ ಸುಮಾರಿನಲ್ಲಿ ಗ್ರಾಮದ ಬಾಲಕಿಯರು ಕಣ್ಣಾಮುಚ್ಚಾಲೆ ಆಟ ಆಡುತ್ತಿದ್ದರು. ಈ ವೇಳೆ ಭಾಗ್ಯ ಮತ್ತು ಕಾವ್ಯ ಐಸ್‌ಕ್ರೀಂ ಬಾಕ್ಸ್ ಒಳಗೆ ಬಚ್ಚಿಟ್ಟುಕೊಂಡು, ಅದರ ಮುಚ್ಚಳವನ್ನು ಮುಚ್ಚಿಕೊಂಡಿದ್ದಾರೆ. ಅದರ ಮುಚ್ಚಳ ಹಾಕುತ್ತಿದ್ದಂತೆ ಲಾಕ್ ಆಗಿದೆ. ಲಾಕ್ ಆದ ಐಸ್‌ಕ್ರೀಂ ಬಾಕ್ಸ್‌ನ ಮುಚ್ಚಳವನ್ನು ಒಳಗಿನಿಂದ ತೆರೆಯಲು ಸಾಧ್ಯವಿಲ್ಲ. ಅದನ್ನರಿಯದೇ ಒಳಗೆ ಬಚ್ಚಿಟುಕೊಂಡಿದ್ದ ಬಾಲಕಿಯರು ಮುಚ್ಚಳ ತೆಗೆಯಲು ಸಾಧ್ಯವಾಗದೇ ಉಸಿರುಗಟ್ಟಿ ಅಲ್ಲೇ ಸಾವನ್ನಪ್ಪಿದ್ದಾರೆ.

ಇವರ ಜೊತೆ ಆಟವಾಡುತ್ತಿದ್ದ ಇತರ ಬಾಲಕಿಯರು ಇವರಿಬ್ಬರನ್ನು ಕಾಣದೇ ಅವರವರ ಮನೆಗೆ ತೆರಳಿದರು ಎಂದು ಹೇಳಲಾಗಿದೆ. ಮಧ್ಯಾಹ್ನವಾದರೂ ಮಕ್ಕಳು ಬಾರದ ಕಾರಣ ಅವರ ಪೋಷಕರು ಗ್ರಾಮದಲ್ಲಿ ಹುಡುಕಾಡಿ, ಬಾಲಕಿಯರ ಗೆಳತಿಯರನ್ನು ವಿಚಾರಿಸಿದಾಗ ಇವರು ಕಣ್ಣಾಮುಚ್ಚಾಲೆ ಆಟವಾಡುತ್ತಿದ್ದುದು ತಿಳಿದು ಬಂದಿದೆ. ಎಲ್ಲಾ ಕಡೆ ಹುಡುಕಾಡಿ, ಕೊನೆಗೆ ಅನುಮಾನದ ಮೇರೆಗೆ ಮಧ್ಯಾಹ್ನ 1 ಗಂಟೆ ಸುಮಾರಿನಲ್ಲಿ ಐಸ್‌ಕ್ರೀಂ ಬಾಕ್ಸ್ ಮುಚ್ಚಳ ತೆರೆದು ನೋಡಿದಾಗ ಇಬ್ಬರೂ ಬಾಲಕಿಯರ ಮೃತದೇಹಗಳು ಪತ್ತೆಯಾಗಿವೆ.

ಮಕ್ಕಳನ್ನು ಕಳೆದುಕೊಂಡ ಪೋಷಕರು ಮತ್ತು ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ಕೊನೆಗೆ ಬಾಲಕಿಯರ ಅಂತ್ಯಸಂಸ್ಕಾರವನ್ನು ಗ್ರಾಮದಲ್ಲೇ ನೆರವೇರಿಸಿದ್ದಾರೆ. ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ನಂಜನಗೂಡು ಗ್ರಾಮಾಂತರ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಶಿವನಂಜ ಶೆಟ್ಟಿ, ಈ ಪ್ರಕರಣ ಕುರಿತು ನಮಗೆ ಅಧಿಕೃತವಾಗಿ ಯಾವುದೇ ವಿಚಾರ ತಿಳಿದಿಲ್ಲ. ಆದರೆ ಸಾಮಾಜಿಕ ಜಾಲತಾಣದ ಮೂಲಕ ವಿಷಯ ಗೊತ್ತಾಗಿದೆ. ಬಾಲಕಿಯರ ಅಂತ್ಯಸಂಸ್ಕಾರವೂ ಆಗಿದೆ ಎಂಬುದು ತಿಳಿದಿದೆ. ಈ ಸಂಬಂಧ ಯಾರೂ ಠಾಣೆಯಲ್ಲಿ ಇದುವರೆಗೂ ಪ್ರಕರಣ ದಾಖಲಿಸಿಲ್ಲ ಎಂದರು.

ಪತ್ರಿಕೆ ಪ್ರಿಂಟಿಂಗ್ ಪೇಪರ್‌ಗೆ ಜಿಎಸ್‌ಟಿ ವಿನಾಯಿತಿ ನೀಡಿ

ಕೇಂದ್ರಕ್ಕೆ ವಿಪಕ್ಷ ನಾಯಕ ಸಿದ್ದರಾಮಯ್ಯ ಒತ್ತಾಯ





ಬೆಂಗಳೂರು, ಏ. 27– ಪತ್ರಿಕೆಗಳ ಮುದ್ರಣ ಕಾಗದಕ್ಕೆ ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ)ಯಿಂದ ವಿನಾ ಯಿತಿ ನೀಡಬೇಕು ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿಯವರಿಗೆ ಪತ್ರ ಬರೆದಿರುವ ಸಿದ್ದರಾಮಯ್ಯ, ಮುದ್ರಣ ಕಾಗದದ ಮೇಲಿನ ಜಿಎಸ್‌ಟಿಯನ್ನು ತೆಗೆದು ಹಾಕಬೇಕು. ಭಾರತೀಯ ಪತ್ರಿಕೆಗಳ ರಿಜಿಸ್ಟ್ರಾರ್ (ಆರ್‌ಎನ್‌ಐ) ನೋಂದಾಯಿತ ಪತ್ರಿಕೆಗಳ ಹಿತದೃಷ್ಟಿಯಿಂದ ಮುದ್ರಣ ಕಾಗದದ ಮೇಲಿನ ಜಿಎಸ್‌ಟಿ ಹೊರೆಯನ್ನು ತಗ್ಗಿಸಬೇಕು ಎಂದು ಆಗ್ರಹಿಸಿದ್ದಾರೆ. ಸಿದ್ದರಾಮಯ್ಯ ಅವರ ಪ್ರಕಾರ, ಜಿಎಸ್‌ಟಿ ಜಾರಿಗೂ ಮುನ್ನ ಆರ್‌ಎನ್‌ಐ ನೋಂದಾಯಿತ ಪತ್ರಿಕೆಗಳ ಪ್ರಿಂಟಿಂಗ್ ಪೇಪರ್ ಮೇಲಿನ ತೆರಿಗೆ ಶೇ.3 ರಷ್ಟಿತ್ತು ಮತ್ತು ಜಿಎಸ್‌ಟಿ ವ್ಯವಸ್ಥೆಯಡಿ ಅದನ್ನು ಶೇ.5ಕ್ಕೆ ಹೆಚ್ಚಿಸಲಾಗಿದೆ. ಒಟ್ಟಾರೆ ಮುದ್ರಣ ಕಾಗದದ ಮೇಲಿನ ತೆರಿಗೆಯಲ್ಲಿ ಶೇ.68ರಷ್ಟು ಹೆಚ್ಚಳವಾಗಿದೆ ಎಂದಿದ್ದಾರೆ. ಕೊರೊನಾಗಿಂತ ಮೊದಲು ಪ್ರತಿ ಟನ್ ಕಾಗದದ ಬೆಲೆ 23,000 ಇತ್ತು. ಈಗ ಅದು 76 ರಿಂದ 84,000ಕ್ಕೆ ಏರಿಕೆ ಆಗಿದೆ. ಸರಾಸರಿ ಶೇ. 56 ರಷ್ಟು ಆಮದು, ಶೇ 44 ರಷ್ಟು ದೇಶೀಯ ಮುದ್ರಣ ಕಾಗದದ ದರ ಹೆಚ್ಚಿರುವುದು ಮುದ್ರಣ ಮಾಧ್ಯಮಕ್ಕೆ ದುಬಾರಿಯಾಗಿದ್ದು, ತೀವ್ರ ನಷ್ಟಕ್ಕೆ ಸಿಲುಕಿವೆ. ಈ ಕ್ಷೇತ್ರದ ರಕ್ಷಣೆ ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಸಿದ್ದರಾಮಯ್ಯ ಪತ್ರದಲ್ಲಿ ಹೇಳಿದ್ದಾರೆ.

ರಾಜ್ಯದಲ್ಲಿ ಕೊರೊನಾ ಹೆಚ್ಚಳ: 126 ಮಂದಿಗೆ ಪಾಸಿಟಿವ್

ಬೆಂಗಳೂರು, ಏ. 27– ರಾಜ್ಯದಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳ ಸಂಖ್ಯೆ ಮತ್ತೆ ಹೆಚ್ಚಾಗುತ್ತಿದ್ದು, ಕಳೆದ 24 ಗಂಟೆಯಲ್ಲಿ 126 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 39,47,209ಕ್ಕೆ ಏರಿಕೆಯಾಗಿದೆ.

ಇನ್ನೂ ರಾಜ್ಯದಲ್ಲಿ ಮಹಾಮಾರಿ ಕೊರೋನಾದಿಂದ ಇಂದು ಯಾವುದೇ ಸಾವು ವರದಿಯಾಗಿಲ್ಲ. ಹೀಗಾಗಿ ಸಾವಿನ ಸಂಖ್ಯೆ 40057 ಇದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಬೆಂಗಳೂರಿನಲ್ಲಿ ಇಂದು 114 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 17,82,195ಕ್ಕೆ ಏರಿಕೆಯಾಗಿದೆ. ಇಂದು ರಾಜಧಾನಿಯಲ್ಲೂ ಯಾವುದೇ ಕೊರೊನಾ ಸಾವು ವರದಿಯಾಗಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೇಳಿದೆ. ರಾಜ್ಯದಲ್ಲಿ ಇಂದು 99 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಇದರೊಂದಿಗೆ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ 39,05397ಕ್ಕೆ ಏರಿಕೆಯಾಗಿದೆ. ಇನ್ನು 1713 ಸಕ್ರಿಯ ಪ್ರಕರಣಗಳಿವೆ.

ಉಚಿತ ಕೈಗಾರಿಕಾ ತರಬೇತಿಗಾಗಿ ಅರ್ಜಿ ಆಹ್ವಾನ

ಮೈಸೂರು, ಏ.27– ಎನ್.ಎ.ಬಿ. ಅಂಧರ ಮತ್ತು ಕಿವುಡರ ಕೈಗಾರಿಕಾ ತರಬೇತಿ ಕೇಂದ್ರ ಒಂದು ವರ್ಷದ ಕೈಗಾರಿಕಾ ತರಬೇತಿಯನ್ನು ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಂಪೂರ್ಣ ಧನ ಸಹಾಯದಿಂದ ಉಚಿತವಾಗಿ ನೀಡುತ್ತಿದೆ.

ವಿವರಗಳಿಗಾಗಿ ಸಂಸ್ಥೆಯ ವ್ಯವಸ್ಥಾಪಕರನ್ನು ದೂ.ಸಂ: 0821–2514431 ಮೂಲಕ ಬೆಳಗ್ಗೆ 10 ರಿಂದ ಸಂಜೆ 5 ಗಂಟೆ ಒಳಗೆ ಸಂಪರ್ಕಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕಡೇ ದಿನಾಂಕ 09.06.2022.

ಸಹಾಯಕ ಪ್ರಾಧ್ಯಾಪಕರ ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ

ಕರ್ನಾಟಕ ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ನಾಗರಾಜ್ ಬಂಧನ

ಮೈಸೂರು,ಏ.27(ಆರ್‌ಕೆ)–ಸಹಾಯಕ ಪ್ರಾಧ್ಯಾಪಕರ ನೇಮಕಾತಿಗಾಗಿ ನಡೆದ ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ ಸಂಬಂಧ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಹಿರಿಯ ಭೂಗೋಳಶಾಸ್ತ್ರ ಪ್ರಾಧ್ಯಾಪಕ ಪ್ರೊ.ನಾಗರಾಜ್‌ರನ್ನು ಬೆಂಗಳೂರಿನ ಮಲ್ಲೇಶ್ವರಂ ಠಾಣೆ ಪೊಲೀಸರು ಮಂಗಳವಾರ ರಾತ್ರಿ ಬಂಧಿಸಿದ್ದಾರೆ.

ಈಗಾಗಲೇ ಬಂಧನವಾಗಿರುವ ಮೈಸೂರು ವಿಶ್ವವಿದ್ಯಾನಿಲಯದ ಭೂಗೋಳಶಾಸ್ತ್ರ ವಿಭಾಗದ ಅತಿಥಿ ಉಪನ್ಯಾಸಕಿ ಡಾ.ಸೌಮ್ಯ ನೀಡಿದ ಮಾಹಿತಿ ಮೇರೆಗೆ ಪ್ರೊ. ನಾಗರಾಜ್‌ರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿರುವ ಪೊಲೀಸರು, ಮತ್ತೊಂದೆಡೆ ಮೈಸೂರಿನ ಡಾ.ಸೌಮ್ಯ ಮನೆಯನ್ನು ಶೋಧಿಸಿ ಅಗತ್ಯ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಧಾರವಾಡ ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಉಸ್ತುವಾರಿ ಕಾರ್ಯ ನಿರ್ವಹಿಸುತ್ತಿದ್ದ ಪ್ರೊ. ನಾಗರಾಜ್ ಅವರಿಗೆ ಭೂಗೋಳಶಾಸ್ತ್ರ ವಿಷಯದ ಪ್ರಶ್ನೆಪತ್ರಿಕೆ ಸಿದ್ಧಪಡಿಸುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಜವಾಬ್ದಾರಿ ನೀಡಿತ್ತು. ಅದರಂತೆ ಪ್ರಶ್ನೆಗಳನ್ನು ಸಿದ್ಧಪಡಿಸಲು ತಮ್ಮ ವಿದ್ಯಾರ್ಥಿಯಾಗಿದ್ದ ಡಾ. ಸೌಮ್ಯಳಿಗೆ ಹೇಳಿದ್ದರು. ತಾನು ತಯಾರಿಸಿದ ಪ್ರಶ್ನೆಗಳನ್ನು ಡಾ. ಸೌಮ್ಯ, ಪರೀಕ್ಷೆ ಬರೆಯುತ್ತಿದ್ದ ತನ್ನ ಸ್ನೇಹಿತರಿಗೂ ಮೊಬೈಲ್ ವಾಟ್ಸಾಪ್‌ನಲ್ಲಿ ರವಾನಿಸಿದ್ದಳು. ಮತ್ತೊಂದೆಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಭೂಗೋಳಶಾಸ್ತ್ರ ಸಹಾಯಕ ಪ್ರಾಧ್ಯಾಪಕರೊಬ್ಬರನ್ನು ಮಲ್ಲೇಶ್ವರಂ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಬೇರೆಯವರ ವಾಟ್ಸಾಪ್‌ನಲ್ಲಿ ಬಂದ ಪ್ರಶ್ನೆಗಳನ್ನು ಅವರು ತಮಗೆ ಗೊತ್ತಿರುವ ಇಬ್ಬರಿಗೆ ಕಳುಹಿಸಿದ್ದರು ಎಂಬುದು ತನಿಖೆಯಿಂದ ತಿಳಿದು ಬಂದ ಹಿನ್ನೆಲೆಯಲ್ಲಿ ಸಹಾಯಕ ಪ್ರಾಧ್ಯಾಪಕನನ್ನು ವಶಕ್ಕೆ ಪಡೆದ ನಂತರ ಮೈಸೂರಿನ ಅವರ ಮನೆಯಲ್ಲೂ ಶೋಧನೆ ಮಾಡಲಾಯಿತು ಎಂದು ಮೂಲಗಳು ತಿಳಿಸಿವೆ.

ಡಾ.ಸೌಮ್ಯ ಅಮಾನತಿಗೆ ಶಿಫಾರಸು

ಮೈಸೂರು: ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಬಂಧಿತರಾಗಿರುವ ಮೈಸೂರು ವಿವಿ ಭೂಗೋಳ ಶಾಸ್ತ್ರ ಅತಿಥಿ ಉಪನ್ಯಾಸಕಿ ಡಾ.ಸೌಮ್ಯ ಅಮಾನತ್ತಿಗೆ ಶಿಫಾರಸು ಮಾಡಲಾಗಿದೆ ಎಂದು ಕುಲಸಚಿವ ಪ್ರೊ. ಆರ್.ಶಿವಪ್ಪ ತಿಳಿಸಿದ್ದಾರೆ.

ಈಗಾಗಲೇ ಕಾನೂನು ತಜ್ಞರ ಅಭಿಪ್ರಾಯ ಪಡೆದು ಕಾಯ್ದೆಗಳಡಿ ಇರುವ ನಿಯಮಗಳನ್ವಯ ಡಾ. ಸೌಮ್ಯರನ್ನು ಸೇವೆಯಿಂದ ಅಮಾನತುಪಡಿಸಬಹುದೆಂದು ಅಭಿಪ್ರಾಯಿಸಿ ಶಿಫಾರಸಿನೊಂದಿಗೆ ವರದಿಯ ಕಡತವನ್ನು ಕುಲಪತಿಗಳ ಅನುಮೋದನೆಗೆ ಕಳುಹಿಸಿದ್ದೇನೆ ಎಂದರು. ಕಡತ ಪರಿಶೀಲಿಸಿ ಕುಲಸಚಿವರು ನಾಳೆ(ಏ.28) ಅಮಾನತುಗೊಳಿಸಲು ತಮಗೆ ನಿರ್ದೇಶನ ನೀಡಬಹುದು. ಇಂತಹ ಗಂಭೀರ ಪ್ರಕರಣಗಳಲ್ಲಿ ತಕ್ಷಣವೇ ಅಗತ್ಯ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ರೈಲಿಗೆ ಸಿಲುಕಿ ಅಪರಿಚಿತ ಸಾವು

ಮೈಸೂರು, ಏ. 27– ನಂಜನಗೂಡು–ಕಡಕೊಳ ರೈಲು ನಿಲ್ದಾಣಗಳ ನಡುವೆ ತಿರುಪತಿ–ಚಾಮರಾಜನಗರ ಎಕ್ಸ್‌ಪ್ರೆಸ್ ರೈಲಿಗೆ ಸಿಲುಕಿ ಅಪರಿಚಿತನೋರ್ವ ಸಾವನ್ನಪ್ಪಿದ್ದಾರೆ. ಸುಮಾರು 30–40 ವರ್ಷ, 4.8 ಅಡಿ ಎತ್ತರ, ಬೂದು ಬಣ್ಣದ ರೆಡಿಮೇಡ್ ಟೀ ಶರ್ಟ್, ಹಸಿರು ಬಣ್ಣದ ಕಾಟನ್ ಪ್ಯಾಂಟ್, ಬೂದು ಬಣ್ಣದ ಎರಡು ಕಾಟನ್ ಗ್ಲೌಸ್ ಧರಿಸಿದ್ದಾರೆ. ವಾರಸುದಾರರು ಮೊಕದ್ದಮೆ ದಾಖಲಿಸಿಕೊಂಡು ತನಿಖೆ ನಡೆಸುತ್ತಿರುವ ರೈಲ್ವೆ ಪೊಲೀಸರನ್ನು ದೂ.: 0821–2516579 ಮೂಲಕ ಸಂಪರ್ಕಿಸಲು ಕೋರಲಾಗಿದೆ.


ನಕ್ಕರೆ ಅದೇ ಸ್ವರ್ಗ


ಆತ : "ನನ್ನಲ್ಲಿರುವ ದುಶ್ಚಟಗಳನ್ನೆಲ್ಲಾ ಬಿಟ್ಟರೆ ನಮ್ಮಪ್ಪ 10,000 ರೂಪಾಯಿ ಬಹುಮಾನ ಕೊಡ್ತಾರಂತೆ.

ಈತ : "ಹೌದೇ? ಪರವಾಗಿಲ್ಲ... ಆದರೂ ನೀನು ನಿನ್ನ ದುಶ್ಚಟಗಳನ್ನು ಬಿಟ್ಟಂತೆ ಕಾಣ್ತೋಲ್ಲ"

ಆತ : "ಇನ್ನೇನು ಮಾಡಲಿ ಹೇಳು. ದುಶ್ಚಟಗಳನ್ನು ತ್ಯಾಗ ಮಾಡಿದ ಬಳಿಕ ಆ ಹಣ ಇಟ್ಟುಕೊಂಡು ನಾನೇನು ಮಾಡಲಿ..."

ಮೈಸೂರು ಮಿತ್ರ

ಗುರುವಾರ, 28 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನಿಮ್ಮ ಅಭಿಪ್ರಾಯವೇನು ಎಂದು ಕೇಳದಿರುವ ಸಂದರ್ಭದಲ್ಲಿ ನೀವಾಗಿಯೇ ಮುಂದೆ ಹೋಗಿ ಅದನ್ನು ತಿಳಿಸಬಾರದು. –ಮೊರಾರ್ಜಿ ದೇಸಾಯಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಹಾಯೋನು ಒಬ್ಬ ಇದ್ರೆ ಕಾಯೋನು ಒಬ್ಬ ಇದ್ದಾನೆ

ನಿಮ್ಮ ಪತ್ರಗಳು

ಬಡತನ ಇಳಿಕೆ ಅಂಕಿ ಅಂಶಗಳು ಚರ್ಚಾಸ್ಪದ

ಮಾನ್ಯರೆ,

ದೇಶದಲ್ಲಿ ಬಡತನ ಇಳಿಕೆಯಾಗಿದೆ ಎಂಬ ಸುದ್ದಿ ವ್ಯಾಪಕವಾಗಿ ಮಾಧ್ಯಮಗಳಲ್ಲಿ ವರದಿಯಾಗಿದೆ. ವಿಶ್ವ ಬ್ಯಾಂಕಿನ ಸಂಶೋಧನಾ ವರದಿಯೊಂದು ಭಾರತದಲ್ಲಿ ಕಡು ಬಡವರ ಸಂಖ್ಯೆ ಶೇಕಡಾ 12.3 ರಷ್ಟು ಇಳಿಕೆಯಾಗಿದೆ ಎಂದು ಹೇಳಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿ ಸಹ ಭಾರತದಲ್ಲಿ ಕಡು ಬಡವರ ಸಂಖ್ಯೆ ಬಹುತೇಕ ಇಳಿಕೆಯಾಗಿದೆ ಎಂದು ಹೇಳಿದೆ. ಹೌದು, ಇರಬಹುದು, ಆದರೆ ಬಡತನವನ್ನು ನಿರ್ಧರಿಸುವ ನಿರ್ದಿಷ್ಟ ರೀತಿಯ ಮಾನದಂಡಗಳೇನು ಎಂಬುದು ಚರ್ಚಾಸ್ಪದ ವಿಚಾರ. ಬಡವರಲ್ಲೂ ಎರಡು ಗುಂಪು, ಒಂದು ಬಡವರು ಹಾಗೂ ಕಡು ಬಡವರು ಎಂದು ವಿಂಗಡಣೆ ಮಾಡಲಾಗಿದೆ.

ನಮ್ಮ ದೇಶದಲ್ಲಿ ಬಡತನದ ರೇಖೆಗಿಂತ ಕೆಳಗಿರುವವರಿಗೆ (ಬಿಪಿಎಲ್) ಉಚಿತ ಪಡಿತರ, ವೈದ್ಯಕೀಯ ಸೇವೆ, ಮುಂತಾದ ಹತ್ತು ಹಲವು ಸೌಲಭ್ಯಗಳು ಸಿಗುತ್ತದೆ. ಇದನ್ನು ಹೆಚ್ಚಾಗಿ ಉಳ್ಳವರೇ ದುರುಪಯೋಗ ಪಡಿಸಿಕೊಂಡಿದ್ದಾರೆ. ರಾಜ್ಯ ಸರ್ಕಾರ ಅನರ್ಹರು, ಸುಳ್ಳು ಮಾಹಿತಿ ನೀಡಿ ಪಡೆದುಕೊಂಡಿದ್ದ ಲಕ್ಷಾಂತರ ಬಿಪಿಲ್ ಕಾರ್ಡುಗಳನ್ನು ರದ್ದು ಪಡಿಸಿದ್ದು ಇಲ್ಲಿ ಉಲ್ಲೇಖಾರ್ಹ. ವಾಸ್ತವ ಪರಿಸ್ಥಿತಿ ಹೀಗಿರುವಾಗ ನಿಜವಾದ ಬಡವರ ಸಂಖ್ಯೆ ಹೇಗೆ ತಾನೇ ಗೊತ್ತಾಗುತ್ತದೆ? ಇದರ ಜೊತೆಗೆ ಅನ್ನ ಭಾಗ್ಯ, ಕ್ಷೀರ ಭಾಗ್ಯಗಳಂತಹ, ಹತ್ತು ಹಲವು ಯೋಜನೆಗಳು ಬಡತನವನ್ನು ಗಮನಾರ್ಹ ರೀತಿಯಲ್ಲಿ ಕಡಿಮೆಗೊಳಿಸಿರಬಹುದು. ಇದರ ವ್ಯತಿರಿಕ್ತ ಪರಿಣಾಮವೆಂದರೆ, ಸಾಮಾನ್ಯರಲ್ಲಿ ಅಥವಾ ಬಡವರಲ್ಲಿ ದುಡಿದು ತಿನ್ನುವ ಆಸಕ್ತಿ ಕಡಿಮೆಯಾಗಿರುವುದು. ಇದು ಕೆಲವರನ್ನು ವಿಶೇಷವಾಗಿ ಯುವ ಜನತೆಯನ್ನು ಹಾಗೂ ಮಕ್ಕಳನ್ನು ದುಷ್ಕೃತ್ಯಗಳನ್ನು ಎಸಗಲು ಪ್ರೇರಣೆ ನೀಡಿರಲಿಕ್ಕೂ ಸಾಧ್ಯ. ಎಲ್ಲಾ ಭಾಗ್ಯಗಳು ಮನೆಗೆ ಬಂದಾಗ, ದುಡಿಮೆಯಾದರೂ ಏತಕ್ಕೆ ಎಂಬ ಪ್ರಶ್ನೆ ಅನೇಕ ಬಡವರನ್ನು ಕಾಡಬಹುದು. ದೇಶದಲ್ಲಿ ಇಂದಿಗೂ ಅರೆಹೊಟ್ಟೆಯಲ್ಲಿ ಬದುಕುತ್ತಿರುವ ಕೋಟ್ಯಾಂತರ ಜನರಿದ್ದಾರೆ. ಅದು ಬೇರೆ ವಿಚಾರ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೆಚ್ಚು ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವ ಮೂಲಕ ಜನರನ್ನು ಸ್ವಾವಲಂಬಿ ಜೀವನದತ್ತ ಕರೆದೊಯ್ಯಬೇಕೇ ವಿನಹ ಭಾಗ್ಯಗಳ ಮೂಲಕ ಸೋಮಾರಿಗಳನ್ನಾಗಿ ಮಾಡಬಾರದು. ದುಡಿಯಲು ಚೈತನ್ಯ ಇಲ್ಲದವರಿಗೆ ಈ ಮಾತುಗಳು ಅನ್ವಯ ಆಗದು. ಕಡಿದರೆ, ನಾಲ್ಕು ಆಳಾಗುವಂತಹ ವ್ಯಕ್ತಿಗಳಿಗೆ ಏನೇನೂ ಕೆಲಸ ಇಲ್ಲದಿದ್ದರೆ ಹೇಗೆ? ಅದೇನೆ ಇರಲಿ, ಬಡತನದಿಂದ ಹೊರಬರುವುದು ಒಂದು ಗುಡ್ ನ್ಯೂಸ್. ಅದನ್ನು ಕೇಳಿ ಆನಂದಿಸೋಣ.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸುವಲ್ಲಿ ಸರ್ಕಾರ ವಿಫಲ

ಮಾನ್ಯರೆ,

ಕೆಎಎಸ್, ಎಫ್‌ಡಿಎ, ಎಸ್‌ಡಿಎ, ಪಿಎಸ್‌ಐ, ಪಿಸಿ, ಹಾಗೂ ಶಿಕ್ಷಕರ ನೇಮಕಾತಿ ಹುದ್ದೆಗಳೂ ಸೇರಿದಂತೆ ಸಿ ದರ್ಜೆಯ ವಿವಿಧ ಹುದ್ದೆಗಳ ನೇಮಕಾತಿ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸುವಲ್ಲಿ ಕರ್ನಾಟಕ ರಾಜ್ಯ ಸರ್ಕಾರ ವಿಫಲವಾಗಿದೆ. ಇದರಿಂದ ಪದವಿ ಹಾಗೂ ಸ್ನಾತಕೋತ್ತರ ಪದವಿಯ ನಂತರ ಬದುಕು ಕಟ್ಟಿಕೊಳ್ಳಲು ಗುರು ತೋರಿಸಿದ ಕಡೆಗೆ ಒಂದು ನಿರ್ದಿಷ್ಟ ಗುರಿ ಇಟ್ಟುಕೊಂಡು ಹಗಲಿರುಳೆನ್ನದೆ ವರ್ಷಾನುಗಟ್ಟಲೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕಷ್ಟಪಟ್ಟು ಓದಿ, ತಯಾರಾಗಿ ಚೆನ್ನಾಗಿ ಪರೀಕ್ಷೆ ಬರೆದ ನಂತರವೂ ಕಾಣದ ಕೈಗಳು ಪರೀಕ್ಷೆಗಳಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆಸಿ, ಅರ್ಹ ಅಭ್ಯರ್ಥಿಗಳು ಉತ್ತೀರ್ಣರಾಗದ ಹಾಗೆ ನೋಡಿಕೊಳ್ಳುತ್ತಾರೆ. ಇದರಿಂದ ಲಂಚ ಕೊಟ್ಟ ಅಭ್ಯರ್ಥಿಗಳು ಸುಲಭವಾಗಿ ಉತ್ತೀರ್ಣರಾಗಿ ಆಯ್ಕೆಯಾಗುತ್ತಾರೆ. ಹೀಗೆ ಆಯ್ಕೆಯಾದ ಅಭ್ಯರ್ಥಿಗಳಿಂದ ಸಮಾಜ ಏನನ್ನು ನಿರೀಕ್ಷಿಸಲು ಸಾಧ್ಯ? ಅವರೂ ಸಹ ಕೊಟ್ಟ ಹಣವನ್ನು ಹಿಂಪಡೆಯಲು ಭ್ರಷ್ಟಾಚಾರವನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಹೀಗಾಗಿ, ಸರ್ಕಾರ ಇನ್ನಾದರೂ ಎಚ್ಚೆತ್ತು, ಈಗಾಗಲೇ ವಿವಿಧ ಪರೀಕ್ಷೆಗಳಲ್ಲಿ ಅವ್ಯವಹಾರ ನಡೆಸಿ ಸಿಕ್ಕಿಬಿದ್ದಿರುವವರಿಗೆ ಕಠಿಣ ಶಿಕ್ಷೆ ವಿಧಿಸಿ ಅದು ಮತ್ತೊಬ್ಬರಿಗೆ ಪಾಠವಾದರೆ ಮಾತ್ರ ಅರ್ಹ ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಿದಂತಾಗುತ್ತದೆ. ಸರ್ಕಾರಕ್ಕೆ ಇದು ಸಾಧ್ಯವಾಗದಿದ್ದರೆ ವಿವಿಧ ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ಅರ್ಜಿ ಹಾಕಿಸಿಕೊಳ್ಳುವಾಗಲೇ ಇಂತಹ ಪರೀಕ್ಷೆಗೆ ಇಷ್ಟು ಲಕ್ಷ ಎಂದು ತಿಳಿಸಿಬಿಟ್ಟರೆ ಆರ್ಥಿಕವಾಗಿ ಶಕ್ತಿ ಇರುವವರು ಅರ್ಜಿ ಹಾಕುತ್ತಾರೆ. ಮಿಕ್ಕವರು ಅರ್ಜಿ ಹಾಕಿ ಪರೀಕ್ಷೆ ಬರೆದು ಸಮಯ ವ್ಯರ್ಥವಾಗುವುದನ್ನು ತಪ್ಪಿಸಿಕೊಂಡು ಸ್ವಂತ ದುಡಿಮೆಯಿಂದ ಬದುಕು ರೂಪಿಸಿಕೊಳ್ಳಲು ಸರ್ಕಾರ ಅನುಕೂಲ ಮಾಡಿಕೊಟ್ಟಂತಾಗುತ್ತದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ರಸ್ತೆ ಅಪಘಾತಕ್ಕೆ ಕಾರಣವೇನು!!

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ದಿನದಿಂದ ದಿನಕ್ಕೆ ರಸ್ತೆ ಅಪಘಾತಗಳಿಂದ ಜನರ ಸಾವು–ನೋವುಗಳು ಹೆಚ್ಚಾಗುತ್ತಿದ್ದು, ಆಧುನಿಕ ಒತ್ತಡದ ಬದುಕಿನಲ್ಲಿ ಸಿಲುಕಿರುವ ಜನರು ತಮ್ಮ ಅಮೂಲ್ಯ ಜೀವವನ್ನು ಕಳೆದುಕೊಳ್ಳುತ್ತಿದ್ದಾರೆ, ಮದ್ಯಪಾನದ ಅಮಲಿನಲ್ಲಿ ವಾಹನವನ್ನು ಚಲಾಯಿಸುವುದು, ತಾವು ತಲುಪುವ ಸ್ಥಳವನ್ನು ಅವಸರದಲ್ಲಿ ಬೇಗ ತಲುಪುವ ಧಾವಂತದಲ್ಲಿ ಅತಿ ವೇಗವಾಗಿ ವಾಹನಗಳನ್ನು ಚಲಾಯಿಸುವುದು, ಸಾರ್ವಜನಿಕರು ರಸ್ತೆಯ ಸಂಚಾರಿ ನಿಯಮಗಳನ್ನು ಸರಿಯಾಗಿ ಪಾಲಿಸದೇ ಇರುವುದು, ವಾಹನ ಚಲಾಯಿಸುವಾಗ ಏಕಾಗ್ರತೆಯಿಲ್ಲದೆ ಒತ್ತಡದ ಚಿಂತೆಯ ತೊಳಲಾಟದಲ್ಲಿ ತಮ್ಮನ್ನೇ ಮೈಮರೆತು ವಾಹನ ಚಲಾಯಿಸುವುದು, ನಿದ್ದೆಗೆಟ್ಟು ನಿದ್ದೆ ಮಂಪರಿನಲ್ಲಿ ವಾಹನಗಳನ್ನು ಚಲಾಯಿಸುವುದು, ಗುಂಡಿಬಿದ್ದ ರಸ್ತೆಗಳಲ್ಲಿ ತಾಳ್ಮೆಯಿಂದ ವಾಹನ ಚಲಾಯಿಸದೆ ಇರುವುದು, ಇತರೆ ವಾಹನವನ್ನು ಹಿಂದಿಕ್ಕುವ ಭರದಲ್ಲಿ ಮುಂದೆ ಬರುವ ವಾಹನಕ್ಕೆ ಡಿಕ್ಕಿ ಹೊಡೆಯುವುದು, ಮೊಬೈಲ್‌ನಲ್ಲಿ ಮಾತನಾಡುತ್ತಾ ವಾಹನಗಳನ್ನು ಚಲಾಯಿಸುವುದು, ಇತ್ತೀಚೆಗೆ ಚಾಲಕನ ಅಜಾಗರೂಕತೆಯಿಂದ ಹನೂರು ಹಾಗೂ ತುಮಕೂರಿನ ಪಾವಗಡದಲ್ಲಿ ನಡೆದ ಬಸ್ಸು ಅಪಘಾತ ಘಟನೆಯೇ ಇದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

ಅಪಘಾತಕ್ಕೆ ಒಳಗಾದ ಜನರು ಹಾಗೂ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು. ಆದ್ದರಿಂದ ಚಾಲಕರು ತಾಳ್ಮೆ, ಸಹನೆ, ಜಾಗರೂಕತೆ, ಏಕಾಗ್ರತೆ ಹಾಗೂ ಸಂಚಾರಿ ಸುರಕ್ಷತೆಯ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಿ ವಾಹನ ಚಲಾಯಿಸಿದರೆ ತಲುಪಬೇಕಾದ ಸ್ಥಳವನ್ನು ಸುರಕ್ಷಿತವಾಗಿ ತಲುಪಬಹುದು.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಶಿಕ್ಷಣ ಕ್ಷೇತ್ರಕ್ಕೆ ಅಪ್ಪಳಿಸಿದ ಕೋವಿಡ್ ಎಂಬ ಚಂಡಮಾರುತ

"ಆನ್‌ಲೈನ್ ಶಿಕ್ಷಣದ ಪ್ರಯೋಜನವನ್ನು ಪಡೆಯಬೇಕಾದರೆ ಅಂತರ್ಜಾಲ (ಇಂಟರ್‌ನೆಟ್) ಸೌಲಭ್ಯವನ್ನು ಹೊಂದಿರಬೇಕು. ಯೂನಿಸೆಫ್ ಮತ್ತು ಇಂಟರ್-ನ್ಯಾಷನಲ್ ಟೆಲಿಕಮ್ಯುನಿಕೇಷನ್ ಯೂನಿಯನ್ ಸಂಸ್ಥೆಗಳು ಜಂಟಿಯಾಗಿ ಹೊರತಂದಿರುವ ಒಂದು ವರದಿಯ ಪ್ರಕಾರ 3-17ನೇ ವಯೋ ಗುಂಪಿನಲ್ಲಿರುವ ಮೂರನೇ ಎರಡರಷ್ಟು ಮಕ್ಕಳ ಮನೆಗಳಲ್ಲಿ ಹಾಗೂ 15 ರಿಂದ 24 ನೇ ವಯೋಗುಂಪಿನಲ್ಲಿರುವವರ ಶೇಕಡಾ 63ರಷ್ಟು ಮನೆಗಳಲ್ಲಿ ಅಂತರ್ಜಾಲ ವ್ಯವಸ್ಥೆ ಇರುವುದಿಲ್ಲ. ಜಾಗತಿಕ ಮಟ್ಟದಲ್ಲೇ ಈ ಪರಿಸ್ಥಿತಿ ಇರುವಾಗ ಮೂಲಸೌಕರ್ಯಗಳ ತೀವ್ರ ಕೊರತೆಯನ್ನು ಎದುರಿಸುತ್ತಿರುವ ಸಮುದಾಯಗಳಲ್ಲಿ ಇನ್ನೆಷ್ಟು ಮಂದಿ ಆನ್‌ಲೈನ್ ಶಿಕ್ಷಣದಿಂದ ವಂಚಿತರಾಗಿರಬಹುದು ಎಂಬುದನ್ನು ಊಹೆ ಮಾಡಬಹುದಲ್ಲವೇ?

ಕೋವಿಡ್–19 ಎಂಬ ಮಹಾ ಪಿಡುಗು, ವಿಶ್ವವನ್ನು 2020ರಲ್ಲಿ ಆಕ್ರಮಣ ಮಾಡಿದಾಗ ಅದು ತಂದಿಟ್ಟ ಸಾವು–ನೋವುಗಳ ಸರಮಾಲೆಯ ಸುಳಿಯಲ್ಲಿ ಸಿಲುಕಿದ ಸರ್ಕಾರಗಳು ಹಾಗೂ ಇತರ ಸಾಮಾಜಿಕ ಸಂಸ್ಥೆಗಳಿಗೆ ಭವಿಷ್ಯದಲ್ಲಿ ಅದು ತಂದೊಡ್ಡಲಿರುವ ಆಘಾತಗಳ ಬಗ್ಗೆ ಸುಳಿವೂ ಇರಲಿಲ್ಲ ಅಥವಾ ಇದ್ದರೂ ಅದುತ್ತ ಗಮನಹರಿಸಲು ಸಮಯವಾಗಲಿ–ಸಂಪನ್ಮೂಲಗಳಾಗಲೀ ಲಭ್ಯವಿರಲಿಲ್ಲ. ಕೋವಿಡ್‌ನಿಂದ ಹೇಗೆ ತಪ್ಪಿಸಿಕೊಳ್ಳಬೇಕು ಎಂಬ ಚಿಂತೆಯೇ ಪ್ರಧಾನವಾಗಿದ್ದ ಆ ಕಾಲಘಟ್ಟದಲ್ಲಿ ನಮ್ಮ ಮುಂದೆ ಇದ್ದದ್ದು, ಶೈಕ್ಷಣಿಕ ಸಂಸ್ಥೆಗಳನ್ನು, ಉದ್ಯೋಗ ಸ್ಥಳಗಳನ್ನು, ಮನರಂಜನಾ ತಾಣಗಳನ್ನು, ಸಾರಿಗೆ ವ್ಯವಸ್ಥೆಯನ್ನು, ಮುಚ್ಚಿ ಬಿಡಬೇಕು ಎಂಬ ಕಾತುರತೆ. ಲಾಕ್‌ಡೌನ್ ಎಂಬುದೊಂದೇ ನಮಗಿದ್ದ ಮಾರ್ಗವಾದ್ದರಿಂದ ಅದನ್ನು ವಿಧಿಸದೆ ಬೇರೆ ದಾರಿಯೇ ಇರಲಿಲ್ಲ.

ಲಾಕ್‌ಡೌನ್ ತಂದ ಅತ್ಯಂತ ಆಘಾತಕಾರಿ ಪರಿಣಾಮಗಳಲ್ಲಿ ಒಂದು, ಶಿಕ್ಷಣ ಕ್ಷೇತ್ರ ಅನುಭವಿಸಿದ ನಷ್ಟಗಳು. ಇವುಗಳನ್ನು ಕೇವಲ ಅಂಕಿ–ಸಂಖ್ಯೆಗಳ ಆಯಾಮದಿಂದ ಅಳೆಯಲಾಗುವುದಿಲ್ಲ. ಶಿಕ್ಷಣ ಮತ್ತು ಮಾನವ ಬದುಕಿನ ಗುಣಮಟ್ಟಕ್ಕೆ, ಶಿಕ್ಷಣ ಸಂಸ್ಥೆಗಳನ್ನು ಮುಚ್ಚಿದ್ದು ಬಹು ದೊಡ್ಡ ಪೆಟ್ಟನ್ನು ನೀಡಿತು. ಸಾಮಾಜಿಕ–ಆರ್ಥಿಕ ಅಸಮಾನತೆಗಳಿಂದ ತುಂಬಿ ತುಳುಕುತ್ತಿರುವ ಈ ಸಮಾಜದಲ್ಲಿ ಶಿಕ್ಷಣ ಅನೇಕರಿಗೆ ಮೇಲ್ಮುಖ ಸಾಮಾಜಿಕ ಚಲನೆಯನ್ನು ಸಾಧಿಸುವ ಏಕೈಕ ಸಾಧನವಾಗಿತ್ತು. ಇದು ವಿಶೇಷವಾಗಿ ಅಭಿವೃದ್ಧಿಯ ಪಥದಲ್ಲಿ ನಿಧಾನವಾಗಿ ಚಲಿಸಲಾರಂಭಿಸುತ್ತಿರುವ ದೇಶಗಳಲ್ಲಿ ಮೊದಲನೆಯ ತಲೆಮಾರಿನ ವಿದ್ಯಾರ್ಥಿಗಳಿಗೆ, ಹೆಣ್ಣು ಮಕ್ಕಳಿಗೆ ಹಾಗೂ ಅಂಚಿನಿಂದ ಕೇಂದ್ರ ಸ್ಥಾನಕ್ಕೆ ಬರಲು ಯತ್ನಿಸುತ್ತಿರುವ ವರ್ಗಗಳಿಗೆ ಅನ್ವಯಿಸುತ್ತದೆ. ಶಾಲಾ–ಕಾಲೇಜುಗಳು ಮುಚ್ಚಿದಾಗ, ತರಗತಿಗಳಿಂದ ಬೋಧನೆ ಮತ್ತು ಕಲಿಕೆಯನ್ನು 'ವಿದ್ಯುನ್ಮಾನ' ಮಾಧ್ಯಮಕ್ಕೆ ವರ್ಗಾಯಿಸಿಬಿಟ್ಟರೆ ಆಯಿತು ಎಂದು ಬಹು ಸುಲಭವಾಗಿ ಸಂಬಂಧಪಟ್ಟ ವ್ಯವಸ್ಥೆ ಘೋಷಿಸಿ ಬಿಟ್ಟಿತು. ಇದನ್ನು ಬಿಟ್ಟರೆ ಶಿಕ್ಷಣ ಕ್ಷೇತ್ರಕ್ಕೆ ಬೇರೆ ದಾರಿ ಇರಲಿಲ್ಲವೆಂಬುದೂ ನಿಜ. ಆದರೆ ಈ ಆನ್‌ಲೈನ್ ಶಿಕ್ಷಣದಿಂದ ಪ್ರಯೋಜನವನ್ನು ಪಡೆದವರು ಯಾರು? ಹೀಗೆ ನೀಡಿದ ಶಿಕ್ಷಣದ ಗುಣಮಟ್ಟವಾದರೂ ಎಂತಹುದು? ಎಂಬ ಎರಡು ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುತ್ತಾ ಹೊರಟಾಗ ಶಿಕ್ಷಣ ಕ್ಷೇತ್ರಕ್ಕೆ ಅಪ್ಪಳಿಸಿರುವುದು ಒಂದು ಬೃಹತ್ ಚಂಡಮಾರುತ, ಅದು ಮಾಡಿರುವ ಹಾನಿಯನ್ನು ಸರಿಪಡಿಸುವುದು ಸರ್ಕಾರಗಳು ಮತ್ತು ನಾಗರಿಕ ಸಮಾಜ– ಇವೆರಡಕ್ಕೂ ಎಷ್ಟು ಕ್ಲಿಷ್ಟವಾದ ಸವಾಲು ಎನ್ನುವುದು ಅರ್ಥವಾಗುವುದು ಈ ಹಾನಿಯ ನಿಜ ಸ್ವರೂಪವನ್ನು ತಿಳಿದಾಗಲೇ.

ಆನ್‌ಲೈನ್ ಶಿಕ್ಷಣದ ಪ್ರಯೋಜನವನ್ನು ಪಡೆಯಬೇಕಾದರೆ ಅಂತರ್ಜಾಲ (ಇಂಟರ್‌ನೆಟ್) ಸೌಲಭ್ಯವನ್ನು ಹೊಂದಿರಬೇಕು. ಯೂನಿಸೆಫ್ ಮತ್ತು ಇಂಟರ್–ನ್ಯಾಷನಲ್ ಟೆಲಿಕಮ್ಯುನಿಕೇಷನ್ ಯೂನಿಯನ್ ಸಂಸ್ಥೆಗಳು ಜಂಟಿಯಾಗಿ ಹೊರತಂದಿರುವ ಒಂದು ವರದಿಯ ಪ್ರಕಾರ 3–17 ನೇ ವಯೋ ಗುಂಪಿನಲ್ಲಿರುವ ಮೂರನೇ ಎರಡರಷ್ಟು ಮಕ್ಕಳ ಮನೆಗಳಲ್ಲಿ ಹಾಗೂ 15 ರಿಂದ 24ನೇ ವಯೋಗುಂಪಿನಲ್ಲಿರುವವರ ಶೇಕಡಾ 63ರಷ್ಟು ಮನೆಗಳಲ್ಲಿ ಅಂತರ್ಜಾಲ ವ್ಯವಸ್ಥೆ ಇರುವುದಿಲ್ಲ. ಜಾಗತಿಕ ಮಟ್ಟದಲ್ಲೇ ಈ ಪರಿಸ್ಥಿತಿ ಇರುವಾಗ ಮೂಲಸೌಕರ್ಯಗಳ ತೀವ್ರ ಕೊರತೆಯನ್ನು ಎದುರಿಸುತ್ತಿರುವ ಸಮುದಾಯಗಳಲ್ಲಿ ಇನ್ನೆಷ್ಟು ಮಂದಿ ಆನ್‌ಲೈನ್ ಶಿಕ್ಷಣದಿಂದ ವಂಚಿತರಾಗಿರಬಹುದು ಎಂಬುದನ್ನು ಊಹೆ ಮಾಡಬಹುದಲ್ಲವೇ?



ಅಂತರ್ಜಾಲ ಸಂಪರ್ಕದಿಂದ ವಂಚಿತರಾದ ಮಕ್ಕಳು ಹಾಗೂ ಯುವ ಜನತೆ ಕಳೆದುಕೊಳ್ಳುವುದು ಕೇವಲ ಜ್ಞಾನಾರ್ಜನೆಯ ಅವಕಾಶವನ್ನಲ್ಲ, ಆಧುನಿಕ ಅರ್ಥ ವ್ಯವಸ್ಥೆಯಲ್ಲಿ ಭಾಗವಹಿಸುವ ಸೌಲಭ್ಯವನ್ನು ಕೂಡ ಎಂದು ಹೇಳಿರುವ ಈ ವರದಿ, ಈ ಕಾರಣಕ್ಕಾಗಿ ಅವರ ಇಡೀ ಭವಿಷ್ಯವೇ ಕಳೆದು ಹೋಗುತ್ತದೆ ಎಂಬ ಆಘಾತಕಾರಿ ಸತ್ಯವನ್ನು ನಮ್ಮ ಮುಂದೆ ತೆರೆದಿಡುತ್ತದೆ.

ಯೂನಿಸೆಫ್ ನೀಡಿರುವ ಅಂಕಿ–ಅಂಶಗಳ ಪ್ರಕಾರ ಶಾಲೆಗಳು ಮುಚ್ಚಿದ್ದರಿಂದ ನೂರು ಕೋಟಿಗೂ ಹೆಚ್ಚಿನ ಸಂಖ್ಯೆಯ ಮಕ್ಕಳು ಶೈಕ್ಷಣಿಕ ಹಿಂಬೀಳಿಕೆಯನ್ನು ಎದುರಿಸುತ್ತಿದ್ದಾರೆ. ಪರ್ಯಾಯ ಕಲಿಕಾ ಮಾರ್ಗವಾಗಿ ದೂರ ಸಂಪರ್ಕ ಮಾಧ್ಯಮಗಳ ಮೂಲಕ ಶಿಕ್ಷಣವನ್ನು ನೀಡಲು ಶಾಲೆಗಳು ಪ್ರಯತ್ನಿಸಿವೆ ನಿಜ, ಆದರೆ ಸಾಮಾಜಿಕ–ಆರ್ಥಿಕ ಅನುಕೂಲಗಳಿಂದ ವಂಚಿತವಾಗಿರುವ ಬಹುತೇಕ ಮಕ್ಕಳು ಕಂಪ್ಯೂಟರ್ ಹೊಂದಿರುವ ಮಾತಿರಲಿ, ತಮ್ಮ ಮನೆಗಳಲ್ಲಿ ಟಿ.ವಿ ಅಥವಾ ರೇಡಿಯೋ ಸೌಕರ್ಯಗಳನ್ನೂ ಹೊಂದಿಲ್ಲ. ಆದ್ದರಿಂದ ಅವರ ಜ್ಞಾನಾರ್ಜನೆಗೆ ದೊಡ್ಡ ಆಘಾತವಾಗಿದೆ. ಇವರಲ್ಲನೇಕರು ಶಾಲೆಗಳು ಮತ್ತೆ ತೆರೆದಾಗಲೂ ಮರು–ದಾಖಲಾತಿ ಆಗದಿರುವ ಸಾಧ್ಯತೆಗಳನ್ನು ತಳ್ಳಿಹಾಕುವ ಹಾಗಿಲ್ಲ.

ಜಾಗತಿಕವಾಗಿ ಶೇಕಡಾ 90 ದೇಶಗಳಲ್ಲಿ ವಿದ್ಯುನ್ಮಾನ ಮಾಧ್ಯಮಗಳನ್ನು ಬಳಸಿ ಶಿಕ್ಷಣವನ್ನು ನೀಡಲು ಪ್ರಯತ್ನಗಳನ್ನು ಮಾಡಲಾಯಿತು ಎಂಬುದು ಗಮನಾರ್ಹ. ಆದರೆ ಈ ಮಾಧ್ಯಮಗಳ ಲಭ್ಯತೆ ಮತ್ತು ಅವುಗಳನ್ನು ಬಳಸಿಕೊಳ್ಳಲು ಅಗತ್ಯವಾದ ಪರಿಕರಗಳನ್ನು ಕೊಳ್ಳುವ ಶಕ್ತಿ ಎಲ್ಲ ವರ್ಗಗಳ ವಿದ್ಯಾರ್ಥಿಗಳಿಗೆ ಇರಲಿಲ್ಲ ಎನ್ನುವುದು ಗಮನಿಸಬೇಕಾದ ವಿಷಯ. ಇಡೀ ವಿಶ್ವದಲ್ಲಿ ಶೇಕಡಾ 31ರಷ್ಟು ಮಕ್ಕಳನ್ನು (46.3 ಕೋಟಿ) ಬಾನುಲಿ ಅಥವಾ ಅಂತರ್ಜಾಲ ಸಾಧನಗಳಿಂದ ತಲುಪಲು ಸಾಧ್ಯವಿರಲಿಲ್ಲ. ಏಕೆಂದರೆ ಅವರ ಮನೆಗಳಲ್ಲಿ ಪೂರಕ ತಾಂತ್ರಿಕ ಸೌಲಭ್ಯಗಳು ಇರಲಿಲ್ಲ. ಆನ್‌ಲೈನ್ ಮೂಲಕ ತಲುಪಲು ಸಾಧ್ಯವಾಗಿದ್ದು ಕಾಲು ಭಾಗ ಶಾಲಾ ಮಕ್ಕಳನ್ನು ಮಾತ್ರ. ಯೂನಿಸೆಫ್ ಪ್ರಕಾರ, ಜಾಗತಿಕ ಮಟ್ಟದಲ್ಲಿ ಪ್ರತಿ 4 ವಿದ್ಯಾರ್ಥಿಗಳಲ್ಲಿ 3ರಷ್ಟು ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಮುಂದುವರೆಸಿಕೊಂಡು ಹೋಗುವಂಥ ಸೌಕರ್ಯಗಳು ಇರಲಿಲ್ಲ.

ಶಾಲಾ–ಕಾಲೇಜುಗಳ ದೀರ್ಘಕಾಲಿಕ ಮುಚ್ಚುವಿಕೆಯಿಂದಾಗಿ ಶಿಕ್ಷಣದ ಎಲ್ಲ ಹಂತಗಳಲ್ಲೂ ವಿದ್ಯಾರ್ಥಿಗಳ ಕಲಿಕಾ ಹಾಗೂ ಗ್ರಹಿಕಾ ಸಾಮರ್ಥ್ಯಗಳೇ ಕಡಿಮೆಯಾಗಿ ಬಿಟ್ಟಿವೆ. ಆನ್‌ಲೈನ್ ಬೋಧನೆಯಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನಡುವೆ ಮುಖಾಮುಖಿ ಸಂಪರ್ಕವಿಲ್ಲದಿದ್ದುದರಿಂದ ವಿದ್ಯಾರ್ಥಿಗಳ ಏಕಾಗ್ರತೆಗೆ ಒಂದೆಡೆ ಭಂಗ ಬಂದರೆ, ಮತ್ತೊಂದೆಡೆ ಅವರ ಚಲನವಲನಗಳನ್ನು ಗಮನಿಸಲು ಕೂಡಾ ಎಲ್ಲ ಸಂದರ್ಭಗಳಲ್ಲೂ ಸಾಧ್ಯವಾಗುತ್ತಿರಲಿಲ್ಲ. ಅನೇಕ ಸಂಸ್ಥೆಗಳಲ್ಲಿ ವಾಟ್ಸಾಪ್ ಮೂಲಕ 'ನೋಟ್ಸ್' ಅಥವಾ ಪರಾಮರ್ಶನ ಗ್ರಂಥಗಳ ಆಯ್ದ ಭಾಗಗಳನ್ನು ವಿದ್ಯಾರ್ಥಿಗಳಿಗೆ ವ್ಯವಸ್ಥಿತವಾಗಿ ಕಳುಹಿಸಲಾಗುತ್ತಿತ್ತು ಆದರೆ ಅವರು ಇವುಗಳನ್ನು ಎಷ್ಟರ ಮಟ್ಟಿಗೆ ಅರ್ಥ ಮಾಡಿಕೊಂಡರು? ಇದನ್ನು ಓದಿದಾಗ ಅವರ ಮನಸ್ಸಿನಲ್ಲಿ ಮೂಡಿ ಬಂದ ಅನುಮಾನಗಳನ್ನು ಪರಿಹಾರ ಮಾಡಿಕೊಳ್ಳುತ್ತಿದ್ದರೇ? ಅವರ ಕಲಿಕಾ ಮಟ್ಟಗಳನ್ನು ಹೇಗೆ ಪರಿಶೀಲನೆಗೆ ಒಳಪಡಿಸಲಾಯಿತು?– ಇವೇ ಮುಂತಾದ ಪ್ರಶ್ನೆಗಳಿಗೆ ಉತ್ತರಗಳೇ ಇಲ್ಲ. ಕಲಿಕೆ–ಬೋಧನೆ–ಪರೀಕ್ಷೆ ಅನೇಕ ಸಂಸ್ಥೆಗಳಲ್ಲಿ ತೀರಾ ಯಾಂತ್ರಿಕವಾಗಿ ನಡೆದು, ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಸಾಮರ್ಥ್ಯಕ್ಕೆ ಧಕ್ಕೆ ಉಂಟಾಗಿದ್ದು, ಶಿಕ್ಷಣ ಕ್ಷೇತ್ರ ಕಂಡ ಅತೀ ಗಂಭೀರ ನಕಾರಾತ್ಮಕ ಪರಿಣಾಮಗಳಲ್ಲಿ ಒಂದು.

ಕೋವಿಡ್ ಪ್ರಯುಕ್ತ ಶಾಲೆಗಳು ಮುಚ್ಚಿದ್ದರ ಪರಿಣಾಮಗಳೇನೂ ಏಕಪ್ರಕಾರವಾಗಿರಲಿಲ್ಲ. ಈ ಪರಿಣಾಮಗಳನ್ನು ಮೂರು ಪ್ರಮುಖ ವಿಭಾಗಗಳಾಗಿ ವಿಂಗಡಿಸಬಹುದಾಗಿತ್ತು. ಮೊದಲನೆಯದು, ಸಣ್ಣ ವಯಸ್ಸಿನ ಮಕ್ಕಳಿಗೆ, ಮೇಲಿನ ತರಗತಿಗಳಲ್ಲಿದ್ದ ಮಕ್ಕಳಿಗಿಂತ ಹೆಚ್ಚು ಕಲಿಕಾ ಹಿನ್ನಡೆ ಆಯಿತು. ಏಕೆಂದರೆ ಆಗಷ್ಟೇ ಶಾಲೆಗಳಿಗೆ ಹೋಗಿ ಹೊಸ–ಹೊಸ ಭಾಷೆಗಳು ಅಥವಾ ವಿಷಯಗಳನ್ನೂ ಕಲಿಯಲಾರಂಭಿಸಿದ್ದ ಮಕ್ಕಳು ಶಾಲೆಯಿಂದ ದೂರ ಉಳಿದಾಗ ಅವರ ಕಲಿಕಾ ವಲಯವೇ ಕುಗ್ಗಿತು. ಎರಡನೆಯದಾಗಿ, ಸಾಮಾಜಿಕ–ಆರ್ಥಿಕ ಶ್ರೇಣಿಯಲ್ಲಿ ಕೆಳ ಸ್ತರದಲ್ಲಿರುವ ವರ್ಗ ಹಿನ್ನೆಲೆಯಿಂದ ಬಂದ ಮಕ್ಕಳು ಮನೆಗಳಲ್ಲಿ ಪೂರಕ ವಾತಾವರಣವನ್ನು ಹೊಂದದಿದ್ದ ಕಾರಣ ಅವರು ಅನುಕೂಲ ಸ್ಥಿತಿಗಳಲ್ಲಿದ್ದ ಕುಟುಂಬಗಳಲ್ಲಿ ದೊರೆಯುತ್ತಿದ್ದ ಬೆಂಬಲದಿಂದ ವಂಚಿತರಾದರು. ಮೂರನೆಯದಾಗಿ, ಶೈಕ್ಷಣಿಕ ಸಾಧನೆಯ ಮಟ್ಟ ಕಡಿಮೆಯಿದ್ದ ಮಕ್ಕಳು ಶಾಲೆಗಳಿಗೆ ಹೋಗುವುದನ್ನೇ ನಿಲ್ಲಿಸಿದಾಗ ಅವರಿಗೆ ಸ್ನೇಹಿತರು ಮತ್ತು ಅಧ್ಯಾಪಕರಿಂದ ದೊರೆಯುತ್ತಿದ್ದ ನೆರವು ಕೂಡಾ ನಿಂತುಹೋಯಿತು.

ಕೋವಿಡ್ ಶಿಕ್ಷಣ ಕ್ಷೇತ್ರಕ್ಕೆ ಉಂಟು ಮಾಡಿರುವ ಅತೀ ದೊಡ್ಡ ಆಘಾತವನ್ನು ಎದುರಿಸಲು ನಾವು ಮಾಡಬಹುದಾದದ್ದು ಏನು ಎನ್ನುವ ಪ್ರಶ್ನೆಯನ್ನು ಎತ್ತಿ ಸಮಾಜದ ಅನುಕೂಲಕಾರಿ ವರ್ಗಗಳಲ್ಲಿರುವ ಪ್ರಜ್ಞಾವಂತರು ಕಾರ್ಯನಿರತರಾಗಬೇಕಾದ ಸಮಯ ಇದೀಗ ಬಂದಿದೆ. ಮೊದಲಿಗೆ ಶಾಲೆಗಳಿಗೆ ದಾಖಲು ಆಗದಿದ್ದ ಹಾಗೂ ಶಾಲೆಗಳಿಂದ ಹೊರಗುಳಿಯಬೇಕಾದಂತಹ ಪರಿಸ್ಥಿತಿಗೆ ತಳ್ಳಲ್ಪಟ್ಟ ಎಲ್ಲ ಮಕ್ಕಳನ್ನೂ ಶಾಲೆಗಳತ್ತ ಕರೆತರಬೇಕು. ಇದಕ್ಕೆ ನೆರೆಹೊರೆಯ ಮಟ್ಟದಿಂದ ಹಿಡಿದು, ಹಳ್ಳಿ–ಹಳ್ಳಿಗಳಲ್ಲಿ, ವಿವಿಧ ಜಿಲ್ಲೆಗಳಲ್ಲಿ ಹಾಗೂ ರಾಜ್ಯ–ರಾಷ್ಟ್ರಗಳ ಮಟ್ಟದಲ್ಲಿ ನಾವು ಕಾರ್ಯಪ್ರವೃತ್ತರಾಗಬೇಕು. ಈ ಕೆಲಸದಲ್ಲಿ ಖಾಸಗಿ ಉದ್ದಿಮೆಗಳು, ಉಳ್ಳವರು ಹಾಗೂ ಬಂಡವಾಳಶಾಹಿ ವಲಯ ಕೈ ಜೋಡಿಸಬೇಕಾಗಿದೆ. ಕಳೆದುಹೋದ ಶಾಲಾ –ಕಾಲೇಜು ಸಮಯವನ್ನು ವಿದ್ಯಾರ್ಥಿಗಳಿಗೆ ಹಿಂದಿರುಗಿಸಲು, ಪೋಷಕರು, ಅಧ್ಯಾಪಕರು, ಸರ್ಕಾರಿ ಸಂಸ್ಥೆಗಳು, ಹಿರಿಯ ವಿದ್ಯಾರ್ಥಿ ಸಂಘಗಳು ಹಾಗೂ ಇಡೀ ನಾಗರಿಕ ವಲಯ ತಮ್ಮ ಸಮಯವನ್ನು ನೀಡಬೇಕು. ಎಲ್ಲಕ್ಕಿಂತ ಮಿಗಿಲಾಗಿ, ಭೌತಿಕ, ತಾಂತ್ರಿಕ ಮತ್ತು ಮಾನವ ಸಂಪನ್ಮೂಲಗಳನ್ನು ಅಧಿಕವಾಗಿ ಹೊಂದಿರುವ ಖಾಸಗಿ ಶಿಕ್ಷಣ ಸಂಸ್ಥೆಗಳು, ಇವುಗಳನ್ನು ಸಮಾಜದ ಅನುಕೂಲಗಳಿಂದ ವಂಚಿತರಾದವರೊಡನೆ ಹಂಚಿಕೊಳ್ಳಬೇಕು. ಕೋವಿಡ್ ಸೃಷಿಸಿರುವ ಶೈಕ್ಷಣಿಕ ಶೂನ್ಯ ಪರಿಸ್ಥಿತಿಯಿಂದ ಹೊರಬರಬೇಕಾದರೆ ಅರಿವು– ಆಸರೆ –ಆರೋಗ್ಯ– ಆಶ್ರಯ ಈ ನಾಲ್ಕು ಕ್ಷೇತ್ರಗಳಲ್ಲೂ ಪುನರ್ ನಿರ್ಮಾಣ ಕಾರ್ಯಗಳು ಸಮರೋಪಾದಿಯಲ್ಲಿ ನಡೆಯಬೇಕಾಗಿದೆ.

ಜೂ.21, ಮೈಸೂರಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ

ಪ್ರಧಾನಿ ಮೋದಿಗೆ ಸಂಸದ ಸಿಂಹ ಆಹ್ವಾನ

ನಾಳೆ ಕೇಂದ್ರ ಆಯುಷ್ ಮಂತ್ರಾಲಯ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ




ಮೈಸೂರು, ಏ.27(ಆರ್‌ಕೆಬಿ)– ಮೈಸೂರಿನಲ್ಲಿ ಜೂ.21ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಹಿಂದಿನ ಗಿನ್ನಿಸ್ ದಾಖಲೆಯನ್ನು ಮುರಿಯಲು ನಿರ್ಧರಿಸಲಾಗಿದ್ದು, ಈ ಕಾರ್ಯಕ್ರಮಕ್ಕೆ ಆಗಮಿಸುವಂತೆ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರು ಕುಟುಂಬ ಸಮೇತರಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಆಹ್ವಾನ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಆಯುಷ್ ಸಚಿವಾಲಯದ ಕಾರ್ಯದರ್ಶಿ ಹಾಗೂ ಜಂಟಿ ಕಾರ್ಯದರ್ಶಿಗಳನ್ನು ಒಳಗೊಂಡ ನಿಂಯೋಗವು ಏ.29ರಂದು ಮೈಸೂರಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಲಿದೆ.

ಯೋಗದ ಜನ್ಮ ಸ್ಥಳವೂ ಆಗಿರುವ ಐತಿಹಾಸಿಕ ಮೈಸೂರು ನಗರ, ಪ್ರಮುಖ ಯೋಗ ಕೇಂದ್ರವೂ ಆಗಿದೆ. ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆರಂಭವಾದಾಗಿನಿಂದ ಮೈಸೂರಿನಲ್ಲಿ ಎಲ್ಲಾ ವರ್ಗಗಳ ಸಹಸ್ರಾರು ಜನರನ್ನು ಯೋಗಕ್ಕೆ ಸಜ್ಜುಗೊಳಿಸುವ ಮೂಲಕ ಯೋಗ ದಿನವನ್ನು ವಿಭಿನ್ನ ರೀತಿಯಲ್ಲಿ ಆಚರಿಸುತ್ತಾ ಬರಲಾಗಿದೆ. 2017 ರಲ್ಲಿ 55,506 ಕ್ಕೂ ಹೆಚ್ಚು ಜನರು ಯೋಗದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಮೈಸೂರು ವಿಶ್ವ ದಾಖಲೆಯನ್ನು ನಿರ್ಮಿಸಿದೆ ಎಂದು ಹೇಳಲು ಸಂತೋಷವಾಗುತ್ತದೆ.

ಈ ಯಶಸ್ಸು ದೇಶದ ಪ್ರಧಾನಿಗಳಿಗೆ ಸಲ್ಲಬೇಕು. ನಂತರ, 2018 ರಲ್ಲಿ, ರಾಜಸ್ಥಾನದ ಕೋಟಾದಲ್ಲಿ, 1,00,984 ಜನರು ಯೋಗದ ಅಂತಾರಾಷ್ಟ್ರೀಯ ದಿನವನ್ನು ವೀಕ್ಷಿಸಿದಾಗ ಒಂದು ಹೊಸ ವಿಶ್ವ ದಾಖಲೆಯನ್ನು ಸಾಧಿಸಲಾಯಿತು. ಹಾಗಾಗಿ ಮೈಸೂರು ಜಿಲ್ಲಾಡಳಿತ, ನೆಹರು ಯುವ ಕೇಂದ್ರ, ಯೋಗ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಈ ಕಾರ್ಯಕ್ರಮಕ್ಕೆ ಸಹಕರಿಸಿವೆ. ಅಂತೆಯೇ ಈ ವರ್ಷ 1,10,000ಕ್ಕೂ ಹೆಚ್ಚು ಜನರನ್ನು ಅಂತಾರಾಷ್ಟ್ರೀಯ ಯೋಗೋತ್ಸವಕ್ಕೆ ಸಜ್ಜುಗೊಳಿಸುವ ಮೂಲಕ ಹಿಂದಿನ ಗಿನ್ನಿಸ್ ದಾಖಲೆಯನ್ನು ಮುರಿಯಲು ನಾವು ಸಂಪೂರ್ಣ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕಾಗಿ ತಾವು ಆಗಮಿಸುವಂತೆ ಪ್ರತಾಪ್‌ಸಿಂಹ ಅವರು ಪ್ರಧಾನಿ ನರೇಂದ್ರ ಮೋದಿ ಅವರಲ್ಲಿ ವಿನಂತಿಸಿಕೊಂಡಿದ್ದಾರೆ.

ಹೀಗಾಗಿ ಆಯುಷ್ ಮಂತ್ರಾಲಯದ ಜಂಟಿ ಕಾರ್ಯದರ್ಶಿ ಕವಿತಾ ಗರ್ಗ್ ಅವರು ತಮ್ಮ ಇನ್ನಿತರೆ ಅಧಿಕಾರಿಗಳೊಂದಿಗೆ ಮೈಸೂರಿಗೆ ಭೇಟಿ ನೀಡಿ, ಮೈಸೂರು ಅರಮನೆ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದ ಆಯೋಜನೆಗೆ ಸಂಬಂಧಿಸಿದ ಸಾಧ್ಯ–ಸಾಧ್ಯತೆಗಳ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಮೈಸೂರಿನಲ್ಲಿ ನಡೆಯುವ ಸಭೆಯಲ್ಲಿ ಸಾಮೂಹಿಕ ಯೋಗ ಪ್ರದರ್ಶನ, ಮೂಲ ಸೌಕರ್ಯಗಳ ಲಭ್ಯತೆ, ಸಾರಿಗೆ ಸೌಲಭ್ಯಗಳು, ವಸತಿ, ಹವಾಮಾನ, ಕಾರ್ಯಕ್ರಮ ನಿರ್ವಹಣೆ, ಭದ್ರತೆ ಇತ್ಯಾದಿಗಳ ಕುರಿತು ಏ.29ರಂದು ಬೆಳಗ್ಗೆ 9.30 ಗಂಟೆಗೆ ಪರಿಶೀಲಿಸಲಿದ್ದಾರೆ. ಹೀಗಾಗಿ ಸಭೆಗೆ ಕರ್ನಾಟಕ ಸರ್ಕಾರದ ಹಿರಿಯ ಅಧಿಕಾರಿಗಳನ್ನು ನಿಯೋಜಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆಯಲಾಗಿದೆ. ಸಭೆಗೆ ರಾಜ್ಯದ ಆಯುಷ್ ಅಧಿಕಾರಿಗಳು ಮತ್ತು ಜಿಲ್ಲಾಡಳಿತದ ಸಂಬಂಧಿಸಿದ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಭಾಗವಹಿಸುವಂತೆ ತಿಳಿಸಲಾಗಿದೆ.

ವಿಶ್ವದ 4ನೇ ಶ್ರೀಮಂತ ಗೌತಮ್ ಅದಾನಿ

ನವದೆಹಲಿ: ಅದಾನಿ ಗ್ರೂಪ್ ಮಾಲೀಕ ಗೌತಮ್ ಅದಾನಿ ಭಾರತ ಮತ್ತು ಏಷ್ಯಾದ ಶ್ರೀಮಂತ ವ್ಯಕ್ತಿಯಾಗಿ ಉಳಿದಿಲ್ಲ. ಈಗ ವಿಶ್ವದ 4ನೇ ಶ್ರೀಮಂತರಾಗಿದ್ದಾರೆ. ಈಗ ಅದಾನಿ ಆಸ್ತಿಯು ಮೈಕ್ರೋಸಾಫ್ಟ್ ಸಂಸ್ಥಾಪಕ ಬಿಲ್ ಗೇಟ್ಸ್‌ಗೆ ಆಸ್ತಿಗೆ ಸಮನಾಗಿದೆ. ಬ್ಲೂಮ್‌ಬರ್ಗ್ ಬಿಲಿಯನೇರ್ಸ್(ಶತಕೋಟ್ಯಧಿಪತಿ) ರಿಯಲ್ ಟೈಂ ಇಂಡೆಕ್ಸ್ ಪ್ರಕಾರ, ಅದಾನಿ ಮತ್ತು ಬಿಲ್ ಗೇಟ್ಸ್ ಇಬ್ಬರೂ 125 ಬಿಲಿಯನ್ ಡಾಲರ್ (9.58 ಲಕ್ಷ ರೂ.)ಮೌಲ್ಯದ ಆಸ್ತಿಂ ಹೊಂದಿದ್ದಾರೆ. ಗೌತಮ್ ಅದಾನಿ ವಿಶ್ವದ 5ನೇ ಶ್ರೀಮಂತರಾಗಿದ್ದಾರೆ. ಈ ಪಟ್ಟಿಯಲ್ಲಿ ಅವರು ಬಿಲ್ ಗೇಟ್ಸ್‌ಗಿಂತ ಸ್ವಲ್ಪ ಹಿಂದೆ ಇದ್ದಾರೆ.

ಹಾಲಿನ ದರ ಕನಿಷ್ಠ 3 ರೂ. ಹೆಚ್ಚಳಕ್ಕೆ ಮನವಿ

ಬೆಂಗಳೂರು: ಹಾಲಿನ ಸಂಸ್ಕರಣೆ, ಕಚ್ಚಾ ಸಾಮಗ್ರಿಗಳು, ವಿದ್ಯುತ್, ಸಾಗಾಣಿಕಾ ವೆಚ್ಚ ಸೇರಿದಂತೆ ಬಹುತೇಕ ಎಲ್ಲ ವೆಚ್ಚಗಳು ಶೇ.30ರಷ್ಟು ಹೆಚ್ಚಾಗಿವೆ. ಇದನ್ನು ಪರಿಗಣಿಸಿ ರೈತರಿಗೆ ಹೆಚ್ಚುವರಿ ದರ ನೀಡಲು ಅನುಕೂಲವಾಗುವ ನಿಟ್ಟಿನಲ್ಲಿ ಹಾಲಿನ ದರ ಹೆಚ್ಚಳ ಮಾಡುವಂತೆ ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಸಿಎಂಗೆ ಮನವಿ ಮಾಡಿದ್ದಾರೆ. ಅಮೂಲ್ ಸೇರಿದಂತೆ ದೇಶದ ವಿವಿಧ ಸಹಕಾರಿ ಮತ್ತು ಖಾಸಗಿ ಸಂಸ್ಥೆಗಳು ಹಾಲಿನ ಮಾರಾಟ ದರ ಹೆಚ್ಚಿಸಿವೆ. ನಂದಿನಿ ಹಾಲಿನ ಮಾರಾಟ ದರಕ್ಕೆ ಹೋಲಿಕೆ ಮಾಡಿದರೆ ಇತರೆ ಸಂಸ್ಥೆಗಳ ದರವು ಪ್ರತಿ ಲೀಟರ್‌ಗೆ 8ರಿಂದ 10 ರೂ. ಹೆಚ್ಚಿದೆ. ಹೀಗಾಗಿ ನಂದಿನಿ ಹಾಲಿನ ದರವನ್ನು ಕನಿಷ್ಠ ಪ್ರತಿ ಲೀಟರ್‌ಗೆ 3 ರು. ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಇದರಿಂದ ಹಾಲು ಉತ್ಪಾದಕರಿಗೆ ಕನಿಷ್ಠ 2 ರು. ಮತ್ತು ಹಾಲು ಉತ್ಪಾದಕರ ಸಹಕಾರಿ ಸಂಘ, ಹಾಲು ಒಕ್ಕೂಟ ಹಾಗೂ ಹಾಲು ಮಾರಾಟಗಾರರಿಗೆ 1 ರು. ನೀಡಲು ಸಹಕಾರಿಯಾಗಲಿದೆ ಎಂದು ಪತ್ರ ಬರೆದು ಮುಖ್ಯಮಂತ್ರಿಯವರನ್ನು ಕೋರಿದ್ದಾರೆ.

ಇಂದು ಮೈಸೂರು ವಿಭಾಗ ಮಟ್ಟದ ಕೈಗಾರಿಕಾ ಅದಾಲತ್: ಜೊತೆಗೆ 'ಉದ್ಯಮಿಯಾಗು, ಉದ್ಯೋಗ ನೀಡು' ಕಾರ್ಯಾಗಾರ

ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಅವರಿಂದ ಚಾಲನೆ



ಮೈಸೂರು, ಏ.27(ಎಂಕೆ)– ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಕರ್ನಾಟಕ ಉದ್ಯೋಗ ಮಿತ್ರದ ವತಿಯಿಂದ ನಾಳೆ(ಏ.28) ವಿಭಾಗದ ಮಟ್ಟದ(ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಮಂಡ್ಯ) 'ಉದ್ಯಮಿಯಾಗು–ಉದ್ಯೋಗ ನೀಡು' ಕಾರ್ಯಾಗಾರ ಹಾಗೂ 'ಕೈಗಾರಿಕಾ ಅದಾಲತ್' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಉದ್ಯೋಗ ಮಿತ್ರದ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು ತಿಳಿಸಿದರು.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಮೈಸೂರು ಜಿಲ್ಲಾ ಕೇಂದ್ರದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಕರಾಮುವಿ)ದ ಘಟಿಕೋತ್ಸವ ಭವನದಲ್ಲಿ ಬೆಳಿಗ್ಗೆ 9.30ಕ್ಕೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಡಾ. ಮುರುಗೇಶ್ ಆರ್ ನಿರಾಣಿ ಅವರು ಕಾರ್ಯಾಗಾರ ಉದ್ಘಾಟಿಸಲಿದ್ದು, 1700ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದರು.

ರಾಜ್ಯದಲ್ಲಿ 4ನೇ ಬಾರಿಗೆ ಮೈಸೂರಿನಲ್ಲಿ ವಿಭಾಗ ಮಟ್ಟದ 'ಉದ್ಯಮಿಯಾಗು –ಉದ್ಯೋಗ ನೀಡು' ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಈ ಮೊದಲು ಬೆಂಗಳೂರು, ಕಲಬುರಗಿ ಹಾಗೂ ಬೆಳಗಾವಿಯಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಸಲಾಗಿದೆ. ಮುಂದಿನ ದಿನಗಳಲ್ಲಿ ಮಂಗಳೂರು ಮತ್ತು ತುಮಕೂರಿನಲ್ಲಿ ಆಯೋಜಿಸಲಾಗುವುದು. ಪದವಿ ಪಡೆದ ವಿದ್ಯಾರ್ಥಿಗಳು ಉದ್ಯಮಿಗಳಾಗುವುದು ಹೇಗೆ? ಎಲ್ಲಿ ಮತ್ತು ಹೇಗೆ ಸಾಲ–ಸೌಲಭ್ಯ ದೊರೆಯುತ್ತದೆ. ಯಾವ ಯಾವ ಕ್ಷೇತ್ರಗಳಲ್ಲಿ ಹೂಡಿಕೆಗೆ ಅವಕಾಶ ಇದೆ ಎಂಬುದನ್ನು ತಜ್ಞರು ಹಾಗೂ ಯಶಸ್ವಿ ಉದ್ಯಮಿಗಳು ವಿವರಿಸಲಿದ್ದಾರೆ ಎಂದು ತಿಳಿಸಿದರು.

ಈ ಕಾರ್ಯಾಗಾರವು ಒಂದು ದಿನಕ್ಕೆ ಸೀಮಿತವಾಗಿಲ್ಲ. ಭಾಗವಹಿಸಿದವರಿಗೆ ಹೆಚ್ಚಿನ ತರಬೇತಿ ನೀಡುವುದಕ್ಕಾಗಿ ಆಯಾ ಜಿಲ್ಲಾ ಕೇಂದ್ರಗಳಲ್ಲಿ ವಿಶೇಷ ಕಾರ್ಯಾಗಾರ, ಆನ್‌ಲೈನ್ ತರಗತಿ ನೀಡಲಾಗುವುದು. ಅಂತಿಮ ಹಂತದವರೆಗೆ ಆಸಕ್ತಿ ಕಾಯ್ದುಕೊಳ್ಳುವವರಿಗೆ ದೊಡ್ಡ ದೊಡ್ಡ ಉದ್ಯಮಿಗಳು ಹಾಗೂ ಮಾರ್ಗದರ್ಶಕರೊಂದಿಗೆ ನೇರ ಸಂಪರ್ಕ ಕಲ್ಪಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಕೈಗಾರಿಕಾ ಅದಾಲತ್: ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ (ಎಂಎಸ್‌ಎಂಇ ಮತ್ತು ಪಿಪಿ) ಅಪರ ನಿರ್ದೇಶಕ ಹೆಚ್.ಎಂ. ಶ್ರೀನಿವಾಸ್ ಮಾತನಾಡಿ, ಉದ್ಯಮಿಗಳ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ 'ಕೈಗಾರಿಕಾ ಅದಾಲತ್' ಕಾರ್ಯಕ್ರಮವನ್ನು ಮಧ್ಯಾಹ್ನ 3.30ಕ್ಕೆ ಹಮ್ಮಿಕೊಳ್ಳಲಾಗಿದೆ. ವಿದ್ಯುತ್ ಸರಬರಾಜು ಕಂಪನಿ, ಪೌರಾಡಳಿತ ಇಲಾಖೆ, ನಗರಾಭಿವೃದ್ಧಿ ಇಲಾಖೆ, ನಗರ ಯೋಜನಾ ಇಲಾಖೆ, ಕಾರ್ಮಿಕ ಇಲಾಖೆ, ಕಾರ್ಖಾನೆ ಮತ್ತು ಬಾಯ್ಲರ್ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ ಸೇರಿದಂತೆ ಉದ್ಯಮಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳೊಂದಿಗೆ ಇರುವ ಸಮಸ್ಯೆಗಳ ಇತ್ಯರ್ಥಕ್ಕೆ ಕ್ರಮವಹಿಸಲಾಗುತ್ತದೆ. ಅಲ್ಲದೆ ಕೈಗಾರಿಕಾ ಘಟಕ ಸ್ಥಾಪನೆಯ ವಿವಿಧ ಹಂತದ ಅನುಮತಿ ಪಡೆಯಲು ಈ ವೇದಿಕೆ ನೆರವಾಗಲಿದೆ.

ಮೈಸೂರಿನ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ. ದಿನೇಶ್, ಉಪ ನಿರ್ದೇಶಕ ವರದೇಗೌಡ, ಹಿರಿಯ ಅಧಿಕಾರಿಗಳಾದ ಶ್ರೀನಿವಾಸಪ್ಪ, ಜೆ.ವೇಣುಗೋಪಾಲ್ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

FOR SALE
1) 30x40, 12 Lakhs, attach Brahmins Layout, KHB Layout. 2) Bogadi Rod 40x30, 22 Lakhs. 3) 30x40, Karle Habitat, Opp. University Layout. 4) Bogadi Road, Near Rainbow School 20x30. 5) Gayathri Laout 40x60.
Prakruthi Properties
9035990359, 9538690359

WANTED
Sales Executive
Male / Female
Qul: PUC / above.
9880381505
7349540735

ಜಮೀನು ಮಾರಾಟಕ್ಕಿದೆ
ನಂಜನಗೂಡಿನ ಬಸ್ ಸ್ಟಾಂಡ್‌ನಿಂದ 8 ಕಿ.ಮೀ. ದೂರದಲ್ಲಿರುವ ಬನ್ನಾರಿ ಅಮ್ಮನ್ ಶುಗರ್ ಕಾರ್ಖಾನೆಯ ಪಕ್ಕದಲ್ಲಿ, ಮೈನ್ ರೋಡ್‌ನಲ್ಲಿ 90 ತೆಂಗಿನ ಮರಗಳಿರುವ, 4 ಎಕರೆ 3 ಗುಂಟೆ ಜಮೀನು ಮಾರಾಟಕ್ಕಿದೆ.
ಒಟ್ಟು ಬೆಲೆ 1 ಕೋಟಿ 60 ಲಕ್ಷ ರೂಪಾಯಿಗಳು.
ಶಿವಕುಮಾರ್ 9845875555
ಮಂಜುನಾಥ್ 7259592104, 9164374021

WANTED
Immediate joining to work at Mysore
1) STEWARDS
2) CAPTAINS
3) CHEFS
4) ACCOUNTANT : Tally must & 3 to 4 years experienced.
Contact between 11 am & 7 pm
9008558030, 8050950493

ಬೇಕಾಗಿದ್ದಾರೆ
Ekadanta Secuiity Services Pvt. Ltd., KRS Road, ಸುತ್ತಮುತ್ತ ಕೆಲಸ ಮಾಡಲು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ/ ವಿದ್ಯಾರ್ಹತೆ: SSLC, PUC
9611786861
9611786862

ಬಾಡಿಗೆಗೆ ಇದೆ
ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆಯಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 600 ಚ.ಅಡಿಗಳು ವಾಣಿಜ್ಯ 1ನೇ ಮಹಡಿಯಲ್ಲಿ 1000 ಚ.ಅಡಿಗಳಷ್ಟು ವಾಣಿಜ್ಯ ಸ್ಥಳಾವಕಾಶ ಬಾಡಿಗೆಗೆ ದೊರೆಯುತ್ತದೆ. (ಪಾಲಿಕ್ಲಿನಿಕ್, ಮೆಡಿಕಲ್ ಸ್ಟೋರ್, ಹಾಗೂ ಲ್ಯಾಬೋರೇಟರಿ ನಡೆಸಲು ಸೂಕ್ತವಾಗಿದೆ)
9620607138
8105751169

ಸುವರ್ಣಾವಕಾಶ
ನಿವೃತ್ತಿ, ಸ್ವಯಂನಿವೃತ್ತಿ, ಗೃಹಿಣಿಯರಿಗೆ ಸ್ವಂತ ಉದ್ಯಮದಾರರಿಗೆ ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part Time / Full Time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. Fixed Salary /PF - ESI, Age:- above 30 Years
9008799156

ಇಂದೇ ಸಂಪರ್ಕಿಸಿ
ಮೈಸೂರು ಮತ್ತು ಸುತ್ತಮುತ್ತಲಿನ ಕೈಗಾರಿಕಾ ಪ್ರದೇಶಗಳಲ್ಲಿರುವ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree pass / fail ಆದವರಿಗೆ Cashier, Billing, Data Entry, Packing, Helpers, Labelling, Maintenance ಮುಂತಾದ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ: 14500 – 38,000 (ESI+PF+OT) ಸೇರಿ. ಸಂಪರ್ಕಿಸಿ.
7892878915, 9663704915

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಗೋಲ್ಡ್ ಕಂಪನಿಗೆ
ಟೆಲಿಕಾಲಿಂಗ್ ಕೆಲಸ ಮಾಡಲು ಅನುಭವವುಳ್ಳ ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ವೇತನವನ್ನು ನೀಡಲಾಗುವುದು.
Fixed salary 7K + Incentives.
Mob: 8884455559

ತಕ್ಷಣ ಬೇಕಾಗಿದ್ದಾರೆ
ಮಾರ್ಕೆಟಿಂಗ್ ಕೆಲಸಕ್ಕೆ ಹುಡುಗರು ಮತ್ತು ಟೆಲಿಕಾಲರ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
7795662367
0821-2598024

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ, ಸರಸ್ವತಿಪುರಂ, ದಟ್ಟಗಳ್ಳಿ, ಗಂಗೋತ್ರಿ ಸುತ್ತಮುತ್ತ ವಿರುವಂತೆ ಕೆಲಸ ಮಾಡಲು ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು, ಸಂಬಳ: 15,000/- ವಯೋಮಿತಿ 45 ವರ್ಷದ ಒಳಗೆ ESI ಮತ್ತು PF ಸೌಲಭ್ಯ ಇರುತ್ತದೆ.
9620667819
9620777819

WANTED TEACHERS
1) B.Sc, B.Ed
2) B.A, B.Ed (Kannada)
3) B.A, B.Ed., (Hindi)
4) B.A or B.Sc (Fluent in English)
5) B.A, B.Ed (English)
6) Computer Teachers
7) Spoken English
(Females Only)
7760815022 / 8880008558

ಬತ್ತಿಗಳು ಸಾಂಬ್ರಾಣಿ ಉದ್ಯೋಗ
ಉತ್ತಮ ಗುಣಮಟ್ಟದ ಬತ್ತಿಗಳು ಸಾಂಬ್ರಾಣಿಯನ್ನು ತಯಾರಿಸಿ, ನಮಗೆ ಮರಳಿಸಿ. ಪ್ರತಿದಿನ 500 ರಿಂದ 1000 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196
9880548596

---

2 ಲಕ್ಷ ಇನ್‌ವೆಸ್ಟ್‌ಮೆಂಟ್ ಮಾಡುವವರಿಗೆ ಕೆಲಸ ಮತ್ತು ಪ್ರತಿದಿನ ಸಂಬಳ
ಪ್ರತಿದಿನ 2ಲಕ್ಷ ಇನ್‌ವೆಸ್ಟ್‌ಮೆಂಟ್ ಮಾಡುವವರಿಗೆ ಕೆಲಸ ಮತ್ತು ಪ್ರತಿದಿನ 500ರೂ. ಸಂಬಳ ಕೊಡಲಾಗುವುದು ಹಾಗೂ ಸಂಜೆ ಹಣ ವಾಪಸ್ ಪಡೆಯಬಹುದು. ಆಸಕ್ತಿಯುಳ್ಳವರು ಕರೆಮಾಡಿ. ಸಂಪರ್ಕಿಸಿ : MNM ಗೋಲ್ಡ್,ಅಶೋಕ ರಸ್ತೆ, ಗುಪ್ತ ಹೋಟೆಲ್ ಹತ್ತಿರ, ಮೈಸೂರು.
9036991977

SRI VINAYAKA CENTRAL SCHOOL, TARIPURA
WANTED TEACHERS
Trained & experienced graduate teachers required for all subjects, including computer, Arts & Craft & NST for Primary and High School. Free transport facility available. Hostel facility available from 7th to 10th Std. for boys.
8971577685 / 9980631121
Send your resume through SMS

ಸೈಟು ಮಾರಾಟಕ್ಕಿದೆ
40x60 S/Face, T.N.Pura Main Road, ಕಮರ್ಷಿಯಲ್ ಜಾಗ, ಪ್ರಕೃತಿ ಲೇಔಟ್ ಪಕ್ಕ DTCP Conversion 11B Khata ಸಂಪರ್ಕಿಸಿ: ರಾಜೇಶ್
8050332377

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣೀಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

WANTED
Marketing Executive in Mysore for a leading Book Publisher.
Two wheeler is a must.
Contact:
96111 85999

ACUPUNCTURE COURSE
• Diploma in Acupuncture - 6 monts Course
• BSS Certified
• Weekend Classes
• Both Theory & Practical
THE ACADEMY OF UNIVERSAL ACUPUNCTURE EDU-TRUST ®
95665-04571 / 94837-88737

IMKTA - PRE-SCHOOL TEACHER TRAINING
Diploma Courses for SSLC, PU or Any Degree Candidates.
Regular / Saturday / Correspondence Courses with practical training.
www.imkta.in
ALPHA INTERNATIONAL SCHOOL
@ Srirampura & Gokulam
Call: 7829937469, 9901803394
ONLINE TRAINING AVAILABLE

ಬೇಕಾಗಿದ್ದಾರೆ
ತಮಿಳು ಮತ್ತು ಕನ್ನಡ ಮಾತನಾಡಲು ಬರುವ Telecaller ಮತ್ತು Executive ಬೇಕಾಗಿದ್ದಾರೆ.
ಸಂಬಳ - 20000/-
8884304444

SDJ JEWELERS
ಪುರುಷರು ಮತ್ತು ಮಹಿಳೆಯರು
Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಹೆಸರಾಂತ ಕಾರ್ಖಾನೆಯೊಂದಕ್ಕೆ ತಕ್ಷಣ ಕೆಲಸಕ್ಕೆ ಕಾಯಂ ನೌಕರರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ವರ್ಷದೊಳಗಿರಬೇಕು. ವೇತನ 12,165+ESI&PF ಮತ್ತು ಉಚಿತ ಊಟದ ವ್ಯವಸ್ಥೆ. ಆಸಕ್ತ ದಾಖಲೆಗಳಾದ ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ-06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ. (ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ)
8453408502 / 9108100117

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಸೈಟುಗಳು ಮಾರಾಟಕ್ಕಿವೆ
MUDA Approved Bank Loan Available
ಶ್ರೀನಗರ ಪಕ್ಕ ಮತ್ತು ಶ್ರೀರಾಂಪುರ ರಿಂಗ್ ರೋಡ್
8050345574

Sri Narayanananda Vidyalaya
(English medium School)
Hinkal, Mysuru - 30
REQUIRED LADY TEACHERS
1) NST / Montessori,
2) P.U.C., D.Ed, 3) B.A., B.Ed
4) B.Sc., B.Ed, 5) C.PEd / B.PEd
Interview on 01-05-2022, Time: 10.00 a.m to 1.00 p.m
7353711673

ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5300
ಬ್ಯಾಂಕುಗಳು, ಗಿರವಿಅಂಗಡಿಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳನ್ನು ನಿಮ್ಮ ಮನೆಯಲ್ಲೇ ಬಿಡಿಸಿ ಅತಿ ಹೆಚ್ಚಿನ ಬೆಲೆಗೆ ಖರೀದಿಸಲಾಗುವುದು. ... (T&C) ಸಂಪರ್ಕಿಸಿ - S.M ಗೋಲ್ಡ್ ಫೈನಾನ್ಸ್
8050518881

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವಿನಾಯಕ ಫೋಟೋ ಸ್ಟುಡಿಯೋ ಮೇಲೆ ...
Mob.: 9986926101

ತಕ್ಷಣ ಬೇಕಾಗಿದ್ದಾರೆ
ಹುಡುಗರು ಮತ್ತು ಮಹಿಳಾ ಅಭ್ಯರ್ಥಿಗಳು ಕೆಲಸಕ್ಕಾಗಿ ಮೈಸೂರಿನ ... ಸೆಕ್ಯೂರಿಟಿ ಗಾರ್ಡ್, ಸೂಪರ್ ವೈಸರ್, ಮಾರ್ಕೆಟಿಂಗ್ ಮ್ಯಾನೇಜರ್, ಹೌಸ್‌ಕೀಪಿಂಗ್ ಬೇಕಾಗಿದ್ದಾರೆ ... ವಿದ್ಯಾಭ್ಯಾಸ 5ನೇ, 7ನೇ, 10ನೇ ಪಾಸ್/ಫೇಲ್
7022888394
9972770011

ತಕ್ಷಣ ಬೇಕಾಗಿದ್ದಾರೆ
PART TIME /FULL TIME / HOME-BASED
E-CODE GAS SAFE

EDUCATION	WORK TIME	SALARY
SSLC,PUC, Dip,Degree	4 HOURS	6000/-
SSLC,PUC, Dip,Degree	8 HOURS	16000/-

ಮನೆಯಲ್ಲೇ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

AFFIDAVIT
I, Charles Bronson, residing at Door No. 1027/A, 9th Main, 3rd Stage, Gokulam, Mysore-570 002, have changed my name as Israel Bronson, on my own free will, in front of Notary S.V. Nagendra on 25.4.2022. I declare that I shall at all times hereafter in all records, deeds and writings and in all proceedings, dealings & transactions, private as well as upon all ocasions whatsoever use and sign the name of Israel Bronson.
Sd/- Israel Bronson

ಸುವರ್ಣಾವಕಾಶ
ನಮ್ಮ ಸ್ವಂತ ಬ್ಯಾನರ್‌ನಲ್ಲಿ ತಯಾರಾಗುತ್ತಿರುವ ಚಲನಚಿತ್ರಕ್ಕೆ ಅಭಿನಯದಲ್ಲಿ ಆಸಕ್ತಿ ಇರುವ ಹೊಸ ಪ್ರತಿಭೆಗೆ ನೇರ ಅವಕಾಶವಿದೆ. ನಾಯಕಿ ಪಾತ್ರಕ್ಕೆ 21 ರಿಂದ 24 ರ ವಯಸ್ಸಿನವರು ಬೇಕಾಗಿದ್ದಾರೆ. ಕೂಡಲೇ ನಮ್ಮ ವಾಟ್ಸ್‌ಆಪ್ ನಂಬರ್‌ಗೆ ಅಭಿನಯದ ವಿಡಿಯೋವನ್ನು ಕಳುಹಿಸಿಕೊಡಿ
9731648090 / 6361905091

ಮೈಸೂರಿನ ಬ್ರೋಕರ್ಸ್ ಗಮನಕ್ಕೆ
ನಂಜನಗೂಡಿನ ಹುಲ್ಲಹಳ್ಳಿ ಸರ್ಕಲ್‌ನಿಂದ 10 ನಿಮಿಷದ ನಡಿಗೆ ಅಲ್ಲಿ 16x60 ಸೈಟಿನಲ್ಲಿ ಬೋರ್‌ವೆಲ್ ಹಾಗೂ ಸೋಲಾರ್ ಸೌಲಭ್ಯವಿರುವ ಸಿಂಗಲ್ ರೂಮಿನ ನಾಲ್ಕು ಅವಳಿ ಜವಳಿ ಮನೆಗಳು ಬೆಲೆ ರೂ.62 ಲಕ್ಷ
9880496212
9591614440

ಬೇಕಾಗಿದ್ದಾರೆ
ಬೆಂಗಳೂರಿನ ಇಂಜಿನಿಯರಿಂಗ್ ಕಾಲೇಜ್ ಹಾಸ್ಟೆಲ್‌ಗೆ ಕುಕ್ ಮತ್ತು ಅಸಿಸ್ಟೆಂಟ್ ಕುಕ್ ಬೇಕಾಗಿದ್ದಾರೆ. ಊಟ ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ.:
9380394364

WANTED
Teachers for KG to 10th for Schools at Kondlahalli (Chitradurga Dist) Rona (Haveri Dist), Chikkodi (Belagavi Dist), Kanakapura (Ramanagara Dist) Smart Qualified Ladies are preferable, Accomodation, PF and ESI will be provided. 2) Smart Lady Assistant ready to move around the above area. Post your CV to
9739308263

ಸೈಟು ಮಾರಾಟಕ್ಕಿದೆ
J P Nagar Panacea Hospital ಇಂದ 500 Meter ದೂರದಲ್ಲಿ 60x35 Site ಮಾರಾಟಕ್ಕೆ ಇದೆ. 11B Site Sq.ft 3000 Rs. Borewell ಇದೆ
6363367369

ಬೇಕಾಗಿದ್ದಾರೆ
ಮ್ಯಾಚಿಂಗ್ ಸೆಂಟರ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ / ಇಲ್ಲದವರು ಹುಡುಗರು / ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಶ್ರೀಭಗವಾನ್ ಸಿಲ್ಕ್ಸ್,
ಕೆ.ಆರ್.ಸರ್ಕಲ್, ಮೈಸೂರು

ಮನೆಯಿಂದಲೇ ಕೆಲಸ
ಕನ್ನಡ ಮತ್ತು ಇಂಗ್ಲಿಷ್ ಓದಲು ಬರೆಯಲು ಬರುವ ಯುವಕ ಯುವತಿಯರಿಗೆ, ಗೃಹಿಣಿಯರಿಗೆ, ವಿದ್ಯಾರ್ಥಿಗಳಿಗೆ, ನಿವೃತ್ತರಾದವರಿಗೆ ಎಲ್ಲರಿಗೂ ಸದಾವಕಾಶ ದಿನದ ಬಿಡುವಿನ ಸಮಯದಲ್ಲಿ ಕೆಲಸ ಮಾಡಿ ತಿಂಗಳಿಗೆ 14,000 ರಿಂದ 20,000 ವರೆಗೆ ಗಳಿಸಿ. ಮಾಹಿತಿಗಾಗಿ ಸಂಪರ್ಕಿಸಿ.
7624982181
9742729728

ಬೇಕಾಗಿದ್ದಾರೆ
ಮೈಸೂರಿನಲ್ಲಿ ಹೊಸದಾಗಿ ಪ್ರಾರಂಭವಾಗುತ್ತಿರುವ ಸಸ್ಯಹಾರಿ ಹೋಟೆಲ್‌ಗೆ ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ.
1) ಸಪ್ಲೈಯರ್ಸ್ 2) ಕ್ಯಾಪ್ಟನ್
3) ಕೌಂಟರ್ ಬಾಯ್ಸ್ 4) ಕಿಚನ್ ಸ್ಟಾಫ್
5) ಕ್ಲೀನರ್‌ಗಳು. ನೇರ ಸಂಪರ್ಕಿಸಿ:
9538556565 / 8951114554

HOME LOAN
11B, 9/11A ಕಾರ್ಪೊರೇಷನ್ & ಮುಡಾ ಖಾತೆಗಳಿಗೆ ಸಾಲ ಸೌಲಭ್ಯ ಕೊಡಿಸಲಾಗುವುದು. ಮನೆ ಖರೀದಿ, ಸೈಟ್ ಖರೀದಿ, ಮನೆ ಕಟ್ಟಲು, ಮಾರ್ಟ್‌ಗೇಜ್, ಫ್ಲಾಟ್ ಖರೀದಿ
HOUSING LOAN FOR PENSIONERS
ಶ್ರೀ ಸಾಯಿ ಎಂಟರ್‌ಪ್ರೈಸಸ್ ಮೈಸೂರು
8884176836

SITES FOR SALE
20x30 - 13.20 Lakhs
30x40 - 26.40 Lakhs
Bank Loan upto 75%, Ready for Registration near, Gurur Bus Stop, Ramabainagar, Mysore, DTCP approved (Corporation Limits)
1.5 kms from J P Nagar Ring Road
8660105902

SITE FOR SALE
Site at Mysore, Info City Layout, Elavala, Mysore. Site No.192, Size: 30x40, West Facing, Price: Rs.1400/- Per Sq.ft. (3km from Elavala Satellite Bus Stand)
9900525125

ಛತ್ರ ಖಾಲಿ ಇದೆ
2022 ರ ಜೂನ್ 15–16 ರಂದು ಹಾಗೂ ಮೇ ಮತ್ತು ಜೂನ್‌ನಲ್ಲಿ ಇತರೆ ಶುಭ ದಿನಗಳಲ್ಲಿ ಛತ್ರ ಖಾಲಿ ಇದೆ. ಸಂಪರ್ಕಿಸಿ:
ದಿವ್ಯರೂಪ ಕಲ್ಯಾಣ ಭವನ
ವಿಜಯನಗರ 2ನೇ ಹಂತ, ಮೈಸೂರು
9448051099 / 0821-2304909
9880253653

ತಕ್ಷಣ ಬೇಕಾಗಿದ್ದಾರೆ
Hotel ನಲ್ಲಿ ಕೆಲಸ ಮಾಡಲು House Keeping ಬೇಕಾಗಿದ್ದಾರೆ.
(ವಸತಿ ಕೊಡಲಾಗುವುದು)
9243536373

ಬೇಕಾಗಿದ್ದಾರೆ
ಹೆಬ್ಬಾಳ್, ಮೇಟಗಳ್ಳಿ, ಹೂಟಗಳ್ಳಿ, ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ESI & PF ಸೌಲಭ್ಯವಿರುತ್ತದೆ. ಸಂಬಳ: 10,500 ರಿಂದ 19,800 ರವರೆಗೆ ಇರುತ್ತದೆ. ಕಂಪನಿಯಲ್ಲಿ ಸಮವಸ್ತ್ರ, Safety ಶೂ ಗಳನ್ನು ಕೊಡಲಾಗುತ್ತದೆ.
8951869646
9902645646

WORK FROM HOME
ಮನೆಯಲ್ಲೇ ಕುಳಿತು ಕೆಲಸ, ನೋ ಟಾರ್ಗೆಟ್, ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು ತುಂಬುವ ಕೆಲಸ. ವಾರಕ್ಕೆ ಗಳಿಸಿ 3,000 ರಿಂದ 5,000 (ಕೊರಿಯರ್ ಸೌಲಭ್ಯವಿದೆ)
9535248054
7353369458

ಬೇಕಾಗಿದ್ದಾರೆ
ಅನುಭವ ಇರುವವರು ಮಗು ನೋಡಿಕೊಳ್ಳುವವರು ಬೇಕಾಗಿದ್ದಾರೆ.
ಸ್ಥಳ: ಗಂಗೋತ್ರಿ ಲೇಔಟ್, ಮೈಸೂರು
9964586508

WANTED
* Service Manager
* Floor Incharge
* Technicians / Mechanics
For HINDUSTAN TRUCKS TATA MOTORS AURTHORISED COMMERCIAL VEHICLE SERVICE STATION
9945698822 / 9731563939

ಕಳೆದಿದೆ
ಶ್ರೀ W/o ಲೇ ಕುಮಾರ್, #35, EWS, E & F Block, 3ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ, ರಾಮಕೃಷ್ಣನಗರ, ಮೈಸೂರು – 570023. ಇವರ ಹೆಸರಿನಲ್ಲಿರುವ ... ದಾಖಲೆಗಳು ಕಳೆದುಹೋಗಿದ್ದು ... ಈ ಸಂಬಂಧ ಯಾರಿಗಾದರೂ ದೊರೆತಲ್ಲಿ ಈ ಕೆಳಕಂಡ ವಿಳಾಸಕ್ಕೆ ತಲುಪಿಸಬೇಕಾಗಿ ಕೋರಿದೆ.
8660511383
ಈ ನಂಬರ್‌ಗೆ ಸಂಪರ್ಕಿಸಿ ... ಪ್ರಕಟಿಸಲಾಗಿದೆ.

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಆಫೀಸರ್ :- Any Degree Ex.: 5 years ಸೆಕ್ಯೂರಿಟಿಯಲ್ಲಿ ಅನುಭವ
2) ಸೆಕ್ಯೂರಿಟಿ ಗಾರ್ಡ್ : PUC / SSLC
(ಸ್ಥಳ: ಸಿದ್ದಾರ್ಥ ಲೇಔಟ್ & ಬೆಳವಾಡಿ) Food, ESI & PF ಸೌಲಭ್ಯವಿರುತ್ತದೆ.
9739166772
9739199355

ವಧು-ವರರ ಮಾಹಿತಿ ಕೇಂದ್ರ
ಒಕ್ಕಲಿಗ / ಲಿಂಗಾಯತ / ಬ್ರಾಹ್ಮಣ ಮತ್ತು ಎಲ್ಲಾ ಜಾತಿಯ ಹಾಗೂ BE/B.Tech/ MBA/ MS/MBBS/MD ಹಾಗೂ ಎಲ್ಲಾ ಡಿಗ್ರಿ/ ಮಾಸ್ಟರ್ಸ್ ಡಿಗ್ರಿ/ದೇಶಿಯ / ವಿದೇಶಿಯ ವಧು – ವರರ ಮಾಹಿತಿಗೆ ಸಂಪರ್ಕಿಸಿ.
ಅಂಚೆ ವೇದ ಮ್ಯಾಟ್ರಿಮೋನಿ
ಮಿಯಾಜ್ಯಾಕ್ ಸರ್ಕಲ್, ಕುವೆಂಪುನಗರ, ಮೈಸೂರು
7259395800 / 7349224222

ಈ ತಕ್ಷಣವೇ ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳಿನ ಕಂಪನಿಯೊಂದರಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ಎಲೆಕ್ಟ್ರಿಷಿಯನ್ ಹಾಗೂ ಟೈಲರುಗಳು ಬೇಕಾಗಿದ್ದಾರೆ. ಸಂಪರ್ಕಿಸಿ.:
7795285485
8105249880

WANTED PIGMY AGENTS
Atractive interest Rate on FD upto 11.55% PA Shares are opened for more details Contact:
9036967266
SAI MULTISTATE CREDIT CO-OPERATIVE SOCIETY
3rd Main, 5th Cross, Jayanagara, Mysore

ಹಿರಿಯ ನಾಗರಿಕರ ಡೇ ಕೇರ್ ಕೇಂದ್ರ
ನಿಮ್ಮ ಮನೆಯಲ್ಲಿ ಒಬ್ಬಂಟಿಯಾಗಿರುವ ಹಿರಿಯ ನಾಗರಿಕರು ... ಸೌಲಭ್ಯ, 24x7 ನರ್ಸಿಂಗ್ ಸೇವೆ, ಊಟ, ಉಪಹಾರ ...
9513253747

30x40 ಸೈಟು @ Rs.20 ಲಕ್ಷ
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ ತಕ್ಷಣ ಮನೆ ಕಟ್ಟಬಹುದು. ಮೈದನಹಳ್ಳಿ, ಇಲವಾಲ, ಹುಣಸೂರು ರೋಡ್, ಮೈಸೂರು
9538583377

ಕೆಲಸಕ್ಕೆ ಬೇಕಾಗಿದ್ದಾರೆ
B.Com ಪದವೀಧರರು Tally ಅನುಭವ ಉಳ್ಳವರು ಆಡಿಟರ್ ಆಫೀಸ್‌ಗೆ @ ರಾಮವಿಲಾಸ ರಸ್ತೆ
Email:
office1997@rediffmail.com
9844143562

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು / ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1) ಕರ್ನಾಟಕ ಬ್ಯಾಂಕ್ ಹತ್ತಿರ, ಸರಸ್ವತಿಪುರಂ, ಮೈಸೂರು.
2) ಶಿಕ್ಷಣಿಕ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

ಬದಲಾವಣೆ
ಚಾಮರಾಜನಗರ ತಾಲ್ಲೂಕಿನ ಸಂತೆಮರಹಳ್ಳಿಯಲ್ಲಿ ಇರುವ 'ಕವಿನ್' ಆಂಗ್ಲ ಮಾಧ್ಯಮ ಶಾಲೆಯ ಹೆಸರನ್ನು ಇನ್ನು ಮುಂದೆ 'ಇನ್ಫಿನಿಟಿ' ಶಾಲೆ ಎಂದು ಬದಲಾಯಿಸಲಾಗಿದೆ ಎಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗುತ್ತಿದೆ.
ಸಹಿ/- ಶಾಲೆ ಆಡಳಿತ ಮಂಡಳಿ
ಇನ್ಫಿನಿಟಿ, ಸಂತೆಮರಹಳ್ಳಿ

ಬೇಕಾಗಿದ್ದಾರೆ
ಮೇಟಗಳ್ಳಿ, ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಯುವಕರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 30 ವರ್ಷ, ವಿದ್ಯಾರ್ಹತೆ: 7 ರಿಂದ PUC ಮತ್ತು ITI, ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ವಸತಿ ನೀಡಲಾಗುವುದು, ESI ಮತ್ತು PF ಸೌಲಭ್ಯವಿರುತ್ತದೆ.(ಯಾವುದೇ ಶುಲ್ಕವಿರುವುದಿಲ್ಲ)
8277047300

Mr. City Pork
Home made Kitchen Red chilly Masala, Paper Dry Pork 1 Kg 500/-, 1/2 Kg 300/- Free Door Step one houre before order
9880099929

ಮನೆ ಭೋಗ್ಯಕ್ಕೆ ಇದೆ
ಮನೆ ನಂ.4392 2BHK 4ನೇ ಕ್ರಾಸ್, 2ನೇ ಹಂತ, ಹಾಸನ ಬೇಕರಿ ಹತ್ತಿರ, ಕೆ.ಡಿ.ಸರ್ಕಲ್, ವಿಜಯನಗರ, ಮೈಸೂರು. ಸಂಪರ್ಕಿಸಿ:
8123941037

ಹೆಲ್ತ್‌ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೊಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರಿಗೆ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ANM / GNM ಆದವರಿಗೆ ಕೆಲಸವಿದೆ. ಹೋಲಿ ಮೇರೀಸ್ ಆಸ್ಪತ್ರೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್, ಎನ್.ಐ.ಇ ಕಾಲೇಜ್ ಪಕ್ಕ, ಮೈಸೂರು
9916908434

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿಯೊಂದರಲ್ಲಿ Supervisor ಕೆಲಸ ಮಾಡಲು ಸರ್ಕಾರಿ ಮಾನ್ಯತೆ ಇರುವ Dip in Agriculture / Horticulture ಮಾಡಿರುವ ಅಭ್ಯರ್ಥಿ ಬೇಕಾಗಿದ್ದಾರೆ. ESI, PF ಸೌಲಭ್ಯವಿದೆ.
7204642920
9945537353

CHANGE OF NAME
I, R.R.Srinivas S/o R.N.Raghothama Setty residing at #245, 15th Cross, Railway Layout, Vijayanagar 2nd Stage, Mysore-570016, have changed my name from R.R.Srinivas to R.Srinivas vide affidavit sworn before Notary C.Mangala, Mysore dated on 14.04.22 in future I shall be known & Called R.Srinivas.

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ, ಕೆ.ಆರ್.ಎಸ್ ರೋಡ್, ಆರ್‌ಬಿಐ ಸುತ್ತಮುತ್ತ ಕೆಲಸ ಕೆಲಸ ಮಾಡಲು ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ SSLC & ಮೇಲ್ಪಟ್ಟು ಸಂಬಳ S/Sup:16,500/- 8 hours, S/ Guard:- 15,500/- 8 Hours, ESI ಮತ್ತು PF ಊಟ, ತಿಂಡಿ ಸೌಲಭ್ಯ ಇರುತ್ತದೆ.
9880727819
9620777819

BED REPAIRS
We undertake all kinds of beds. Cotton bed Machine, Cleaning, Foam bed, Coir bed, Kurlon, Duroflex, Sleep well repairs and exchange, Home Delivery Free
8861359392

Life Partner ಅಗಲು Govt. Job ವಿಧವೆಗೆ ವರಬೇಕು
ಲಿಂಗಾಯತ 47/5.4/ B.Com, Central Govt. Railway (Dept.) Salary 75000/- ಇರುವಂತಹ ವಿಧವೆಗೆ 2ನೇ ಸರಿಯಾದ ಉದ್ಯೋಗಸ್ಥ / ವ್ಯಾಪಾರಸ್ಥ / ವಿಧುರ ವಿಚ್ಛೇದಿತ ವರ ಬೇಕಾಗಿದೆ. (ಯಾವುದೇ ಜಾತಿಯ ಅಭ್ಯಂತರವಿಲ್ಲ ಮಕ್ಕಳಿದ್ದರು ಪರವಾಗಿಲ್ಲ) ಬೆಂಗಳೂರು.
9742458242

ಬೇಕಾಗಿದ್ದಾರೆ
ಸಸ್ಯಹಾರಿ ಹೋಟೆಲ್‌ಗೆ ಅನುಭವವಿರುವ ಅಡುಗೆಯವರು ಬೇಕಾಗಿದ್ದಾರೆ
9740406508

ಬೇಕಾಗಿದ್ದಾರೆ
ಜ್ಞಾನಜ್ಯೋತಿ ವಿದ್ಯಾಸಂಸ್ಥೆ, ನಂ.9.ಎ-1, ಮಧುವನ, ಜನತಾನಗರ, ಶ್ರೀರಾಂಪುರ, ಎರಡನೇ ಹಂತ, ಮೈಸೂರು-570023. ಮೇಲ್ಕಂಡ ವಿದ್ಯಾ ಸಂಸ್ಥೆಗೆ PUC, D.Ed/ B.Sc, B.Ed(PCM) ಮತ್ತು BP.Ed/CP.Ed (ಮಹಿಳೆಯರಿಗೆ ಆದ್ಯತೆ) ಶಿಕ್ಷಕರು ಬೇಕಾಗಿದ್ದಾರೆ. (ಅನುಭವವುಳ್ಳವರಿಗೆ ಆದ್ಯತೆ). ಸಂದರ್ಶನ ದಿನಾಂಕ: 04.05.2022, ಸಮಯ: ಬೆಳಿಗ್ಗೆ 10–00 ಗಂಟೆಗೆ, ಸ್ಥಳ: ವಿದ್ಯಾಸಂಸ್ಥೆ, ಸಂಪರ್ಕಿಸಬೇಕಾದ ದೂರವಾಣಿ
0821-2361884 / 9972590996

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ॥ ಎಸ್.ಮಾಣಿಕಂಠನ್
ಮೊ: 9480743991
ಮಹಾಮಾಂತ್ರಿಕ ಅಗೋರಿ ವಿದ್ಯೆ ... ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ: 9741806990
...

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ವಾಮಾಚಾರ ...
ಮೊ.: 9880583804
... ಪ್ರೀತಿಯಲ್ಲಿ ಮೋಸ, ದಾಂಪತ್ಯ ಸಮಸ್ಯೆ (Divorce) ... (Reliance Smart) ಪಕ್ಕ, ATM ಪಕ್ಕ, ಟೌನ್ ಬಸ್ ಸ್ಟಾಂಡ್ ಹತ್ತಿರ, (KSRTC) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮೇ1ರಿಂದ ಮಂಡ್ಯ ಜಿಲ್ಲೆಯ ಪ್ರತಿ ತಾಲೂಕಿನಲ್ಲೂ ಬಿಜೆಪಿ ಸಮಾವೇಶ

ಜಿಲ್ಲಾ ಸಮಾವೇಶಕ್ಕೆ ರಾಷ್ಟ್ರೀಯ ನಾಯಕರ ಆಗಮನ: ಗೋಪಾಲಯ್ಯ



ಮಂಡ್ಯ,ಏ.27(ಮೋಹನ್‌ರಾಜ್)– ಮುಂದಿನ ಸಾರ್ವತ್ರಿಕ ವಿಧಾನಸಭಾ ಚುನಾವಣೆಗೆ ಬಿಜೆಪಿ ಪಕ್ಷವನ್ನು ಮಂಡ್ಯ ಜಿಲ್ಲೆಯಲ್ಲಿ ಸದೃಢಗೊಳಿಸಲು ಪಕ್ಷ ನಿರ್ಧಾರ ಮಾಡಿದ್ದು, ಮೇ 1ರಿಂದ ಮಂಡ್ಯ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸಮಾವೇಶಗಳನ್ನು ಮಾಡಲಾಗುತ್ತಿದೆ. ಮೇ 18ರ ನಂತರ ಮಂಡ್ಯ ನಗರದಲ್ಲಿ ಬೃಹತ್ ಬಿಜೆಪಿ ಜಿಲ್ಲಾ ಸಮಾವೇಶ ಜರುಗಲಿದ್ದು, ರಾಷ್ಟ್ರೀಯ ನಾಯಕರು ಭಾಗಿಯಾಗಲಿದ್ದಾರೆ ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ತಿಳಿಸಿದರು.

ಬುಧವಾರ ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 1ರಂದು ಮದ್ದೂರಿನಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರೆ, ಮೇ 5,6,7 ರಂದು ಮಂಡ್ಯ, ನಾಗಮಂಗಲ, ಮಳವಳ್ಳಿ, ಶ್ರೀರಂಗಪಟ್ಟಣ, ಪಾಂಡವಪುರ ಹಾಗೂ ಕೆ.ಆರ್.ಪೇಟೆಯಲ್ಲಿ ಬಿಜೆಪಿಯ ತಾಲೂಕು ಮಟ್ಟದ ಸಮಾವೇಶಗಳು ನಡೆಯಲಿವೆ. ಮೇ 18ರ ನಂತರ ದಿನಾಂಕವೊಂದನ್ನು ನಿಗದಿ ಮಾಡಿ ರಾಷ್ಟ್ರೀಯ ನಾಯಕರ ನೇತೃತ್ವದಲ್ಲಿ ಬೃಹತ್ ಜಿಲ್ಲಾ ಸಮಾವೇಶ ಜರುಗಲಿದೆ ಎಂದು ಹೇಳಿದರು.

ಪ್ರತಿ ತಾಲೂಕು ಮಟ್ಟದಲ್ಲಿ ನಡೆಯುವ ಸಮಾವೇಶದಲ್ಲಿ ಆಯಾ ತಾಲೂಕಿನಿಂದ ಬಿಜೆಪಿ ಸೇರಲು ಸಜ್ಜಾಗಿರುವ ಮುಖಂಡರುಗಳು ಸೇರಿದಂತೆ, 2 ಹಾಗೂ 3ನೇ ಹಂತದ ಮುಖಂಡರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲಾಗುವುದು ಎಂದು ತಿಳಿಸಿದರು.

ಮಂಡ್ಯದಲ್ಲಿ ಪಕ್ಷವನ್ನು ಬಲವರ್ಧನೆಗೊಳಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಮಾಡಲಾಗುತ್ತಿದ್ದು, ಈಗಾಗಲೇ ಹಲವು ನಾಯಕರು ಬಿಜೆಪಿ ಸೇರಲು ಉತ್ಸುಕರಾಗಿದ್ದಾರೆ. ಅಂತಹವರನ್ನು ಪಕ್ಷಕ್ಕೆ ಬರ ಮಾಡಿಕೊಳ್ಳಲಾಗುವುದು. ಪ್ರತಿ ತಾಲೂಕು ಮಟ್ಟದ ಸಮಾವೇಶಗಳು ರಾಜ್ಯ ಹಾಗೂ ಜಿಲ್ಲೆಯ ಮುಖಂಡರೊಂದಿಗೆ ನಡೆಯಲಿದೆ ಎಂದು ಸಚಿವರು ಹೇಳಿದರು.

ಸಂಸದೆ ಸುಮಲತಾ ಅಂಬರೀಶ್ ಬಿಜೆಪಿ ಸೇರ್ಪಡೆ ಬಗ್ಗೆ ನಾವು ತೀರ್ಮಾನ ಕೈಗೊಳ್ಳಲಾಗುವುದಿಲ್ಲ. ಅವರ ಸೇರ್ಪಡೆ ಬಗ್ಗೆ ರಾಷ್ಟ್ರೀಯ ನಾಯಕರು ನಿರ್ಧಾರ ಮಾಡುತ್ತಾರೆ. ಹಾಗೊಂದು ವೇಳೆ ಅವರು ಪಕ್ಷ ಸೇರಿದರೆ ರಾಷ್ಟ್ರೀಯ ನಾಯಕರ ನೇತೃತ್ವದಲ್ಲೇ ಸೇರ್ಪಡೆಯಾಗಲಿದ್ದಾರೆ ಎಂದು ಹೇಳಿದರು.

ನರೇಂದ್ರ ಮೋದಿಯವರು ಈ ದೇಶದ ಪ್ರಧಾನಿಯಾದ ಮೇಲೆ ರೈತರಿಗೆ ಕೊಟ್ಟ ಕೊಡುಗೆ ಯಾರೂ ಕೂಡ ಮರೆಯುವಂತಿಲ್ಲ. ಮಂಡ್ಯ ಜಿಲ್ಲೆಯ 2 ಲಕ್ಷದ 80 ಸಾವಿರಕ್ಕೂ ಅಧಿಕ ರೈತರ ಖಾತೆಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹತ್ತು ಸಾವಿರ ರೂ. ನೀಡಿವೆ. ಹೀಗೆ ರಾಜ್ಯದ 52 ಲಕ್ಷಕ್ಕೂ ಅಧಿಕ ರೈತರು ಇದರ ಪ್ರಯೋಜನ ಪಡೆದಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕ್ರೀಡೆ ಹಾಗೂ ರೇಷ್ಮೆ ಸಚಿವ ಕೆ.ಸಿ.ನಾರಾಯಣಗೌಡ, ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೀಶ್ವರ್ ಇತರರು ಉಪಸ್ಥಿತರಿದ್ದರು.

ಯೋಗಿ, ನಡ್ಡಾ ಅಥವಾ ಅಮಿತ್ ಷಾಗೆ ಆಹ್ವಾನ

ಮೇ 18ರ ಬಳಿಕ ಮಂಡ್ಯದಲ್ಲಿ ಬೃಹತ್ ಬಿಜೆಪಿ ಸಮಾವೇಶ ನಡೆಯಲಿದ್ದು, ಅಂದು ರಾಷ್ಟ್ರೀಯ ನಾಯಕರು ಭಾಗಿಯಾಗಲಿದ್ದಾರೆ ಎಂದು ಈಗಾಗಲೇ ಸಚಿವ ಗೋಪಾಲಯ್ಯ ತಿಳಿಸಿದ್ದು, ಮೂಲಗಳ ಪ್ರಕಾರ ಮೂರು ಮಂದಿ ಹೆಸರು ಕೇಳಿ ಬರುತ್ತಿದೆ. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅಥವಾ ಕೇಂದ್ರ ಗೃಹ ಸಚಿವ ಅಮಿತ್ ಷಾ ಭಾಗಿಯಾಗಬಹುದು ಎನ್ನಲಾಗಿದೆ. ಮೇ ತಿಂಗಳಲ್ಲಿ ಅಮಿತ್ ಷಾ ರಾಜ್ಯ ಪ್ರವಾಸ ಇರುವುದರಿಂದ ಷಾ ಸಮಾವೇಶದಲ್ಲಿ ಭಾಗಿಯಾದರೂ ಅಚ್ಚರಿ ಇಲ್ಲ.

ಈ ವರ್ಷ ಶತಾಯ ಗತಾಯ ಮೈಷುಗರ್ ಆರಂಭ

ಮಂಡ್ಯ,ಏ.27(ಮೋಹನ್‌ರಾಜ್)– ಮೈಷುಗರ್‌ಕಾರ್ಖಾನೆ ಪುನರಾರಂಭಕ್ಕೆ ಸರ್ಕಾರ ಈಗಾಗಲೇ ನಿರ್ಧರಿಸಿ ಯಂತ್ರೋಪಕರಣಗಳ ದುರಸ್ತಿಗೆ ಬಜೆಟ್‌ನಲ್ಲಿ 50 ಕೋಟಿ ರೂ. ಘೋಷಿಸಿದೆ. ಶತಾಯಗತಾಯ ಈ ವರ್ಷ ಕಾರ್ಖಾನೆಯನ್ನು ಆರಂಭಿಸಲಿದೆ ಎಂದು ಜಿಲ್ಲಾ ಉಸ್ತುವಾರಿ ಮತ್ತು ಅಬಕಾರಿ ಸಚಿವ ಕೆ.ಗೋಪಾಲಯ್ಯ ತಿಳಿಸಿದರು.

ನಗರದ ಮೈಷುಗರ್ ಸಕ್ಕರೆ ಕಾರ್ಖಾನೆ ಪುನರಾರಂಭ ಕುರಿತು ತಮ್ಮ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲಾಡಳಿತ ಮತ್ತು ಸಂಬಂಧಿಸಿದ ಇಲಾಖೆಗಳು ಕಾರ್ಖಾನೆ ಪುನರಾರಂಭ ಕುರಿತು ಕೈಗೊಂಡಿರುವ ಸಿದ್ಧತೆಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡು ಹೋಬಳಿವಾರು ಸಭೆಗಳನ್ನು ನಡೆಸಿ ರೈತರಿಗೆ ಮಾಹಿತಿ ನೀಡುವಂತೆ ತಾಕೀತು ಮಾಡಿದರು.

ಇದಕ್ಕೂ ಮುನ್ನ ಸಚಿವರುಗಳಾದ ಗೋಪಾಲಯ್ಯ ಮತ್ತು ರೇಷ್ಮೆ ಸಚಿವ ಕೆ.ಸಿ.ನಾರಾಯಣಗೌಡ, ಕಾರ್ಖಾನೆಗೆ ಭೇಟಿ ನೀಡಿ ಯಂತ್ರೋಪಕರಣಗಳನ್ನು ಪರಿಶೀಲಿಸಿದರು. ಈ ವೇಳೆ ಜಿಲ್ಲಾಧಿಕಾರಿ ಅಶ್ವತಿ, ಉಪವಿಭಾಗಾಧಿಕಾರಿ ಶಿವಾನಂದಮೂರ್ತಿ, ಕಾರ್ಖಾನೆ ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.

ಸಾಂಪ್ರದಾಯಿಕ ಬಸವ ಜಯಂತಿ ಆಚರಣೆಗೆ ಸಿದ್ಧತೆ



ಮಂಡ್ಯ,ಏ.27–ಜಿಲ್ಲೆಯಲ್ಲಿ ಮೇ 3 ರಂದು ಬಸವ ಜಯಂತಿಯನ್ನು ಸಾಂಪ್ರದಾಯಿಕವಾಗಿ ಆಚರಿಸಲು ಸಕಲ ಸಿದ್ಧತೆಯನ್ನು ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಎಸ್.ಅಶ್ವತಿ ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬಸವ ಜಯಂತಿ ಆಚರಣೆ ಪ್ರಯುಕ್ತ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಭಾಗವಹಿಸಿ ಮಾತನಾಡಿದರು.

ಮೇ 3 ರಂದು ಬೆಳಗ್ಗೆ ಬಸವೇಶ್ವರ ಅವರ ಭಾವಚಿತ್ರದೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಿಂದ ಮೆರವಣಿಗೆ ಹೊರಟು ಕಲಾಮಂದಿರ ತಲುಪುವುದು. ನಂತರ ವೇದಿಕೆ ಕಾರ್ಯಕ್ರಮ ಆರಂಭವಾಗಲಿದ್ದು, ಮೆರವಣಿಗೆಯಲ್ಲಿ ಪೂಜಾಕುಣಿತ, ಡೊಳ್ಳುಕುಣಿತ, ನಂದಿಧ್ವಜ, ವೀರಗಾಸೆಯಂತಹ ಕಲಾತಂಡಗಳು ಸೇರಿದಂತೆ ವಿವಿಧ ಕಲಾತಂಡಗಳು ಭಾಗವಹಿಸಲಿವೆ ಎಂದರು.

ಕೋವಿಡ್‌ನಿಂದ ಕಳೆದ ಎರಡು ವರ್ಷಗಳಿಂದ ಜಯಂತಿಗಳನ್ನು ಸರಳವಾಗಿ ಆಚರಿಸಲಾಗುತ್ತಿತ್ತು. ಈ ಬಾರಿ ಮೆರವಣಿಗೆ, ವೇದಿಕೆ ಕಾರ್ಯಕ್ರಮದೊಂದಿಗೆ ಜಯಂತಿಯನ್ನು ಚೆನ್ನಾಗಿ ಆಚರಿಸಬೇಕು ಆದರೆ ಕೋವಿಡ್ ನಿಯಮಾವಳಿಗಳನ್ನು ಮರೆಯುವಂತಿಲ್ಲ ಎಂದು ಸೂಚಿಸಿದರು. ಜಯಂತಿಯ ದಿನ ಪಾನಕ–ಮಜ್ಜಿಗೆ ವಿತರಣೆ, ದಾಸೋಹವನ್ನು ಏರ್ಪಡಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ವಿವಿಧ ಇಲಾಖೆಗಳು ಹಾಗೂ ಸಂಘ–ಸಂಸ್ಥೆಗಳ ಸಹಕಾರ ಪಡೆದುಕೊಳ್ಳಿ ಎಂದರು.

ವೇದಿಕೆ, ಮೆರವಣಿಗೆಯಲ್ಲಿ ಹೂವಿನ ಅಲಂಕಾರವನ್ನು ತೋಟಗಾರಿಕೆ ಇಲಾಖೆ ಹಾಗೂ ಸ್ವಚ್ಛತೆ, ತಳಿರುತೋರಣದ ಜವಾಬ್ದಾರಿಯನ್ನು ನಗರಸಭೆ ನಿರ್ವಹಿಸುವಂತೆ ತಿಳಿಸಿದರು.

ಕಾರ್ಯಕ್ರಮಕ್ಕೆ ಸಂಬಂಧಿಸಿದ ಕಾರ್ಯನಿರ್ವಹಣೆಗಾಗಿ ಸಮಿತಿ ರಚಿಸಲಾಗುವುದು ಎಲ್ಲರೂ ಒಗ್ಗೂಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಲ್ಲಿ ಸಹಕರಿಸುವಂತೆ ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ವಿ.ಆರ್.ಶೈಲಜಾ, ತಹಸೀಲ್ದಾರ್ ಸೌಮ್ಯ, ಜಿಲ್ಲಾಧಿಕಾರಿಗಳ ಕಚೇರಿ ಸಹಾಯಕ ಸ್ವಾಮಿಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯ ನಿರ್ದೇಶಕ ಎಸ್.ಉದಯಕುಮಾರ್, ರಾಷ್ಟ್ರೀಯ ಬಸವ ಸಮಿತಿ ಅಧ್ಯಕ್ಷ ಗುರುಪ್ರಸಾದ್, ಸದಸ್ಯ ಕೆಂಪಯ್ಯ, ಮಂಡ್ಯ ಜಿಲ್ಲಾ ಬಸವ ಸಮಿತಿ ಅಧ್ಯಕ್ಷ ರಾಜಶೇಖರ್, ಮಂಡ್ಯ ತಾಲೂಕಿನ ಜಗದ್ಗುರು ಬಸವೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಎಸ್. ಷಡಕ್ಷರಿ, ಮಂಡ್ಯ ಜಿಲ್ಲಾ ವೀರಶೈವ ಮಹಾಸಭಾ ಅಧ್ಯಕ್ಷ ಸುಬ್ರಹ್ಮಣ್ಯ, ಮಂಡ್ಯ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವಪ್ರಕಾಶ್, ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಪ್ರಕಾಶ್ ಹಾಗೂ ಬಸವಾಭಿಮಾನಿಗಳಾದ ಜಿ.ಟಿ. ವೀರಪ್ಪ, ಧರಣೇಂದ್ರಯ್ಯ, ಮಹಾಂತಪ್ಪ, ಸಿದ್ದಗಂಗಯ್ಯ ಮತ್ತು ಸಮಾಜದ ಇತರ ಮುಖಂಡರು ಭಾಗವಹಿಸಿದ್ದರು.

ಕಾರು ಡಿಕ್ಕಿ: ಸ್ಕೂಟರ್ ಸವಾರ ಸಾವು

ಶ್ರೀರಂಗಪಟ್ಟಣ, ಏ.27(ವಿನಯ್ ಕಾರೇಕುರ)– ಕಾರು ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್ ಸವಾರ ಮೃತಪಟ್ಟಿರುವ ಘಟನೆ ಮಂಗಳವಾರ ರಾತ್ರಿ ನಡೆದಿದೆ.


ಮೈಸೂರು ಇಲವಾಲ ಬಳಿಯ ಚಿಕ್ಕೇಗೌಡನ ಕೊಪ್ಪಲು ನಿವಾಸಿ ಶಿವಣ್ಣ ಎಂಬವರ ಪುತ್ರ ರವಿಕಿರಣ (25) ಮೃತ ಸವಾರ. ರವಿಕಿರಣ ತನ್ನ ಸ್ನೇಹಿತನ ಸ್ಕೂಟರ್‌ನಲ್ಲಿ ಪಂಪ್‌ಹೌಸ್‌ನಿಂದ ಬೆಳಗೊಳ ಕಡೆಗೆ ತೆರಳುತ್ತಿದ್ದ. ಈ ವೇಳೆ ಕೆಆರ್‌ಎಸ್‌ನಿಂದ ಮೈಸೂರು ಕಡೆಗೆ ತೆರಳುತ್ತಿದ್ದ ಕಾರು ಡಿಕ್ಕಿ ಹೊಡೆಯಿತೆನ್ನಲಾಗಿದೆ. ಈ ವೇಳೆ ತೀವ್ರ ಗಾಯಗೊಂಡ ರವಿಕಿರಣ್ ನನ್ನು ಪೊಲೀಸರು ಮೈಸೂರಿನ ಆಸ್ಪತ್ರೆಗೆ ಕರೆದೊಯ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು, ಕಾರನ್ನು ವಶಪಡಿಸಿಕೊಂಡಿರುವ ಪೊಲೀಸರು ಪ್ರಕರಣದಾಖಲಿಸಿಕೊಂಡಿದ್ದಾರೆ.

ರಾಗಿ ಖರೀದಿ ಹಣಕ್ಕೆ ಆಗ್ರಹಿಸಿ ಪ್ರತಿಭಟನೆ

ನಾಗಮಂಗಲ, ಏ.27– ಬೆಂಬಲ ಬೆಲೆ ನೀಡುತ್ತೇವೆಂದು ಹೇಳಿ ಖರೀದಿ ಮಾಡಿದ ರಾಗಿಗೆ ಸರ್ಕಾರದಿಂದ ಇನ್ನೂ ಹಣ ನೀಡಿಲ್ಲವೆಂದು ರೈತರು ಕಾಚೇನಹಳ್ಳಿ ಬಳಿ ಇರುವ ಎಪಿಎಂಸಿ ಮಾರುಕಟ್ಟೆಯಲ್ಲಿ ಪ್ರತಿಭಟನೆ ನಡೆಸಿದರು. ನಾವು ಕಷ್ಟ ಪಟ್ಟು ಬೆಳೆದ ರಾಗಿಗೆ ಬೆಂಬಲ ಬೆಲೆ ನೀಡುತ್ತೇವೆಂದು ಹೇಳಿದ್ದು ನಂಬಿ ಕಳೆದ ಒಂದೂವರೆ ತಿಂಗಳ ಹಿಂದೆ ಖರೀದಿ ಕೇಂದ್ರಕ್ಕೆ ರಾಗಿ ಸರಬರಾಜು ಮಾಡಿದ್ದೇವೆ. ಆದರೆ ಈವರೆಗೂ ಒಂದು ರೂಪಾಯಿ ಬಿಡುಗಡೆ ಮಾಡಿಲ್ಲ. ದಿನಂಪ್ರತಿ ಅಲೆಯುವಂತಾಗಿದೆ. ಸಂಬಂಧಪಟ್ಟ ಅಧಿಕಾರಿ ಕೈಗೆ ಸಿಗುತ್ತಿಲ್ಲ ಫೋನ್ ಮಾಡಿದರೆ ರಿಸೀವ್ ಮಾಡುವುದೇ ಇಲ್ಲ.

ಈಗಾಗಲೇ ಮಳೆ ಬಂದು ವ್ಯವಸಾಯ ಪ್ರಾರಂಭವಾಗಿದೆ, ಬಿತ್ತನೆ ಬೀಜ ತೆಗೆದುಕೊಳ್ಳಲು ಮತ್ತು ಜೀವನ ನಿರ್ವಹಣೆಗೆ ಹಣವಿಲ್ಲದಂತಾಗಿದೆ. ಕೇಳಿದರೆ ಸಾಫ್ಟ್‌ವೇರ್ ಅಪ್‌ಡೇಟ್ ಆಗಿಲ್ಲ ಎಂಬ ಉತ್ತರ ಬರುತ್ತದೆ. ಜೊತೆಗೆ ಯಾವುದೇ ಮಾಹಿತಿಯಿಲ್ಲದೇ ರಾಗಿ ಖರೀದಿ ಮಾಡುವುದನ್ನು ನಿಲ್ಲಿಸಿದ್ದು, ರೈತರು ರಾಗಿ ತಂದು ವಾಪಸ್ ಹೋಗುತ್ತಿದ್ದಾರೆ. ಇನ್ನು ಒಂದೆರಡು ದಿನದಲ್ಲಿ ಖರೀದಿ ಮಾಡಿದ ರಾಗಿಯ ಹಣ ಪಾವತಿಸದಿದ್ದರೆ ತಾಲೂಕು ಆಡಳಿತ ಸೌಧದ ಮುಂದೆ ಧರಣಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಪ್ರತಿಭಟನೆಯಲ್ಲಿ ಶಿವಣ್ಣಗೌಡ, ಕನ್ನಲಿಂಗೇಗೌಡ, ಗೋವಿಂದೇಗೌಡ, ಮಹೇಶ್, ಕೃಷ್ಣ, ಸತೀಶ, ಮುಂತಾದವರಿದ್ದರು.

ಬನ್ನಂಗಾಡಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಪಾಂಡವಪುರ,ಏ.27– ತಾಲೂಕಿನ ಬನ್ನಂಗಾಡಿ ಗ್ರಾಪಂನ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಜಯಲಕ್ಷ್ಮಮ್ಮ, ಉಪಾಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ತಮ್ಮೇಗೌಡ ಆಯ್ಕೆಯಾದರು.

17 ಮಂದಿ ಸದಸ್ಯರ ಸಂಖ್ಯಾಬಲ ಹೊಂದಿರುವ ಗ್ರಾಪಂನ ಹಿಂದಿನ ಅಧ್ಯಕ್ಷೆ ಪದ್ಮಮ್ಮ, ಉಪಾಧ್ಯಕ್ಷ ರಾಮಶೆಟ್ಟಿ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಬುಧವಾರ ಚುನಾವಣೆ ನಿಗದಿಯಾಗಿತ್ತು. ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಜಯಲಕ್ಷ್ಮಮ್ಮ ಒಬ್ಬರೇ ನಾಮಪತ್ರ ಸಲ್ಲಿಸಿದರು. ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಬಲರಾಮಶೆಟ್ಟಿ ಹಾಗೂ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ತಮ್ಮೇಗೌಡ ನಾಮಪತ್ರ ಸಲ್ಲಿಸಿದರು.

ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್‌ನ ಬೆಂಬಲಿತ ಅಭ್ಯರ್ಥಿ ಜಯಲಕ್ಷ್ಮಮ್ಮ ಅವರು ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಘೋಷಿಸಿದರು.

ಉಪಾಧ್ಯಕ್ಷ ಸ್ಥಾನಕ್ಕೆ ಎರಡು ನಾಮಪತ್ರಗಳು ಸಲ್ಲಿಕೆಯಾಗಿದ್ದ ಹಿನ್ನೆಲೆಯಲ್ಲಿ ಚುನಾವಣೆ ನಡೆಸಿದರು. ಅಂತಿಮವಾಗಿ ಜೆಡಿಎಸ್‌ನ ಬಲರಾಮಶೆಟ್ಟಿ–7 ಹಾಗೂ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ತಮ್ಮೇಗೌಡ–9 ಮತಗಳನ್ನು ಪಡೆದರು. 1 ಮತ ತಿರಸ್ಕೃತಗೊಂಡಿತ್ತು, 9 ಮತಗಳನ್ನು ಪಡೆದ ತಮ್ಮೇಗೌಡ ಅವರನ್ನು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಆರ್.ಪಿ.ಮಹೇಶ್ ಘೋಷಿಸಿದರು.

ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ ಘೋಷಣೆಯಾಗುತ್ತಿದ್ದಂತೆ ಅಭ್ಯರ್ಥಿಗಳು ಬೆಂಬಲಿಗರು ಮತ್ತು ಪಕ್ಷದ ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ವಿತರಿಸಿ ಸಂಭ್ರಮಿಸಿದರು.

ಈ ವೇಳೆ ಗ್ರಾಪಂ ಸದಸ್ಯರಾದ ಪ್ರಭಾಕರ್, ಯೋಗೇಶ್, ಗಾಯತ್ರಿ, ರವಿ, ಪದ್ಮಮ್ಮ, ಸವಿತಾ, ಪೂರ್ಣಿಮ, ವಸಂತ, ಆಶಾ, ಮಂಜು, ಅಂತನಹಳ್ಳಿ ರವಿ, ಶೃತಿ, ಮುಖಂಡರಾದ ಬಿ.ಟಿ.ಹುಚ್ಚೇಗೌಡ, ಬಿ.ಪಿ. ಶ್ರೀನಿವಾಸ್, ಕರೀಗೌಡ, ಗಿರಿಯಾರಹಳ್ಳಿ ವಾಸು, ಶಿವೇಗೌಡ, ನಾಗಣ್ಣ, ಶ್ರೀನಿವಾಸ್, ಹಾಳೇಗೌಡ, ದೇವರಾಜು, ಪುಟ್ಟಸ್ವಾಮಿಗೌಡ, ಪಿಡಿಒ ನಾರಾಯಣ್, ಕಾರ್ಯದರ್ಶಿ ವಿಶ್ವನಾಥ್ ಹಲವರು ಇದ್ದರು.

ಕೆ.ಆರ್.ಪೇಟೆ ಬಳಿ ಹಾವು ಕಚ್ಚಿ ರೈತ ಸಾವು



ಕೆ.ಆರ್.ಪೇಟೆ,ಏ.27– ಬಳಿ ಕೃಷಿ ಚಟುವಟಿಕೆಯಲ್ಲಿ ನಿರತನಾಗಿದ್ದ ರೈತರೊಬ್ಬರಿಗೆ ವಿಷಪೂರಿತ ಹಾವು ಕಡಿದ ಪರಿಣಾಮ ರೈತ ಮೃಪಟ್ಟಿರುವ ಘಟನೆ ತಾಲೂಕಿನ ಸೋಮನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಡಿ.ಜೆ.ನಾಗೇಂದ್ರ(40) ಮೃತ ರೈತ. ನಾಗೇಂದ್ರ ತಮ್ಮ ಜಮೀನಿನಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ಹಾವು ಕಚ್ಚಿದೆ. ಇದರಿಂದ ಅಸ್ವಸ್ಥಗೊಂಡಿದ್ದ ಅವರನ್ನು ಕೂಡಲೇ ಸೋಮನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗೆ ಕರೆದುಕೊಂಡು ಹೋಗುವ ಮಾರ್ಗಮಧ್ಯದಲ್ಲಿ ಕೊನೆಯುಸಿರೆಳೆದಿದ್ದಾರೆ. ಮೃತರು ಪತ್ನಿ, ಇಬ್ಬರು ಗಂಡು ಮಕ್ಕಳು, ಓರ್ವ ಹೆಣ್ಣು ಮಗಳು ಹಾಗೂ ತಂದೆ–ತಾಯಿಯನ್ನು ಅಗಲಿದ್ದಾರೆ.

57, 59ನೇ ವಾರ್ಡ್‌ನಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಮೈಸೂರು, ಏ.27(ಎಂಕೆ)– ಮೈಸೂರು ಮಹಾನಗರ ಪಾಲಿಕೆ ವಾರ್ಡ್ ನಂ.57, 59ರ ವ್ಯಾಪ್ತಿಯ ವಿವೇಕಾನಂದನಗರ ಮತ್ತು ಕುವೆಂಪುನಗರದಲ್ಲಿ ಶಾಸಕ ಎಸ್.ಎ. ರಾಮದಾಸ್ ಹಾಗೂ ಪ್ರಭಾರ ಮೇಯರ್ ಸುನಂದಾ ಪಾಲನೇತ್ರ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಬುಧವಾರ ಚಾಲನೆ ನೀಡಿದರು.

ಕುವೆಂಪುನಗರ 2ನೇ ಹಂತದ 3ನೇ ಮುಖ್ಯ ರಸ್ತೆ ಡಾಂಬರೀಕರಣ, ಒ–ಬ್ಲಾಕ್‌ನ 6ನೇ ಕ್ರಾಸ್‌ನಲ್ಲಿರುವ 'ಭಾರತ ಮಾತ ಉದ್ಯಾನವನದ ಬಳಿ ಹಾಗೂ ವಿವೇಕಾನಂದ ವೃತ್ತದ ಸಮೀಪದ 8ನೇ ಕ್ರಾಸ್‌ನಲ್ಲಿರುವ 'ಕಲ್ಯಾಣ ಉದ್ಯಾನವನದ ಬಳಿ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಶಾಸಕ ರಾಮದಾಸ್ ಮಾತನಾಡಿ, ಪಾಲಿಕೆ ವಾರ್ಡ್ ನಂ.57 ಮತ್ತು 59ರ ವ್ಯಾಪ್ತಿಯಲ್ಲಿ 16 ಬೂತ್ ಅಧ್ಯಕ್ಷರ ಮನೆಗಳಿಗೆ ಭೇಟಿ ನೀಡಿ, ನಾಮಫಲಕ ಅಳವಡಿಸಲಾಗಿದೆ. ಎರಡೂ ವಾರ್ಡ್‌ನ ಮತದಾರರು ಸದಾ ಬಿಜೆಪಿ ಬೆಂಬಲಿಸುತ್ತಾ ಬಂದಿದ್ದಾರೆ. ಕುಡಿಯುವ ನೀರು ಪೂರೈಕೆ, ಆರ್ಥಿಕವಾಗಿ ಹಿಂದುಳಿದವರಿಗೆ ಸೂರು ಕಲ್ಪಿಸುವ ಪ್ರಯತ್ನ ಮಾಡಲಾಗುತ್ತಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳನ್ನು ನಿವಾಸಿಗಳ ಮನೆ ಬಾಗಿಲಿಗೆ ತಲುಪಿಸುವ ಕೆಲಸವನ್ನು ಬಿಜೆಪಿ ಕಾರ್ಯಕರ್ತರು ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಹಿತಿ ಪುಸ್ತಕ ಬಿಡುಗಡೆ: ಕೆ.ಆರ್. ಕ್ಷೇತ್ರದಲ್ಲಿ ಇಲ್ಲಿಯವರೆಗೆ ಹಮ್ಮಿಕೊಂಡಿರುವ ಅಭಿವೃದ್ಧಿ ಯೋಜನೆಗಳ ಕುರಿತು ಮಾಹಿತಿಯುಳ್ಳ ಪುಸ್ತಕವನ್ನು ಸಿದ್ಧಪಡಿಸಲಾಗಿದ್ದು, ಹಿಂದಿ ಭಾಷೆಗೆ ಭಾಷಾಂತರಿಸಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಮೈಸೂರಿಗೆ ಬಂದಂತಹ ಸಂದರ್ಭದಲ್ಲಿ ಅವರಿಂದ ಬಿಡುಗಡೆಗೊಳಿಸಲಾಗುವುದು ಎಂದು ಹೇಳಿದರು.

ಬಿಜೆಪಿ ಕೆ.ಆರ್.ಕ್ಷೇತ್ರದ ಅಧ್ಯಕ್ಷ ಎಂ. ವಡಿವೇಲು, ಪ್ರಧಾನ ಕಾರ್ಯದರ್ಶಿಗಳಾದ ಓಂ ಶ್ರೀನಿವಾಸ್, ನಾಗೇಂದ್ರ ಕುಮಾರ್, ಉಪಾಧ್ಯಕ್ಷ ಸಂತೋಷ್ ಶಂಭು, ಗಿರೀಶ್, ಹೇಮಂತ್ ಕುಮಾರ್, ಸಂಪತ್, ಡಿಪೋ ರವಿ, ಮೈ.ಪು.ರಾಜೇಶ್, ರವಿ, ಮಾಯಾ ಜಗದೀಶ್, ಸುವರ್ಣಮ್ಮ ಆದರ್ಶ, ಪ್ರದೀಪ್ ಪ್ರಸಾದ್, ನಗರಪಾಲಿಕೆ ಅಧಿಕಾರಿ ಮತ್ತಿತರರಿದ್ದರು.

ರಂಜಾನ್ ಹಬ್ಬದ ಅಂಗವಾಗಿ ಪೀಠೋಪಕರಣಗಳ ವಿಶೇಷ ಮಾರಾಟ



ಮೈಸೂರು, ಏ.27– ಮೈಸೂರಿನ ಜೆ.ಕೆ. ಮೈದಾನದ ಬಳಿಯಿರುವ ಜಿಲ್ಲಾ ಸರ್ಕಾರಿ ನೌಕರರ ಭವನದಲ್ಲಿ ರಂಜಾನ್ ಹಬ್ಬದ ಅಂಗವಾಗಿ ಎ.ಎಂ.ಬಿಸಿನೆಸ್ ಗ್ರೂಪ್ ವತಿಯಿಂದ ಶೇ.50 ರಷ್ಟು ರಿಯಾಯಿತಿ ದರದಲ್ಲಿ ಪೀಠೋಪಕರಣಗಳ ಮಾರಾಟವನ್ನು ಏ.28 ರಿಂದ 30 ರವರೆಗೆ ಏರ್ಪಡಿಸಲಾಗಿದೆ. ಪ್ರತಿನಿತ್ಯ ಬೆಳಗ್ಗೆ 9 ರಿಂದ ರಾತ್ರಿ 9ರವರೆಗೆ ಮಾರಾಟವಿದ್ದು, ಇಲ್ಲಿ ಬರ್ಮಾ ಟೀಕ್‌ನಿಂದ ತಯಾರಿಸಲ್ಪಟ್ಟ ಎಲ್ಲಾ ಮಾದರಿಯ ಆಕರ್ಷಕ ಪೀಠೋಪಕರಣಗಳು ರಾಯಲ್ ಸೋಫಾ ಸೆಟ್, ಡೈನಿಂಗ್ ಸೆಟ್, ಕುಷನ್ ದಿವಾನ್, ಟಿವಿ ಸ್ಟ್ಯಾಂಡ್, ರೋಕಿಂಗ್ ಚೇರ್, ಡಬಲ್ ಕಾಟ್ ಹಾಗೂ ಇನ್ನಿತರೆ ಹಲವಾರು ಮಾದರಿಯ ಪೀಠೋಪಕರಣಗಳು ಒಂದೇ ಸೂರಿನಡಿ ಲಭ್ಯವಿವೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಮೈಸೂರು ಮಿತ್ರ ಗುರುವಾರ 28 ಏಪ್ರಿಲ್ 2022

ಶ್ರೀ ಚಾಮರಾಜೇಶ್ವರ ಸ್ವಾಮಿ ರಥೋತ್ಸವ ಈ ಬಾರಿ ಬಹುತೇಕ ಖಚಿತ!

- ಮೇ 13ರಂದು ಚಾ.ನಗರಕ್ಕೆ ನೂತನ ರಥ ಆಗಮನ
- ಜೂನ್‌ನಲ್ಲಿ ದೇವಸ್ಥಾನದಲ್ಲಿ ಕುಂಭಾಭಿಷೇಕ
- ಜುಲೈ 13ರಂದು ಆಷಾಢ ಮಾಸದ ಮಹಾರಥೋತ್ಸವ





ಈ ವರ್ಷ ನಗರದ ಶ್ರೀಚಾಮರಾಜೇಶ್ವರಸ್ವಾಮಿ ರಥೋತ್ಸವ ನಡೆಯುತ್ತದೆ. ಇದರಲ್ಲಿ ಯಾವುದೇ ಅನುಮಾನ ಬೇಡ. ನೂತನ ರಥವು ನಗರಕ್ಕೆ ಮೇ 13ರಂದು ಆಗಮಿಸಲಿದೆ. ಅಂದು ರಥವನ್ನು ನಗರದ ಮುಖ್ಯದ್ವಾರದಲ್ಲಿ ಅದ್ಧೂರಿಯಾಗಿ ಸ್ವಾಗತಿಸಿ ಮೆರವಣಿಗೆಯ ಮೂಲಕ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗಕ್ಕೆ ತರಲು ತೀರ್ಮಾನಿಸಲಾಗಿದೆ.

– ಸಿ.ಪುಟ್ಟರಂಗಶೆಟ್ಟಿ, ಶಾಸಕರು.

ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರಗೊಂಡಿರುವ ಕಾರಣ ಜೂನ್‌ನಲ್ಲಿ ಕುಂಭಾಭಿಷೇಕ ನಡೆಯಲಿದೆ. ಜುಲೈ 13ರಂದು ರಥೋತ್ಸವ ನಡೆಯಲಿದೆ.

– ರಾಮಕೃಷ್ಣ ಭಾರದ್ವಾಜ್, ಅರ್ಚಕರು, ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನ.

ಶ್ರೀಚಾಮರಾಜೇಶ್ವರಸ್ವಾಮಿ ನೂತನ ರಥದ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ರಥಕ್ಕೆ ಪಾಲಿಷ್ ಹಾಕುವ ಕೆಲಸ ಮಾತ್ರ ಬಾಕಿ ಇದ್ದು, ಈ ಕೆಲಸವನ್ನು ರಥ ನಗರಕ್ಕೆ ಬಂದ ನಂತರ ನಗರದಲ್ಲಿಯೇ ಮಾಡಲಾಗುವುದು.

– ಬಸವರಾಜು ಎಸ್.ಬಡಿಗೇರ, ರಥ ತಯಾರಕರು.

●ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಏ.27– ಇತಿಹಾಸ ಪ್ರಸಿದ್ಧ ಶ್ರೀಚಾಮರಾಜೇಶ್ವರಸ್ವಾಮಿಯ ಆಷಾಢ ಮಾಸದ ರಥೋತ್ಸವ ಈ ಬಾರಿ ನಡೆಯುವುದು ಬಹುತೇಕ ಖಚಿತವಾಗಿದೆ. ಇದು ಭಕ್ತರಲ್ಲಿ ಸಂತಸ ಉಂಟು ಮಾಡಿದ್ದು, ರಥೋತ್ಸವವನ್ನು ಎದುರು ನೋಡುತ್ತಿದ್ದಾರೆ.

ನೂತನ ರಥ ನಿರ್ಮಾಣವಾಗಿದ್ದು, ಮೇ 13ರಂದು ನಗರಕ್ಕೆ ಆಗಮಿಸಲಿದೆ. ಹೀಗಾಗಿ, ಜುಲೈ 13ರಂದು ರಥೋತ್ಸವ ನಡೆಯಲಿದೆ ಎಂದು ಹೇಳಲಾಗುತ್ತಿದೆ. ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ರಥೋತ್ಸವವು ನೂರಾರು ವರ್ಷಗಳಿಂದ ಪ್ರತಿವರ್ಷ ಆಷಾಢ ಮಾಸದಲ್ಲಿ ನಡೆಯುತ್ತಿತ್ತು ರಥೋತ್ಸವದಲ್ಲಿ ನೂತನ ದಂಪತಿಗಳು ಪಾಲ್ಗೊಂಡು ರಥಕ್ಕೆ ಹಣ್ಣು–ಧವನ ಎಸೆಯುವುದು ವಾಡಿಕೆ. ರಾಜ್ಯದ ನಾನಾ ಮೂಲಗಳಿಂದ ಸಹಸ್ರಾರು ಜನರು ರಥೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದರು. 2017ರಲ್ಲಿ ದೇವಸ್ಥಾನದ ಮುಂಭಾಗ ನಿಲ್ಲಿಸಿದ್ದ ದೊಡ್ಡ ರಥಕ್ಕೆ ಕಿಡಿಗೇಡಿಯೊಬ್ಬ ಬೆಂಕಿ ಹಚ್ಚಿದ ಕಾರಣ ರಥದ ಸ್ವಲ್ಪ ಭಾಗ ಸುಟ್ಟು ಹೋಯಿತು. ಸುಟ್ಟಿರುವ ರಥ ಬಳಸಿ ರಥೋತ್ಸವ ನಡೆಸುವುದು ಅಶುಭ ಎಂಬ ಕಾರಣದಿಂದ 2017ರಿಂದಲೇ ರಥೋತ್ಸವ ನಡೆದಿರಲಿಲ್ಲ.

ಕಳೆದ ಐದು ವರ್ಷಗಳಿಂದ (2017ರಿಂದ 2021ರವರೆಗೆ) ನೂತನ ರಥ ನಿರ್ಮಾಣ ಆಗಿರಲಿಲ್ಲ. ಹೀಗಾಗಿ, ಈ ಐದು ವರ್ಷಗಳಿಂದ ರಥೋತ್ಸವ ನಡೆದಿರಲಿಲ್ಲ. ಭಕ್ತರಲ್ಲಿ ಹಾಗೂ ನೂತನ ದಂಪತಿಗಳಲ್ಲಿ ನಿರಾಶೆ ಮೂಡಿಸಿತ್ತು. ಆದರೆ, ಈ ಬಾರಿ ಹೊಸ ರಥ ನಿರ್ಮಾಣ ಕಾರ್ಯ ಪೂರ್ಣಗೊಂಡಿರುವುದರಿಂದ ಆಷಾಢ ಮಾಸದಲ್ಲಿ ರಥೋತ್ಸವ ನಡೆಸಲು ಸಿದ್ಧತೆ ನಡೆಯುತ್ತಿದೆ.

ನೂತನ ರಥ ನಿರ್ಮಾಣಕ್ಕೆ ಈ ಹಿಂದಿನ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ 1.20ಕೋಟಿ ರೂ. ಅನುದಾನ ಬಿಡುಗಡೆಗೊಳಿಸಿತ್ತು ಈ ಹಣದಲ್ಲಿ 1 ಕೋಟಿ ವೆಚ್ಚದಲ್ಲಿ ರಥ ನಿರ್ಮಿಸಲಾಗಿದೆ. ನೂತನ ರಥವನ್ನು ಬೆಂಗಳೂರಿನ ಬಸವರಾಜು ಬಡಿಗೇರ ಅವರು ನಿರ್ಮಿಸಿದ್ದಾರೆ. ಇನ್ನುಳಿದ 20 ಲಕ್ಷ ವೆಚ್ಚದಲ್ಲಿ ರಥ ನಿಲ್ಲಿಸಲು ಶೆಡ್ ನಿರ್ಮಿಸಲಾಗಿದೆ. ಇದಲ್ಲದೇ 2.10 ಕೋಟಿ ರೂ. ವೆಚ್ಚದಲ್ಲಿ ದೇವಸ್ಥಾನದ ಜೀರ್ಣೋದ್ಧಾರ ಮಾಡಲಾಗಿದೆ.

ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿರುವುದರಿಂದ ಜೂನ್‌ನಲ್ಲಿ ಕುಂಭಾಭಿಷೇಕ ನಡೆಸಲು ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಮೇ 13ರಂದು ನಗರಕ್ಕೆ ನೂತನ ರಥ ತರಲಾಗುತ್ತಿದ್ದು, ಅದ್ಧೂರಿಯಾಗಿ ರಥವನ್ನು ಸ್ವಾಗತಿಸಲು ಪೂರ್ವ ತಯಾರಿ ಮಾಡಿಕೊಳ್ಳಲಾಗುತ್ತಿದೆ. ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ರಥದಲ್ಲಿ ನಿರ್ಮಾಣ ಮಾಡಿರುವ ಮಂಟಪದಂತೆ ನಗರದ ರಥಕ್ಕೂ ಮಂಟಪ ನಿರ್ಮಿಸಲು ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿದು ಬಂದಿದೆ.

ಈ ಬಾರಿ ರಥೋತ್ಸವ ನಡೆಸಲೇಬೇಕೆಂದು ತೀರ್ಮಾನಿಸಿರುವ ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳು ರಥೋತ್ಸವ ನಡೆಯುವ ತನಕ ಪ್ರತಿ ಬುಧವಾರ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಪೂರ್ವಭಾವಿ ಸಭೆಗಳನ್ನು ನಡೆಸಲು ತೀರ್ಮಾನಿಸಿದ್ದಾರೆ. ಅದರಂತೆ ಇಂದು ಸಹ ಸಭೆ ನಡೆಯಿತು.

ನಿಂತಿರುವ ರಥೋತ್ಸವ ನಡೆಸುವಂತೆ ಕನ್ನಡಪರ ಸಂಘಟನೆಗಳು ಹಾಗೂ ಭಕ್ತರು ಒತ್ತಾಯಿಸುತ್ತಿದ್ದಾರೆ. ಪ್ರಸ್ತುತ ಕೊರೊನಾ ಇಲ್ಲದಿರುವುದು ಹಾಗೂ ರಥದ ಆಗಮನಕ್ಕೆ ದಿನಾಂಕ ನಿಗದಿಯಾಗಿರುವುದರಿಂದ ರಥೋತ್ಸವ ನಡೆಸುವುದು ಖಚಿತವಾಗಿದೆ. ಆದರೆ, ಕೊರೊನಾ 4ನೇ ಅಲೆ ಭೀತಿ ಉಂಟಾಗಿದ್ದು, ಮುಂದಿನ ದಿನಗಳಲ್ಲಿ ಏನಾಗುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

'ಗ್ರಾಮ ಒನ್' ಕೇಂದ್ರ ತೆರೆಯಲು ಅರ್ಜಿ ಆಹ್ವಾನ

ಚಾಮರಾಜನಗರ, ಏ.27– ನಗರ ಪ್ರದೇಶಗಳಲ್ಲಿ ಜನರಿಗೆ ಸೇವೆ ನೀಡುತ್ತಿರುವ ಕರ್ನಾಟಕ ಒನ್ ಹಾಗೂ ಬೆಂಗಳೂರು ಒನ್ ಮಾದರಿಯಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ಭಾಗದ ಜನರಿಗೆ 'ಗ್ರಾಮ ಒನ್' ಮೂಲಕ ವಿವಿಧ ಇಲಾಖೆಗಳ ಸೇವೆಗಳನ್ನು ನೀಡುವ ಮಹತ್ವಾಕಾಂಕ್ಷೆಯೊಂದಿಗೆ ಜಿಲ್ಲೆಯಲ್ಲಿ 'ಗ್ರಾಮ ಒನ್' ಕೇಂದ್ರಗಳನ್ನು ತೆರೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಆಸಕ್ತರು ಏ.28ರಿಂದ ಮೇ 4ರೊಳಗಾಗಿ https;/www.karnatakaone.gov.in/Public/Gram One Frachisee Terms ಲಿಂಕ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ ಜಿಲ್ಲೆಯ ಮಾಹಿತಿ ಕೇಂದ್ರದ ದೂ. 08226–223160 ಇವರನ್ನು ಸಂಪರ್ಕಿಸಬಹುದು. ಅಲ್ಲದೆ, ವೆಬ್‌ಸೈಟ್ https://karnatakaone.gov.in ಅಥವಾ sevasindhu.karnataka.gov.in ಗೆ ಲಾಗಿನ್ ಆಗಬಹುದು.

ಹೆಲ್ಪ್‌ಡೆಸ್ಕ್: 7829274377, 9743669741, 9686579224 ಅಥವಾ ಈ–ಮೇಲ್:onehelpdesk@karnataka.gov.inಅನ್ನು ಸಂಪರ್ಕಿಸಬಹುದು.

ಕನಕಗಿರಿ ಅತಿಶಯ ಮಹೋತ್ಸವಕ್ಕೆ ಚಾಲನೆ



ಚಾಮರಾಜನಗರ, ಏ.27– ತಾಲೂಕಿನ ಮಲೆಯೂರು ಗ್ರಾಮದ ಹೊರವಲಯದ ಪ್ರಸಿದ್ಧ ಜೈನ ಕ್ಷೇತ್ರ ಕನಕಗಿರಿಯ ಅತಿಶಯ ಮಹೋತ್ಸವಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಶಿರಸಿ ಸಮೀಪದ ಸೋಂದಾ ಮಠದ ಭಟ್ಟಾಕಳಂಕ ಸ್ವಾಮೀಜಿ, ಮುನಿಶ್ರೀಗಳಾದ ಅಮರಕೀರ್ತಿ, ಅಮೋಘಕೀರ್ತಿ ಮಹಾರಾಜರು ಸಾನ್ನಿಧ್ಯ ವಹಿಸಿದ್ದರು. ಕನಕಗಿರಿ ಕ್ಷೇತ್ರದ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ ಧ್ವಜಸ್ತಂಭಕ್ಕೆ ಪೂಜೆ ಸಲ್ಲಿಸಿ ಧ್ವಜಾರೋಹಣ ನೆರವೇರಿಸಿದರು.

ಮುಂಜಾನೆಯಿಂದಲೇ ಮೂಲ ಮೂರ್ತಿಗೆ ಪಂಚಾಮೃತಾಭಿಷೇಕ, ನವಗ್ರಹ ಶಾಂತಿಹವನ ನಡೆದವು. ನಂತರ ಪೂಜ್ಯಪಾದರ ಯಜ್ಞಶಾಲಾ ಮಂಟಪ ಉದ್ಘಾಟನೆ ಕಾರ್ಯಕ್ರಮ ನೆರವೇರಿಸಲಾಯಿತು. ಇದೇ ವೇಳೆ ನವಗ್ರಹ ವಿಧಾನ ಆರಾಧನೆ ಶ್ರೀಗಳ ನೇತೃತ್ವದಲ್ಲಿ ಜರುಗಿದವು. ಕಾರ್ಯಕ್ರಮದಲ್ಲಿ ಕನಕಗಿರಿ ಅತಿಶಯ ಮಹೋತ್ಸವ ಸಮಿತಿ ಪದಾಧಿಕಾರಿಗಳು, ಜೈನ ಮಠದ ಭಕ್ತರು ಪಾಲ್ಗೊಂಡಿದ್ದರು.

ಸಕಾಲದಲ್ಲಿ ಸಾಲ ಮರು ಪಾವತಿಸಲು ಸಲಹೆ



ಗುಂಡ್ಲುಪೇಟೆ, ಏ.27 (ಸೋಮ್.ಜಿ)– ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವುದರೊಂದಿಗೆ ಸಹಕಾರ ಸಂಘದ ಹಿತ ಕಾಪಾಡಿ ಎಂದು ಚಾಮುಲ್ ಅಧ್ಯಕ್ಷ ಹೆಚ್.ಎಸ್.ನಂಜುಂಡಪ್ರಸಾದ್ ಹೇಳಿದರು.

ತಾಲೂಕಿನ ಹಾಲಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ 78 ಫಲಾನುಭವಿಗಳಿಗೆ 75 ಲಕ್ಷರೂ. ಸಾಲ ವಿತರಿಸಿ ಮಾತನಾಡಿದ ಅವರು, ಸಹಕಾರ ಸಚಿವರಾಗಿದ್ದ ಹೆಚ್.ಎಸ್.ಮಹದೇವ ಪ್ರಸಾದ್ ಅವರ ಕನಸಿನ ಕೂಸಾಗಿದ್ದ ಈ ಸಂಘವು ಎಲ್ಲಾ ರೀತಿಯಲ್ಲೂ ಜನತೆಗೆ ಅನುಕೂಲ ಮಾಡಿಕೊಟ್ಟಿದೆ. ಸಾಲ ಪಡೆದವರು ಸಕಾಲದಲ್ಲಿ ಮರು ಪಾವತಿ ಮಾಡುವುದರೊಂದಿಗೆ ಸಂಘದ ಏಳಿಗೆಗೆ ಶ್ರಮಿಸಬೇಕು ಎಂದರು. ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಮೂಡುಗೂರು ಎಂ.ಪಿ.ಸುನಿಲ್ ಮಾತನಾಡಿ, ಜಿಲ್ಲಾ ಸಹಕಾರ ಬ್ಯಾಂಕ್ ವತಿಯಿಂದ ಮಹಿಳಾ ಸಂಘಗಳಿಗೆ ಸಾಲ ನೀಡಲು ಕ್ರಮ ಕೈಗೊಳ್ಳಲಾಗಿದೆ ಎಂದರು. ಈ ಸಂದರ್ಭದಲ್ಲಿ ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್.ಬಸವರಾಜು, ಸಂಘದ ಅಧ್ಯಕ್ಷ ಜವರಶೆಟ್ಟಿ, ನಿರ್ದೇಶಕರಾದ ಮಹದೇವಪ್ಪ, ಶಿವೇಗೌಡ ಮತ್ತು ಆಡಳಿತ ಮಂಡಳಿಯ ನಿರ್ದೇಶಕರು, ಸಿಬ್ಬಂದಿ ವರ್ಗದವರು ಹಾಜರಿದ್ದರು.

ಲಂಚ ಪಡೆಯುವಾಗ ಎಸಿಬಿ ಬಲೆಗೆ ಗ್ರಾಮ ಲೆಕ್ಕಾಧಿಕಾರಿ



ಹನೂರು, ಏ.27(ಸೋಮು)– ಅಕ್ರಮ–ಸಕ್ರಮ ಯೋಜನೆಯಡಿ ಜಮೀನು ಮಂಜೂರು ಮಾಡಿಕೊಡಲು ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟಿದ್ದ ಗ್ರಾಮಲೆಕ್ಕಾಧಿಕಾರಿಯೋರ್ವ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳ ಬಲೆ ಬಿದ್ದಿರುವ ಘಟನೆ ಹನೂರು ಪಟ್ಟಣದಲ್ಲಿ ನಡೆದಿದೆ.

ತಾಲೂಕಿನ ರಾಮಾಪುರ ಹೋಬಳಿ ಕುರಟ್ಟಿ ಹೊಸೂರು ಗ್ರಾಮ ಲೆಕ್ಕಾಧಿಕಾರಿ ದಿನೇಶ್ ಎಸಿಬಿ ಬಲೆಗೆ ಬಿದ್ದ ಅಧಿಕಾರಿ. ಈತ ಶೆಟ್ಟಳ್ಳಿ ಗ್ರಾಮದ ಸ.ನಂ 310ರ 85 ಸೆಂಟು ಮತ್ತು 298ರ 77 ಸೆಂಟು ಸರ್ಕಾರಿ ಜಮೀನನ್ನು ಅಕ್ರಮ ಸಕ್ರಮ ಯೋಜನೆಯಡಿ ಮಂಜೂರು ಮಾಡಿಕೊಡಲು ಹಕ್ಕುಪತ್ರ ನೀಡುವುದಕ್ಕಾಗಿ ಅಗತ್ಯವಾದ ವರದಿಯನ್ನು ಮೇಲಧಿಕಾರಿಗಳಿಗೆ ಸಲ್ಲಿಸಲು 10ಸಾವಿರ ಹಣ ನೀಡುವಂತೆ ಒತ್ತಾಯಿಸುತ್ತಿದ್ದನು. ಇದರಿಂದ ಮನನೊಂದ ದೂರುದಾರ ಚಾಮರಾಜನಗರದ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ದೂರು ನೀಡಿದ್ದರು. ಬಾಧಿತ ವ್ಯಕ್ತಿಯ ದೂರಿನನ್ವಯ ಕಾರ್ಯಾಚರಣೆಗಿಳಿದ ಎಸಿಬಿ ಡಿವೈಎಸ್‌ಪಿ ಸದಾನಂದ ತಿಪ್ಪಣ್ಣವರ್ ಮತ್ತು ಅಧಿಕಾರಿಗಳ ತಂಡ ಟ್ರ್ಯಾಪ್ ಕಾರ್ಯಾಚರಣೆ ನಡೆಸಿ ಹನೂರು ಪಟ್ಟಣದ ತಹಸೀಲ್ದಾರ್ ಕಚೇರಿ ಆವರಣದಲ್ಲಿ ಹಣ ಪಡೆಯುವಾಗ ಬಲೆಗೆ ಕೆಡವಿದ್ದಾರೆ. ಕಾರ್ಯಾಚರಣೆಯಲ್ಲಿ ಎಸಿಬಿ ಇನ್ಸ್‌ಪೆಕ್ಟರ್ ಹರೀಶ್, ಸಿಬ್ಬಂದಿ ಮಹದೇವಸ್ವಾಮಿ, ಸತೀಶ್, ಕೃಷ್ಣಕುಮಾರ್, ನಾಗಲಕ್ಷ್ಮೀ, ಮಾದೇಶ್ ಇನ್ನಿತರರು ಭಾಗವಹಿಸಿದ್ದರು.

ಅಪ್ರಾಪ್ತೆ ಮೇಲೆ ಅತ್ಯಾಚಾರ: ಆರೋಪಿ ಬಂಧನ

ಚಾ.ನಗರ, ಏ.27(ಎಸ್‌ಎಸ್)– ಅಪ್ರಾಪ್ತೆಯನ್ನು ಪ್ರೀತಿಸಿ, ವಿವಾಹವಾಗುವುದಾಗಿ ನಂಬಿಸಿ ಆಕೆಯ ಮೇಲೆ ಅತ್ಯಾಚಾರವೆಸಗಿ ಆರೋಪಿಯೊಬ್ಬನನ್ನು ಪೊಲೀಸರು ಬಂಧಿಸಿರುವ ಘಟನೆ ನಗರದ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ತಾಲೂಕಿನ ಅರಳೀಪುರ ಗ್ರಾಮದ ಪ್ರಕಾಶ್(31) ಬಂಧಿತ ಆರೋಪಿ. ಈತ ಅಪ್ರಾಪ್ತೆಯನ್ನು ಪ್ರೀತಿಸಿ, ವಿವಾಹವಾಗುವುದಾಗಿ ಕರೆದೊಯ್ದು ಅತ್ಯಾಚಾರ ನಡೆಸಿದ ಆರೋಪದ ಮೇಲೆ ಪ್ರಕಾಶ್‌ನನ್ನು ಬಂಧಿಸಲಾಗಿದೆ ಎಂದು ಗ್ರಾಮಾಂತರ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಪುಟ್ಟಸ್ವಾಮಿ ತಿಳಿಸಿದರು. ಏ.20ರಂದು ಬಾಲಕಿ ಕಾಣೆಯಾಗಿದ್ದಳು. ಈ ಬಗ್ಗೆ ಕುಟುಂಬದವರು ಗ್ರಾಮಾಂತರ ಠಾಣೆಯಲ್ಲಿ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ತನಿಖೆ ಕೈಗೊಂಡ ಪೊಲೀಸರು ಆರೋಪಿ ಮತ್ತು ಬಾಲಕಿ ತಮಿಳುನಾಡಿನಲ್ಲಿರುವುದನ್ನು ಪತ್ತೆಹಚ್ಚಿ, ಅಲ್ಲಿಗೆ ತೆರಳಿ ಆರೋಪಿ ಪ್ರಕಾಶ್‌ನನ್ನು ಬಂಧಿಸಿ, ಬಾಲಕಿಯನ್ನು ನಗರದ ಬಾಲ ಮಂದಿರಕ್ಕೆ ಕಳುಹಿಸಿದ್ದಾರೆ.

ಸೋಮವಾರಪೇಟೆ ಸುತ್ತ ಮುತ್ತ ಆಲಿಕಲ್ಲು ಸಹಿತ ಧಾರಾಕಾರ ಮಳೆ

ಅಚ್ಚರಿ ಮೂಡಿಸಿದ 25 ಕೆಜಿ ತೂಕದ ಆಲಿಕಲ್ಲು



ಸೋಮವಾರಪೇಟೆ,ಏ.27– ಪಟ್ಟಣ ಸೇರಿದಂತೆ ಗ್ರಾಮೀಣ ಭಾಗದಲ್ಲಿ ಮಂಗಳವಾರ ರಾತ್ರಿ ಗುಡುಗು ಸಹಿತ ಧಾರಾಕಾರ ಮಳೆಯಾಗಿದ್ದು, ಅಲ್ಲಲ್ಲಿ ಹಾನಿಯಾಗಿದೆ.

ಕೆಲ ಗ್ರಾಮದಲ್ಲಿ ಆಲಿಕಲ್ಲು ಸಹಿತ ಮಳೆ ಸುರಿದು ಹಸಿ ಮೆಣಸಿನ ಗಿಡಗಳು ಮುರಿದು ಬಿದ್ದು ಹಾನಿಯಾಗಿದೆ. ಕುಂದಳ್ಳಿ ಗ್ರಾಮದಲ್ಲಿ 25 ಕೆ.ಜಿ.ತೂಕದ ಆಲಿಕಲ್ಲು ಬಿದ್ದಿದ್ದು, ಬೆಳಗ್ಗೆ ತನಕ ಕರಗದೆ ಗ್ರಾಮಸ್ಥರಲ್ಲಿ ಆಚ್ಚರಿ ಮೂಡಿಸಿದೆ.

ಗ್ರಾಮದ ಮಂಜುಳಾ ಮತ್ತು ದೃತನ್ ಬುಧವಾರ ಬೆಳಿಗ್ಗಿನ ಜಾವ ಕೃಷಿ ಭೂಮಿಗೆ ತೆರಳುವ ಸಂದರ್ಭ ಕಟ್ಟೆ ಮರದ ಸಮೀಪ ಈ ಆಲಿಕಲ್ಲು ಗೋಚರಿಸಿದೆ.

ಅನೇಕ ಕಡೆ ಕಾಫಿ ತೋಟದೊಳಗೆ ಮರಗಳು ನೆಲಕ್ಕುರುಳಿ ಹಾನಿಯಾಗಿದೆ. ಹೊನವಳ್ಳಿ ಗ್ರಾಮದ ಸಮೀಪದ ರಾಜ್ಯ ಹೆದ್ದಾರಿಗೆ ಮರವೊಂದು ಬಿದ್ದ ಪರಿಣಾಮ ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು. ನಂತರ ಸ್ಥಳೀಯರು ಮರವನ್ನು ಕಡಿದು ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಮಳೆ ಸುರಿದಿರುವುದು ಕಾಫಿ ತೋಟಕ್ಕೆ ಉಪಯೋಗವಾಗಿದ್ದು, ಹಸಿಮೆಣಸಿನ ಬೆಳೆಗಾರರು ನಷ್ಟ ಅನುಭವಿಸುವಂತಾಗಿದೆ. ಕಿಬ್ಬೆಟ್ಟ ಗ್ರಾಮದ ಮುದ್ದ ಎಂಬವರ ಮನೆಯ ಹೆಂಚುಗಳು ಹಾರಿ ಹೋಗಿದ್ದು, ಗೋಡೆ ಬಿರುಕು ಬಿಟ್ಟಿದೆ.

ಕುಶಾಲನಗರದಲ್ಲಿ ಧ್ಯಾನ ಶಿಬಿರ



ಗುಡ್ಡೆಹೊಸೂರು,ಏ.28– ಕುಶಾಲನಗರದ ರಾಧಕೃಷ್ಣ ಬಡಾವಣೆಯ ಲ್ಲಿರುವ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ "ದಿವ್ಯದರ್ಶನ ಭವನ"ದಲ್ಲಿ ಒತ್ತಡಮುಕ್ತಿ ಮತ್ತು ರೋಗ ನಿರೋಧಕ ಶಕ್ತಿಗಾಗಿ ಧ್ಯಾನ ಶಿಬಿರ ನಡೆಯುತ್ತಿದೆ. ಒಂದು ವಾರಗಳ ಕಾಲ ನಡೆಯುವ ಶಿಬಿರವು ಏ.27 ರಿಂದ ಪ್ರಾರಂಭವಾಗಿದೆ. ಶಿಬಿರವನ್ನು ಮೈಸೂರು ಕೇಂದ್ರದ ಬಿ.ಕೆ.ಪ್ರಾಣೇಶ್ ನಡೆಸುತ್ತಿದ್ದಾರೆ. ಒಂದು ವಾರ ಕಾಲ ನಡೆಯುವ ಶಿಬಿರದಲ್ಲಿ ಬೆಳಗ್ಗೆ 7 ರಿಂದ 8.30 ವರೆಗೆ ಮತ್ತು ಸಂಜೆ 6.30 ರಿಂದ 8 ಗಂಟೆವರೆಗೆ ಪ್ರವಚನ ನಡೆಯುತ್ತಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಮಾಹಿತಿಗೆ ಮೊಬೈಲ್ ಸಂಖ್ಯೆ 8431083674, 9880283753 ಸಂಪರ್ಕಿಸಲು ಕುಶಾಲನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಸಂಸ್ಥಾಪನಾ ದಿನಾಚರಣೆ

ಕೊಡವ ಪಠ್ಯ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ



ಮಡಿಕೇರಿ, ಏ.27– ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ ಮಂಗಳವಾರ ಪೊನ್ನಂಪೇಟೆಯ ಅಪ್ಪಚ್ಚಕವಿ ವಿದ್ಯಾಲಯದಲ್ಲಿ ಅಕಾಡೆಮಿಯ 28ನೇ ಸಂಸ್ಥಾಪನಾ ದಿನ ಆಚರಿಸಲಾಯಿತು.

ಅಕಾಡೆಮಿಯ ಅಧ್ಯಕ್ಷರಾದ ಡಾ.ಅಮ್ಮಾಟಂಡ ಪಾರ್ವತಿ ಅಪ್ಪಯ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಅಕಾಡಮಿಯು ಕೊಡವ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆಗಳಿಗೆ ಉತ್ತೇಜನ ನೀಡುತ್ತಿದೆ. ಕೊಡವ ಭಾಷೆಯು ಈಗ ಸಾಂಸ್ಕೃತಿಕ ಭಾಷೆಯಲ್ಲದೆ, ಓದುವ ಭಾಷೆಯಾಗಿದೆ. ಈಗಾಗಲೇ ಕೊಡವ ಪಾಠ ಪಡಿಪು 1 ಪಠ್ಯ ಪುಸ್ತಕ ತಯಾರಾಗಿ 1ನೇ ತರಗತಿಯ ಮಕ್ಕಳು ಕಲಿತು ಪರೀಕ್ಷೆ ಬರೆದು ಇಂದು ಅಕಾಡೆಮಿಯ ವತಿಯಿಂದ ಪ್ರಮಾಣ ಪತ್ರವನ್ನು ನೀಡಲಾಗಿದೆ. ಕೊಡವ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ಬೆಳೆಸಬೇಕಾದರೆ ಇದಕ್ಕೆ ಎಲ್ಲರ ಸಹಕಾರ ಬಹಳ ಮುಖ್ಯ ಎಂದು ಹೇಳಿದರು.

ಕೊಡವ ಭಾಷೆ ಬೆಳೆಯಲು ಸತತ ಪ್ರಯತ್ನ ನಡೆಯುತ್ತಿದೆ. ಕೊಡವ ಭಾಷೆಯನ್ನು 8 ನೇ ಪರಿಚ್ಛೇದಕ್ಕೆ ಸೇರಿಸುವುದು, ಕೊಡವ ಭಾಷೆಯನ್ನು ರಾಜ್ಯದಲ್ಲಿ 3ನೇ ಭಾಷೆಯಾಗಿ ಸೇರಿಸುವ ಪ್ರಯತ್ನ ಅಕಾಡೆಮಿಯಿಂದ ಸತತವಾಗಿ ಇಂದಿನವರೆಗೂ ನಡೆಯುತ್ತಾ ಬಂದಿದೆ ಎಂದರು.

ಸಂಸ್ಥಾಪನಾ ದಿನವನ್ನು ಇದೇ ಮೊದಲ ಬಾರಿಗೆ ಆಚರಿಸಲಾಗುತ್ತಿದೆ. ಡಾ.ಪಾರ್ವತಿ ಅಪ್ಪಯ್ಯ ಅವರು ಅಕಾಡೆಮಿಯ ಉದಯ, ಬೆಳೆದು ಬಂದ ದಾರಿ, ಅಕಾಡೆಮಿಯಲ್ಲಿ ನಡೆದ ಕೆಲಸಗಳು ಹಾಗೂ ಈಗ ಮಾಡುತ್ತಿರುವ ಹೊಸಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

ಶತಮಾನೋತ್ಸವ ಪ್ರಯುಕ್ತ ಬಿ.ಡಿ.ಗಣಪತಿ ಸ್ಮರಣ ಸಂಚಿಕೆಯನ್ನು ಅವರ ಮಗಳಾದ ತೀತರಮಾಡ ಲಾಜ್ ಗಣಪತಿ ಹಾಗೂ ಐ.ಮಾ.ಮುತ್ತಣ್ಣ, ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಐಮುಡಿಯಂಡ ರಾಣಿ ಮಾಚಯ್ಯ ಅವರು ಬಿಡುಗಡೆ ಮಾಡಿದರು.

ಅತಿಥಿಗಳಾಗಿ ಭಾಗವಹಿಸಿದ ಕಾಳಿಮಾಡ ಮೋಟಯ್ಯ ಮಾತನಾಡಿ, ಅಕಾಡೆಮಿಯು ಕೊಡವ ಭಾಷೆಯನ್ನು ಬೆಳೆಸಲು ಹಿಂದಿನಿಂದಲೇ ಶ್ರಮಪಡುತ್ತಾ ಬಂದಿದೆ. ಸಂಸ್ಕೃತಿ ಉಳಿಸುವ ಕೆಲಸವನ್ನು ಎಲ್ಲರೂ ಮಾಡೋಣ ಆಗ ಮಾತ್ರ ಕೊಡವ ಭಾಷೆ, ಕೊಡವ ಜನಾಂಗ ಬೆಳೆಯಲು ಸಾಧ್ಯ ಎಂದು ಹೇಳಿದರು.

ಕೊರಕುಟ್ಟಿರ ಸರಚಂಗಪ್ಪ ಅವರು ಮಾತನಾಡಿ ಅಕಾಡೆಮಿಯು ಕಲೆಗೆ, ಸಾಹಿತ್ಯಕ್ಕೆ ಹಾಗೂ ಸಂಶೋಧನೆಗೆ ಪ್ರೋತ್ಸಾಹ ನೀಡುತ್ತಿರುವುದು ಸಂತೋಷದ ವಿಷಯ. ಅಕಾಡೆಮಿಯು ಇನ್ನೂ ಎತ್ತರದ ಮಟ್ಟದಲ್ಲಿ ಬೆಳೆಯಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಚಿರಿಯಪಂಡ ರಾಜಾನಂಜಪ್ಪ, ಮಂಡೆಚಂಡ ದಿನೇಶ್ ಚಿಟ್ಟಿಯಪ್ಪ ಅವರು ಉಪಸ್ಥಿತರಿದ್ದು, ಅಕಾಡೆಮಿಯ ಕಾರ್ಯಕ್ಕೆ ಶುಭ ಹಾರೈಸಿದರು. ಅಕಾಡೆಮಿ ಮಾಜಿ ಅಧ್ಯಕ್ಷರಾದ ಚಿರಿಯಪಂಡ ರಾಜಾ ನಂಜಪ್ಪ, ಐಮುಡಿಯಂಡ ರಾಣಿ ಮಾಚಯ್ಯ ಹಾಗೂ ಪೆಮ್ಮಂಡ ಪೊನ್ನಪ್ಪ ಅವರನ್ನು ಸನ್ಮಾನಿಸಲಾಯಿತು.

ಕೊಡವ ಪಾಠ ಪಡಿಪು–1 ಕಲಿತು ಪರೀಕ್ಷೆ ಬರೆದು ಉತ್ತೀರ್ಣರಾದ 81 ಮಕ್ಕಳಿಗೆ ಪ್ರಮಾಣ ಪತ್ರವನ್ನು ಅಕಾಡೆಮಿ ವತಿಯಿಂದ ಉಪಾಧ್ಯಾಯರ ಮೂಲಕ ವಿತರಿಸಲಾಯಿತು.

ಅಕಾಡೆಮಿಯ ಸದಸ್ಯರಾದ ಬಾಚಮ್ಮಂಡ ಗೌರಮ್ಮ ಮಾದಮ್ಮಯ್ಯ, ಮಾಚಿಮಾಡ ಜಾನಕಿ ಮಾಚಯ್ಯ, ಪಡಿಞಾರಂಡ ಪ್ರಭುಕುಮಾರ್ ಹಾಗೂ ತೇಲಪಂಡ ಕವನ್ ಕಾರ್ಯಪ್ಪ ಅವರು ಇದ್ದರು.

ಅಪ್ಪಚ್ಚಕವಿ ಶಾಲೆಯ ಚರಿತ ಮತ್ತು ತಂಡದವರು ಪ್ರಾರ್ಥಿಸಿದರು. ಅಕಾಡೆಮಿಯ ಸದಸ್ಯರಾದ ಪಡಿಞಾರಂಡ ಪ್ರಭುಕುಮಾರ್ ಅವರು ಸ್ವಾಗತಿಸಿದರು. ತೇಲಪಂಡ ಕವನ್ ಕಾರ್ಯಪ್ಪ ನಿರೂಪಿಸಿದರು.

ಮಡಿಕೇರಿಯಲ್ಲಿ ತುಳುವೆರ ಜನಪದ ಕೂಟದ ಸಭೆ



ಮಡಿಕೇರಿ, ಏ.27– ಕೊಡಗು ಜಿಲ್ಲಾ ತುಳುವೆರ ಜನಪದ ಕೂಟದ ಜಿಲ್ಲಾ ಪ್ರಮುಖರ ಸಭೆ ನಗರದ ಖಾಸಗಿ ಹೊಟೇಲ್ ಸಭಾಂಗಣದಲ್ಲಿ ನಡೆಯಿತು.

ಕೂಟದ ಜಿಲ್ಲಾಧ್ಯಕ್ಷ ಬಿ.ಬಿ.ಐತ್ತಪ್ಪ ರೈ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಂಘಟನೆ ಮತ್ತು ವಿವಿಧ ಕಾರ್ಯ ಯೋಜನೆಯ ಕುರಿತು ಚರ್ಚಿಸಲಾಯಿತು.

ಜಿಲ್ಲೆಯಲ್ಲಿ ತುಳು ಭಾಷಿಕರು ಕಡ್ಡಾಯವಾಗಿ ಸದಸ್ಯತ್ವ ಪಡೆದುಕೊಳ್ಳುವಂತೆ ಪ್ರೇರೇಪಿಸುವುದು, ತುಳು ಸಂಘಟನೆಗಳನ್ನು ಪ್ರತಿ ಗ್ರಾಮ, ಹೋಬಳಿ ಮಟ್ಟದಲ್ಲಿ ಸಂಘಟಿಸುವುದು, ತುಳುವಿಗೆ ಸಂಬಂಧಪಟ್ಟ ಕಾರ್ಯಕ್ರಮ ಹಮ್ಮಿಕೊಳ್ಳುವುದು ಸೇರಿದಂತೆ ವಿವಿಧ ವಿಚಾರಗಳ ಬಗ್ಗೆ ನಿರ್ಧಾರ ಕೈಗೊಳ್ಳಲಾಯಿತು.

ಕೂಟದ ಸ್ಥಾಪಕಾಧ್ಯಕ್ಷ ಶೇಖರ್ ಭಂಡಾರಿ, ಜಿಲ್ಲಾ ಉಪಾಧ್ಯಕ್ಷ ಬಿ.ವೈ.ಆನಂದ ರಘು, ಪ್ರಧಾನ ಕಾರ್ಯದರ್ಶಿ ಪಿ.ಎಂ.ರವಿ, ಖಜಾಂಚಿ ಪ್ರಭು ರೈ, ಸಲಹೆಗಾರ ಶ್ರೀಧರ್ ನೆಲ್ಲಿತ್ತಾಯ, ಸ್ಥಾಪಕ ಸಲಹೆಗಾರ ಕೆ.ಆರ್.ಬಾಲಕೃಷ್ಣ ರೈ, ಗೌರವ ಸಲಹೆಗಾರ ಹರೀಶ್ ಆಳ್ವ, ಮಡಿಕೇರಿ ತಾಲೂಕು ಅಧ್ಯಕ್ಷ ಸುರೇಶ್ ಕುಲಾಲ್, ಜಿಲ್ಲಾ ಕಾರ್ಯದರ್ಶಿ ಆನಂದ್, ಉಪಾಧ್ಯಕ್ಷೆ ವಿಜಯಲಕ್ಷ್ಮಿ ರವಿ ಶೆಟ್ಟಿ, ಸಂಘಟನಾ ಕಾರ್ಯದರ್ಶಿ ರಾಜೀವ್ ಲೋಚನ, ನಿರ್ದೇಶಕರಾದ ಲೀಲಾ ಶೇಷಮ್ಮ, ಸಂಧ್ಯಾ ಗಣೇಶ್ ರೈ, ಗಿರೀಶ್ ರೈ, ಬಿ.ಎಸ್.ಪುರುಷೋತ್ತಮ, ಸುಜಾತ ಚಂದ್ರಶೇಖರ್, ಅಶೋಕ ಆಚಾರ್ಯ, ನಾಗರಾಜ್ ಉಪಸ್ಥಿತರಿದ್ದರು.

ವ್ಯಕ್ತಿ ನೇಣಿಗೆ ಶರಣು



ಸೋ.ಪೇಟೆ, ಏ.27– ಇಲ್ಲಿಗೆ ಸಮೀಪದ ಬೀರೆಬೆಟ್ಟ ಗ್ರಾಮದ ದಿವಂಗತ ಪಾಪಣ್ಣ ಅವರ ಪುತ್ರ ವೇಣುಕುಮಾರ್(35) ಬುಧವಾರ ತಮ್ಮ ಮನೆಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಳೆದ ಕೆಲವು ವರ್ಷಗಳಿಂದ ಅನಾರೋಗ್ಯಕ್ಕೆ ತುತ್ತಾಗಿದ್ದ ಇವರು ಮನನೊಂದು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿದು ಬಂದಿದೆ. ಅವಿವಾಹಿತರಾಗಿದ್ದ ಇವರು ಓರ್ವ ಸಹೋದರಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವ ಗ್ರಾಮದಲ್ಲಿ ನಡೆಯಿತು.

ಬಿಸಿಯೂಟ ನೌಕರರ ಬೇಡಿಕೆ ಈಡೇರಿಕೆಗೆ ಆಗ್ರಹ



ಬಿಸಿಯೂಟ ನೌಕರರ ಖಾಯಮಾತಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ತಹಸೀಲ್ದಾರ್ ಆರ್.ಯೋಗಾನಂದ ಮೂಲಕ ಶಿಕ್ಷಣ ಸಚಿವರಿಗೆ ಸಿಐಟಿಯು ವತಿಯಿಂದ ಮನವಿ ಸಲ್ಲಿಸಲಾಯಿತು.

ವಿರಾಜಪೇಟೆ ಏ.27– ಬಿಸಿಯೂಟ ನೌಕರರನ್ನು ಖಾಯಂ ನೌಕರರೆಂದು ಗುರುತಿಸಿ ಸರ್ಕಾರ ಶಾಸನಾತ್ಮಕ ಸೌಲಭ್ಯಗಳನ್ನು ಜಾರಿ ಮಾಡಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಮನವಿಯನ್ನು ಕೊಡಗು ಜಿಲ್ಲಾ ಸಮಿತಿ ಮತ್ತು ಸಿಐಟಿಯು ಸಂಘಟನೆಯಿಂದ ತಹಸೀಲ್ದಾರ್ ಆರ್.ಯೋಗನಂದ ಅವರ ಮೂಲಕ ಪ್ರೌಢ ಶಿಕ್ಷಣ ಸಚಿವರಿಗೆ ಸಲ್ಲಿಸಿದರು.

ಬಿಸಿಯೂಟ ನೌಕರರು 60 ವರ್ಷದ ನಂತರ ಕೆಲಸದಿಂದ ಬಿಡುಗಡೆ ಗೊಳಿಸುವಾಗ ನಿವೃತ್ತಿ ವೇತನ ನೀಡಬೇಕು. ಬಜೆಟ್‌ನಲ್ಲಿ ಬಿಸಿಯೂಟ ನೌಕರರಿಗೆ ಹೆಚ್ಚಿಸಿರುವ 1000 ರೂ. ವೇತನವನ್ನು 2022 ಜನವರಿಯಿಂದ ಅನ್ವಯಿಸಿ ಜಾರಿ ಮಾಡಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಈ ವೇಳೆ ಅಕ್ಷರ ದಾಸೋಹ ನೌಕರರ ಜಿಲ್ಲಾ ಅಧ್ಯಕ್ಷೆ ಕೆ.ಎ.ಪ್ರಮಿಳಾ ಮಾತನಾಡಿ, ಶಾಲಾವಧಿಯ ನಂತರ ನರೇಗಾ ಯೋಜನೆಯಡಿ ಶಾಲಾ ಕೈತೋಟದ ಕೆಲಸ ನೀಡಿ ವೇತನ ನೀಡುವಂತಾಗಬೇಕು, ಬಿಸಿಯೂಟ ನೌಕರರನ್ನು ನೇರವಾಗಿ ಶಿಕ್ಷಣ ಇಲಾಖೆಯಡಿಯಲ್ಲಿಯೇ ಮೇಲ್ವಿಚಾರಣೆ ನಡೆಸಬೇಕು, ಪ್ರತಿ ತಿಂಗಳು 5ನೇ ತಾರೀಖಿನೊಳಗೆ ವೇತನ ಪಾವತಿಸಬೇಕು, ಮಕ್ಕಳ ಅಪೌಷ್ಠಿಕತೆ ತಡೆ ಹಿಡಿಯಲು ಅನುಕೂಲವಾಗುವ ಮೊಟ್ಟೆ–ಬಾಳೆಹಣ್ಣನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಬೇಕು ಹಾಗೂ ರಾಜ್ಯದಲ್ಲಿ ಶಿಕ್ಷಣ ಇಲಾಖೆಯ ಶಿಫಾರಸಿನಂತೆ ವೇತನ ಹೆಚ್ಚಿಸಬೇಕು ಎಂದು ಒತ್ತಾಯಿಸಿ ಸಚಿವರಿಗೆ ತಹಸೀಲ್ದಾರ್ ಮೂಲಕ ಸಲ್ಲಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸಿಐಟಿಯು ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಸಿ.ಸಾಬು, ಅಕ್ಷರ ದಾಸೋಹ ತಾಲೂಕು ಅಧ್ಯಕ್ಷೆ ನ್ಯಾನ್ಸಿ, ಖಜಾಂಚಿ ಸಂಧ್ಯಾ ಇತರರು ಉಪಸ್ಥಿತರಿದ್ದರು.

ಕುಶಾಲನಗರದಲ್ಲಿ ಮಲೇರಿಯಾ ಜಾಗೃತಿ ಜಾಥಾ



ಕುಶಾಲನಗರ, ಏ.27– ಆರೋಗ್ಯ ಇಲಾಖೆ ಹಾಗೂ ಸೋಮವಾರಪೇಟೆ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಆಶ್ರಯದಲ್ಲಿ ಕುಶಾಲನಗರದಲ್ಲಿ ವಿಶ್ವ ಮಲೇರಿಯಾ ದಿನ ಆಚರಣೆ ನಡೆಯಿತು.

ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮವನ್ನು ಕುಶಾಲನಗರ ಪಪಂ ಅಧ್ಯಕ್ಷ ಬಿ.ಜೈವರ್ಧನ್ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಜನರ ಆರೋಗ್ಯ ರಕ್ಷಣೆಯಲ್ಲಿ ಪ್ರಾಮಾಣಿಕವಾದ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ವಿಚಾರ ಎಂದರು. ಪಪಂ ಸದಸ್ಯ ಎಂ.ಬಿ.ಸುರೇಶ್ ಮಾತನಾಡಿ, ಸಾಂಕ್ರಾಮಿಕ ರೋಗಗಳ ಹರಡುವಿಕೆ, ನಿಯಂತ್ರಣ ಕ್ರಮಗಳ ಬಗ್ಗೆ ಆರೋಗ್ಯ ಇಲಾಖೆ ಸೂಕ್ತ ರೀತಿಯಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಉಂಟು ಮಾಡಬೇಕಿದೆ ಎಂದರು. ನಂತರ ಜಾಗೃತಿ ಜಾಥಾಕ್ಕೆ ಚಾಲನೆ ನೀಡಲಾಯಿತು. ಕುಶಾಲನಗರದ ಪ್ರಮುಖ ಬೀದಿಗಳಲ್ಲಿ ಜಾಗೃತಿ ಜಾಥಾ ನಡೆಯಿತು

ಸಿ.ಎಚ್.ಓ, ಪಿ.ಸಿ.ಓ, ಎಚ್.ಐ.ಓ, ಆಶಾ ಕಾರ್ಯಕರ್ತರು ಜಾಥಾದಲ್ಲಿ ಭಾಗಿಯಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು. ಈ ಸಂದರ್ಭ ತಾಲೂಕು ಆರೋಗ್ಯಾಧಿಕಾರಿ ಡಾ.ಶ್ರೀನಿವಾಸ್, ಶಿಕ್ಷಣಾಧಿಕಾರಿ ಎಚ್.ಕೆ.ಶಾಂತಿ, ಇಲಾಖೆ ಪ್ರಮುಖರಾದ ವಿಶ್ವಜ್ಞ, ಅಶ್ವಿನಿ, ಕವಿತಾ, ಮಹೇಶ್, ಉಮೇಶ್, ಮುಖೇಶ್, ಚಂದ್ರೇಶ್, ರಮ್ಯ ಇದ್ದರು.

ಪ್ರತಿ ಕ್ಷೇತ್ರಕ್ಕೂ ಕಾಂಗ್ರೆಸ್‌ನಿಂದ ಪ್ರತ್ಯೇಕ ಪ್ರಣಾಳಿಕೆ

ಶತಾಯಗತಾಯ ಚುನಾವಣೆ ಗೆಲ್ಲಲು ರಣತಂತ್ರ

ಬೆಂಗಳೂರು, ಏ.27(ಕೆಎಂಶಿ)–ಕರ್ನಾಟಕದಲ್ಲಿ ಶತಾಯಗತಾಯ ಅಧಿಕಾರದ ಚುಕ್ಕಾಣಿ ಹಿಡಿಯಲು ಹವಣಿಸುತ್ತಿರುವ ಕಾಂಗ್ರೆಸ್ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪ್ರತಿ ಕ್ಷೇತ್ರಕ್ಕೂ ಪ್ರತ್ಯೇಕ ಪ್ರಣಾಳಿಕೆ ನೀಡಲಿದೆ. ಪ್ರದೇಶ ಕಾಂಗ್ರೆಸ್ ನೂತನ ಪದಾಧಿಕಾರಿಗಳ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪ್ರತಿ ಕ್ಷೇತ್ರಗಳ ಸಮಸ್ಯೆಗಳನ್ನು ಗುರುತಿಸಿ ಅವುಗಳ ಪರಿಹಾರಕ್ಕೆ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಸಂಕಲ್ಪ ಮಾಡಲಾಗುವುದು ಎಂದರು. ಚುನಾವಣೆ ಮುಗಿಯುವವರೆಗೂ ನೂತನ ಪದಾಧಿಕಾರಿಗಳು ವಿಶ್ರಮಿಸದೆ, ಹಗಲು–ರಾತ್ರಿ ಎನ್ನದೆ ಕಾರ್ಯಪ್ರವೃತ್ತರಾಗ ಬೇಕು ಎಂದು ಸೂಚಿಸಲಾಗಿದೆ. ಬಿಜೆಪಿ ಆಡಳಿತದಲ್ಲಿನ ಜನ ವಿರೋಧಿ ನೀತಿ ಹಾಗೂ ಸರ್ಕಾರದ ದೌರ್ಬಲ್ಯಗಳನ್ನು ಜನರ ಮುಂದಿಡುವಂತೆ ತಿಳಿಸಲಾಗಿದೆ. ಯಾವುದೇ ಒಂದು ಜನಾಂಗವನ್ನು ಓಲೈಸುವುದನ್ನು ಬಿಟ್ಟು ಎಲ್ಲಾ ಜನಾಂಗದ ವಿಶ್ವಾಸವನ್ನು ಪಡೆದುಕೊಳ್ಳುವಂತೆ ಆದೇಶ ಮಾಡಿದ್ದೇವೆ ಎಂದರು.

ರೇಷ್ಮೆಗೆ ಮಾರಕವಾಗಿರುವ ಫೆಬ್ರಿನ್ ರೋಗ ತಡೆಗೆ ಕಡಿವಾಣ ಹಾಕಿ



ಬೆಂಗಳೂರು, ಏ.27(ಕೆಎಂಶಿ)–ರೇಷ್ಮೆಗೆ ಮಾರಕವಾಗಿರುವ ಫೆಬ್ರಿನ್ ರೋಗಕ್ಕೆ ಶೀಘ್ರದಲ್ಲೇ ಕಡಿವಾಣ ಹಾಕಬೇಕು ಎಂದು ಯುವ ಸಬಲೀಕರಣ, ಕ್ರೀಡಾ ಮತ್ತು ರೇಷ್ಮೆ ಖಾತೆ ಸಚಿವ ನಾರಾಯಣಗೌಡ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ರೇಷ್ಮೆ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸಿದ ಅವರು, ಫೆಬ್ರಿನ್ ರೋಗ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದರು. ಕೆಲವೆಡೆ ಫೆಬ್ರಿನ್ ರೋಗ ಕಾಣಿಸಿಕೊಂಡಿದ್ದು, ರೈತರನ್ನು ಸಂಕಷ್ಟಕ್ಕೆ ತಳ್ಳಿದೆ, ರೇಷ್ಮೆ ಬೆಳಗಾರರಿಗೆ ಯಾವುದೇ ಸಮಸ್ಯೆ ಆಗದಂತೆ ಎಚ್ಚರಿಕೆ ವಹಿಸಬೇಕು. ಫೆಬ್ರಿನ್ ರೋಗಕ್ಕೆ ಆರಂಭದಲ್ಲೇ ನಿರ್ಲಕ್ಷ್ಯ ಮಾಡದೇ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ರೇಷ್ಮೆ ಹುಳುಗಳಿಗೆ ತಗುಲುವ ಗಂಟುರೋಗ ತಡೆಗಟ್ಟಲು ಇಲಾಖೆ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಕೇಂದ್ರ ರೇಷ್ಮೆ ಮಂಡಳಿ, KSSRDI ಸಂಸ್ಥೆಯ ವಿಜ್ಞಾನಿಗಳೊಂದಿಗೆ 4 ತಂಡಗಳನ್ನು ರಚಿಸಲಾಗಿದೆ. ರೇಷ್ಮೆ ನೂಲು ಮತ್ತು ಸೀರೆ ಉತ್ಪಾದನೆ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸಚಿವರು ಅಧಿಕಾರಿಗಳ ಜೊತೆ ಚರ್ಚಿಸಿದರು. ಇಟಲಿಯನ್ ಎಆರ್‌ಎಂ ಅಳವಡಿಸುವ ಸಂಬಂಧ ಚರ್ಚಿಸಲಾಯಿತು. ಮೈಸೂರು ನೇಯ್ಗೆ ಕಾರ್ಖಾನೆಯಲ್ಲಿ ಎರಡು ಶಿಫ್ಟ್‌ನಲ್ಲಿ ಕಾರ್ಯನಿರ್ವಹಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಿಬಿಎಸ್‌ಸಿ ಪಠ್ಯಕ್ರಮದಲ್ಲಿ ಕೆಲಭಾಗಕ್ಕೆ ಕತ್ತರಿ: ಎಐಡಿಎಸ್‌ಒ ಖಂಡನೆ

ಮೈಸೂರು, ಏ.27– 2022–23ನೇ ಸಾಲಿನ ಸಿಬಿಎಸ್‌ಸಿ ಶೈಕ್ಷಣಿಕ ಪಠ್ಯಕ್ರಮದಲ್ಲಿ ಕೆಲವು ಭಾಗಗಳನ್ನು ಕೈಬಿಟ್ಟಿರುವುದನ್ನು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಶನ್(ಎಐಡಿಎಸ್‌ಒ) ಖಂಡಿಸಿದೆ.

10ನೇ ತರಗತಿಯ ಎನ್‌ಸಿಇಆರ್‌ಟಿ ಪಠ್ಯಪುಸ್ತಕದಿಂದ 'ಡೆಮಾಕ್ರಸಿ ಆಂಡ್ ಡೈವರ್ಸಿಟಿ', 'ಪಾಪ್ಯುಲರ್ ಸ್ಟ್ರಗಲ್ ಮೂವ್ಮೆಂಟ್', 'ಚಾಲೆಂಜಸ್ ಟು ಡೆಮಾಕ್ರಸಿ' ಹಾಗೂ 'ಇಂಪ್ಯಾಕ್ಟ್ ಆಫ್ ಗ್ಲೋಬಲೈಸೇಷನ್ ಆನ್ ಅಗ್ರಿಕಲ್ಚರ್' ಅಧ್ಯಾಯಗಳನ್ನು ಕೈಬಿಡಲಾಗಿದೆ. ಅದರಂತೆ 11ನೇ ತರಗತಿಯ ಇತಿಹಾಸ ಪಠ್ಯಕ್ರಮದಿಂದ 'ಕಲ್ಚರಲ್ ಇಸ್ಲಾಮಿಕ್ ಲ್ಯಾಂಡ್ಸ್' ಹಾಗೂ 12ನೇ ತರಗತಿ ರಾಜ್ಯಶಾಸ್ತ್ರ ವಿಷಯದಲ್ಲಿ 'ಕೋಲ್ಡ್ ವಾರ್ ಎರಾ ಆಂಡ್ ನಾನ್– ಅಲೈಂಡ್ ಮೂವ್ಮೆಂಟ್' ಎಂಬ ಅಧ್ಯಾಯವನ್ನು ತೆಗೆದು ಹಾಕಲಾಗಿದೆ. ಜೊತೆಗೆ ಗಣಿತದಲ್ಲಿಯೂ ಕೆಲವು ಅಧ್ಯಾಯಗಳನ್ನು ಕೈಬಿಡಲಾಗಿದೆ.

ಪ್ರಜಾತಂತ್ರ ಮತ್ತು ಧರ್ಮನಿರಪೇಕ್ಷತೆಗೆ ಸಂಬಂಧಪಟ್ಟ ವಿಷಯಗಳನ್ನು ತೆಗೆದು ಹಾಕುವ ಮೂಲಕ ಬಿಜೆಪಿ ಮತ್ತು ಆರ್‌ಎಸ್‌ಎಸ್ ತಮ್ಮ ವಿಚಾರಧಾರೆಗೆ ವಿರುದ್ಧ ಇರುವ ಐತಿಹಾಸಿಕ ಸತ್ಯಗಳು ಹಾಗೂ ವಿವಿಧ ವಿಚಾರಗಳನ್ನು ವಿದ್ಯಾರ್ಥಿಗಳು ಅರಿಯ ಮಾಡಲು ಹೊರಟಿವೆ. ವೈವಿಧ್ಯತೆ ಇಲ್ಲದ ಇತಿಹಾಸ ಕಲಿಯುವುದರಿಂದ ವಿದ್ಯಾರ್ಥಿಗಳಿಗೆ ಯಾವುದೇ ಪ್ರಯೋಜನವಿಲ್ಲ. ಆದ್ದರಿಂದ ಪ್ರಜಾತಾಂತ್ರಿಕ, ಧರ್ಮನಿರಪೇಕ್ಷ ಮನಸ್ಸುಳ್ಳ ಎಲ್ಲ ವಿದ್ಯಾರ್ಥಿಗಳು ಹಾಗೂ ಜನತೆ ಒಂದಾಗಿ ಇಂತಹ ಶಿಕ್ಷಣ ವಿರೋಧಿ ಮತ್ತು ಜನವಿರೋಧಿ ನೀತಿಗಳನ್ನು ಖಂಡಿಸುವಂತೆ ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ಚಂದ್ರಕಲಾ ಮನವಿ ಮಾಡಿದ್ದಾರೆ.

ಒಂದನೇ ಪುಟದಿಂದ

T ಸೂತ್ರ ಪಾಲಿಸಿ

ನಿಮಗೆ ತುಂಬಾ ಅಗತ್ಯ ಕಂಡುಬಂದಲ್ಲಿ ಮಾತ್ರ ಸಾಮಾನ್ಯ ಜನಜೀವನಕ್ಕೆ ತೊಂದರೆಯಾಗದಂತೆ ಕಠಿಣ ತೀರ್ಮಾನ ಕೈಗೊಳ್ಳಿ ಅನಗತ್ಯ ನಿರ್ಬಂಧಗಳನ್ನು ಹೇರಬೇಡಿ ಎಂದು ಪ್ರಧಾನಿ ಸೂಚಿಸಿದ್ದಾರೆ. ಅಲೆಯ ಪ್ರಾರಂಭದಲ್ಲೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಿ, ನಿಮಗೆ ಹಿಂದಿನ ಮೂರು ಅಲೆಗಳ ಅನುಭವವಿದೆ. ವ್ಯಾಪಕ ವಾಗಿ ಲಸಿಕೆ ನೀಡಿದ್ದರಿಂದ ಮೂರನೇ ಅಲೆಯನ್ನು ಸಮರ್ಪಕ ವಾಗಿ ಎದುರಿಸಿದ್ದೇವೆ ಎಂದಿದ್ದಾರೆ. ಈಗಲೂ 6ರಿಂದ 12 ವರ್ಷದ ಮಕ್ಕಳಿಗೆ ಶಾಲೆಯಲ್ಲೇ ಲಸಿಕೆ ಕೊಡಿಸಿ, 15ರಿಂದ 18 ಮತ್ತು 60 ವರ್ಷ ಮೇಲ್ಪಟ್ಟವರಿಗೆ ಬೂಸ್ಟರ್ ಡೋಸ್ ನೀಡಲಾಗುತ್ತಿದೆ ಎಂದಿದ್ದಾರೆ. ತಾಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳ ಮೂಲಸೌಲಭ್ಯಗಳ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಿ, ಈ ಹಿಂದಿನ ಟಿ–ತ್ರೀ ಸೂತ್ರವನ್ನು ಮುಂದುವರೆಸಿ ಎಂದಿದ್ದಾರೆ. ಪ್ರಧಾನಿ ಅವರ ಸಲಹೆಯನ್ನು ರಾಜ್ಯ ಸರ್ಕಾರ ಪಾಲಿಸುವುದಾಗಿ ತಿಳಿಸಿದ ಬೊಮ್ಮಾಯಿ, ನಾಲ್ಕನೇ ಅಲೆ ಎದುರಿಸಲು ರಾಜ್ಯ ಏನು ಸಿದ್ಧತೆ ಮಾಡಿ ಕೊಂಡಿದೆ ಎಂಬುದನ್ನು ತಿಳಿಸಿದ್ದೇವೆ ಎಂದರು. ಪ್ರಧಾನಮಂತ್ರಿಗಳಿಗೆ ರಾಜ್ಯದ ಸ್ಥಿತಿಗತಿಗಳ ವಿವರ ನೀಡಿದ್ದೇವೆ, 4ನೇ ಅಲೆಯ ಸೋಂಕು ಬೆಂಗಳೂರಿನಲ್ಲಿ ಹೆಚ್ಚುತ್ತಿದ್ದು, ನಿಯಂತ್ರಣಕ್ಕೆ ಎಲ್ಲ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದೇವೆ. ಕೋವಿಡ್ ಪರೀಕ್ಷೆಗಳನ್ನು ಹೆಚ್ಚಿಸಲಾಗುವುದು, ಬೆಂಗಳೂರಿನಲ್ಲಿ ಪ್ರತಿದಿನ 10,000 ರಾಜ್ಯದ ಉಳಿದೆಡೆ 20,000 ಮಂದಿಗೆ ಪರೀಕ್ಷೆ ನಡೆಸಲು ಸೂಚಿಸಲಾಗಿದೆ. ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಸೇರಿದಂತೆ ಎಲ್ಲಾ ಮುನ್ನೆಚ್ಚರಿಕೆಗಳ ಬಗ್ಗೆ ಜನರಿಗೆ ತಿಳಿಸಲಾಗುತ್ತಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ 50,000 ಬೆಡ್‌ಗಳಿವೆ, ಖಾಸಗಿ ಆಸ್ಪತ್ರೆಗಳಲ್ಲಿ ಒಂದು ಲಕ್ಷ ಬೆಡ್‌ಗಳಿವೆ ಮತ್ತು 60,000 ಟನ್ ಆಕ್ಸಿಜನ್ ಸಂಗ್ರಹ ಇದೆ. ಇನ್ನೂ ಹೆಚ್ಚುವರಿಯಾಗಿ ರಾಜ್ಯದಲ್ಲಿ 1100 ಮೆಟ್ರಿಕ್ ಟನ್ ಆಕ್ಸಿಜನ್ ಉತ್ಪಾದನೆಗೆ ಕ್ರಮಕೈಗೊಳ್ಳಲು ಸೂಚಿಸಲಾಗಿದೆ ಎಂದರು.

ಎಲ್ಲ ಹಂತದ ಆಸ್ಪತ್ರೆಗಳನ್ನು ಸುಸಜ್ಜಿತಗೊಳಿಸಬೇಕು, ಖಾಸಗಿ ಆಸ್ಪತ್ರೆಗಳ ಆಡಿಟ್ ಮಾಡಿಸಬೇಕು ಎಂಬ ಪ್ರಧಾನಿಗಳ ಸೂಚನೆ ಪಾಲಿಸಲಾಗುತ್ತಿದೆ. ಮೂರು ಅಲೆಗಳ ನಂತರ ಆರ್ಥಿಕ ಚಟುವಟಿಕೆಗಳು ಗರಿಗೆದರಿವೆ, ಇದಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕಿದೆ, ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರಿಯುವ ಅಗತ್ಯವಿದೆ ಎಂದರು. ಮುಖ್ಯಮಂತ್ರಿ ಬೊಮ್ಮಾಯಿ ಇಂದು ಮಂಗಳೂರಿಗೆ ಪ್ರಯಾಣಿಸಬೇಕಿದ್ದ ವಿಮಾನ ಹಾರಾಟ ತಡವಾದ್ದರಿಂದ ಮಂಗಳೂರು ಭೇಟಿ ರದ್ದಾಗಿದ್ದು, ಕೋವಿಡ್‌ಗೆ ಸಂಬಂಧಿಸಿದಂತೆ ಪ್ರಧಾನಿ ಮೋದಿ ಅವರೊಂದಿಗೆ ಬೆಂಗಳೂರಿನಿಂದಲೇ ವಿಡಿಯೊ ಸಂವಾದದಲ್ಲಿ ಭಾಗಿಯಾದರು. ಈ ಮೊದಲು ಮುಖ್ಯಮಂತ್ರಿ ಅವರು, ಪ್ರಧಾನಿಗಳ ವಿಡಿಯೊ ಸಂವಾದದಲ್ಲಿ ಮಂಗಳೂರಿನಿಂದಲೇ ಪಾಲ್ಗೊಳ್ಳುವ ಕಾರ್ಯಕ್ರಮ ನಿಗದಿಯಾಗಿತ್ತು.

ಪಡಿತರದಲ್ಲಿ ಸಿರಿಧಾನ್ಯ

ನೀಡಲು ಮುಂದಾಗಿದೆ. ರಾಜ್ಯ ಸರ್ಕಾರ ಬಿಪಿಎಲ್ ಕಾರ್ಡ್‌ದಾರರಿಗೆ ಅಕ್ಕಿ ಸೇರಿದಂತೆ ಪ್ರತಿ ಯೂನಿಟ್‌ಗೆ 6 ಕೆ.ಜಿ. ಆಹಾರ ಧಾನ್ಯವನ್ನು ಮಾಸಿಕವಾಗಿ ನೀಡುತ್ತಿದೆ. ಇದರೊಂದಿಗೆ ಪ್ರಧಾನಮಂತ್ರಿಗಳ ಗರೀಬ್ ಕಲ್ಯಾಣ ಯೋಜನೆಯಡಿ ಮಾಸಿಕ ಪ್ರತಿ ಯೂನಿಟ್‌ಗೆ 5 ಕೆ.ಜಿ. ಅಕ್ಕಿ ನೀಡಲಾಗುತ್ತಿದೆ. ಆರೋಗ್ಯ ದೃಷ್ಟಿಯಿಂದ ಹಾಗೂ ತಜ್ಞರ ಸಲಹೆಯಂತೆ ಕೇಂದ್ರ ನೀಡುವ ಪಡಿತರ ಕೋಟಾದಲ್ಲಿ ಪೂರ್ಣವಾಗಿ ಅಕ್ಕಿ ನೀಡಿ ರಾಜ್ಯದ ಕೋಟಾದಲ್ಲಿ ಸಿರಿಧಾನ್ಯಗಳನ್ನು ನೀಡಲು ಉದ್ದೇಶಿಸಲಾಗಿದೆ. ಕೋವಿಡ್ ಸಂಕಷ್ಟದಲ್ಲಿ ಯಾರೂ ಹಸಿವಿನಿಂದ ಬಳಲಬಾರದೆಂದು ಬಡವರಿಗೆ ಹಾಗೂ ಕೂಲಿ ಕಾರ್ಮಿಕರಿಗಾಗಿ ಪ್ರಧಾನಿ ಅವರು ಗರೀಬ್ ಕಲ್ಯಾಣ ಯೋಜನೆ ಜಾರಿಗೆ ತಂದರು. ಕೋವಿಡ್ ಹತೋಟಿಗೆ ಬಂದ ನಂತರವೂ ಯೋಜನೆಯನ್ನು ಪ್ರಧಾನಿ ಅವರು ಮುಂದುವರೆಸಿದ್ದಾರೆ.

ಹಳೆ ಮೈಸೂರು ಭಾಗದಲ್ಲಿ ಅಕ್ಕಿ ಜೊತೆ ರಾಗಿ ಮಾತ್ರವಲ್ಲದೆ ಸಜ್ಜೆ, ನವಣೆ ಸೇರಿದಂತೆ ಸಿರಿಧಾನ್ಯಗಳನ್ನು ನೀಡುವುದು ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಅಕ್ಕಿ, ಗೋಧಿ ಜೊತೆ ಜೋಳವನ್ನು ಒದಗಿಸುವುದು ಸೂಕ್ತ ಎಂಬುದು ತಜ್ಞರ ವಾದ. ಈ ಮಧ್ಯೆ ದೇಶದಲ್ಲಿ ಕೋವಿಡ್ ಸಂಕಷ್ಟದ ನಡುವೆಯೂ ಆಹಾರಧಾನ್ಯಗಳ ಬಂಪರ್ ಉತ್ಪಾದನೆಯಾಗಿದ್ದು ಗೋದಾಮುಗಳಲ್ಲಿ ದಾಸ್ತಾನು ಮಾಡಲೂ ಕಷ್ಟಪಡುವ ಪರಿಸ್ಥಿತಿ ಸೃಷ್ಟಿಯಾಗಿದೆ. ಸಂಗ್ರಹ ಸಾಮರ್ಥ್ಯಕ್ಕೂ ಹೆಚ್ಚಿನ ಆಹಾರಧಾನ್ಯಗಳನ್ನು ದೇಶೀಯವಾಗಿ ಜನರಿಗೆ ಒದಗಿಸುವುದು ಸೂಕ್ತ ಮತ್ತು ಜನರ ಆರೋಗ್ಯಕ್ಕೆ ಹೆಚ್ಚು ಒತ್ತು ಕೊಡುವ ಕಾರ್ಯಕ್ರಮಗಳ ಅಳವಡಿಕೆಯೂ ಸೂಕ್ತ ಎಂದು ತಜ್ಞರು ವರದಿ ನೀಡಿದ್ದಾರೆ.

ಅಕ್ಕಿ ಜೊತೆಗೆ ರಾಗಿ, ಜೋಳ ಮತ್ತು ಸಿರಿಧಾನ್ಯಗಳನ್ನು ಸಮಪ್ರಮಾಣದಲ್ಲಿ ನೀಡುವ ಕಾರ್ಯಕ್ರಮವನ್ನು ಪ್ರತಿಪಕ್ಷ ಕಾಂಗ್ರೆಸ್ ರಾಜಕೀಯ ಲಾಭಕ್ಕೆ ಬಳಸಿಕೊಂಡರೆ ಸರ್ಕಾರಕ್ಕೆ ಅನಗತ್ಯ ಕಿರಿಕಿರಿ ಎದುರಾಗುವ ಸಾಧ್ಯತೆ ಇದೆ ಎಂದು ಬಸವರಾಜ ಬೊಮ್ಮಾಯಿ ಆತಂಕ ವ್ಯಕ್ತಪಡಿಸಿದ್ದು, ತಜ್ಞರ ವರದಿಯನ್ನು ಪರಿಶೀಲಿಸುವ ಭರವಸೆ ನೀಡಿದ್ದಾರೆ.

ಅತಿಯಾದ ಶಬ್ದದಿಂದ ಶ್ರವಣಕ್ಕೆ ಆಪತ್ತು

ಅಂತಾರಾಷ್ಟ್ರೀಯ ಶಬ್ದ ಜಾಗೃತಿ ದಿನದ ಪ್ರಯುಕ್ತ ಆಯಿಷ್‌ನಿಂದ ಜಾಗೃತಿ ಜಾಥಾ



ಅಂತಾರಾಷ್ಟ್ರೀಯ ಶಬ್ದ ಜಾಗೃತಿ ದಿನದ ಪ್ರಯುಕ್ತ ಆಯಿಷ್ ವಿದ್ಯಾರ್ಥಿಗಳು ಬುಧವಾರ ಮೈಸೂರಿನಲ್ಲಿ ಜಾಗೃತಿ ಜಾಥಾ ನಡೆಸಿದರು.

ಮೈಸೂರು,ಏ.27(ಪಿಎಂ)– ಇದು ಕನ್ನಡದ ಅರ್ಥಪೂರ್ಣ ಗಾದೆ ಮಾತು 'ಅತಿಯಾದರೆ ಅಮೃತವೂ ವಿಷ'. ಅಂತೆಯೇ ಶಬ್ದ ಕೂಡ. ಅತೀ ಶಬ್ದ ಶ್ರವಣಕ್ಕೆ ಆಪತ್ತು. ಇದು ಅತಿಯಾದಲ್ಲಿ ಶ್ರವಣೇಂದ್ರಿಯಕ್ಕೆ ಕುತ್ತು ತಪ್ಪಿದ್ದಲ್ಲ.

ಹಾಗಾಗಿಯೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಬ್ದಮಾಲಿನ್ಯ ತಡೆಯ ಅಗತ್ಯತೆ ಕುರಿತು ಜಾಗೃತಿ ಮೂಡಿಸಲು ಪ್ರತಿ ವರ್ಷ 'ಏಪ್ರಿಲ್ ಮಾಸದ ಕೊನೆಯ ಬುಧವಾರ'ವನ್ನು ಅಂತಾರಾಷ್ಟ್ರೀಯ ಶಬ್ದ ಜಾಗೃತಿ ದಿನವಾಗಿ ಆಚರಿಸಲಾಗುತ್ತಿದೆ. ಈ ಜಾಗೃತಿ ದಿನದ ಅಂಗವಾಗಿ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್) ವತಿಯಿಂದ ಬುಧವಾರ ಜಾಗೃತಿ ಜಾಥಾ ನಡೆಸಿ, ಶಬ್ದಮಾಲಿನ್ಯ ತಡೆಯುವ ಮೂಲಕ ಶ್ರವಣೇಂದ್ರಿಯ ರಕ್ಷಿಸಿಕೊಳ್ಳಬೇಕಾದ ಅಗತ್ಯತೆ ಬಗ್ಗೆ ಸಂದೇಶ ಸಾರಲಾಯಿತು.

ಅತಿಯಾದ ಶಬ್ದವಿರುವ ಸ್ಥಳದಲ್ಲಿ ಶ್ರವಣ ರಕ್ಷಣಾ ಉಪಕರಣ ಧರಿಸಿ... ಶಬ್ದ ಮಾಲಿನ್ಯದಿಂದ ಕಿವಿಗಳ ರಕ್ಷಣೆ ಮಾಡದಿದ್ದರೆ ಕಿವುಡು ಸಮಸ್ಯೆ ಉದ್ಭವಿಸಬಹುದು... ನಿಮ್ಮ ಕಿವಿಗಳಿಗೆ ಒಂದಿಷ್ಟು ವಿಶ್ರಾಂತಿಯನ್ನೂ ನೀಡಿ.... ಉತ್ತಮ ಶ್ರವಣ; ಉತ್ತಮ ಸಂವಹನ... ಎಂಬಿತ್ಯಾದಿ ಸಂದೇಶ ಹೊಂದಿರುವ ಫಲಕಗಳನ್ನಿಡಿದು ಸಂಸ್ಥೆಯ ವಿದ್ಯಾರ್ಥಿಗಳು, ಅಧ್ಯಾಪಕರು ಜಾಥಾ ನಡೆಸಿದರು.

> "ಕಳೆದ ವರ್ಷ 2021ರಲ್ಲಿ ಆಯಿಷ್‌ನಲ್ಲಿ 10 ಸಾವಿರ ಮಂದಿ ಶ್ರವಣ ಪರೀಕ್ಷೆಗೆ ಒಳಗಾಗಿದ್ದರು. ಈ ಪೈಕಿ 6 ಸಾವಿರ ಮಂದಿಗೆ ವಿವಿಧ ರೀತಿಯಲ್ಲಿ ಶ್ರವಣದೋಷದ ಸಮಸ್ಯೆ ಕಂಡು ಬಂದಿತು. ಅತಿಯಾದ ಶಬ್ದವಿರುವೆಡೆ ಕೆಲಸ ಮಾಡುವವರು ಕಿವಿಯ ರಕ್ಷಣೆಗಾಗಿ ಇಯರ್ ಮಫ್, ಇಯರ್ ಪ್ಲಗ್‌ನಂತಹ ಉಪಕರಣಗಳನ್ನು ಬಳಸುವುದನ್ನು ರೂಢಿಸಿಕೊಳ್ಳಬೇಕು. ಇದರಿಂದ ಅತಿ ಶಬ್ದದಿಂದ ಕಿವಿಗೆ ಆಗುವ ಹಾನಿ ತಪ್ಪಿಸಬಹುದು.
> **–ಡಾ.ಪ್ರವೀಣ್‌ಕುಮಾರ್, ಮುಖ್ಯಸ್ಥರು, ಶ್ರವಣಶಾಸ್ತ್ರ ವಿಭಾಗ, ಆಯಿಷ್**

ಶಬ್ದಮಾಲಿನ್ಯದಿಂದ ನಮ್ಮ ದೈಹಿಕ ಆರೋಗ್ಯದ ಮೇಲೆ ಹಲವು ದುಷ್ಪರಿಣಾಮ ಉಂಟಾಗಲಿದೆ. ಕಿವಿಯ ಸೂಕ್ಷ್ಮ ಭಾಗಗಳಿಗೆ ಹಾನಿ, ಹೃದಯ ಸಂಬಂಧಿ ತೊಂದರೆ, ವೇಗದ ಉಸಿರಾಟ, ಜಠರದಲ್ಲಿ ಹುಣ್ಣುಗಳು, ಕೊಲೆಸ್ಟ್ರಾಲ್ ಪ್ರಮಾಣ ಹೆಚ್ಚಳ ಮೊದಲಾದ ಸಮಸ್ಯೆಗಳು ನಮ್ಮನ್ನು ಬಾಧಿಸಲಿವೆ. ಅಲ್ಲದೆ, ಏಕಾಗ್ರತೆ ಸಮಸ್ಯೆ, ಕಿರಿಕಿರಿ, ಹಿಂಸೆ, ಕೋಪ ಮತ್ತು ನಿದ್ರಾಹೀನತೆ ಸೇರಿದಂತೆ ಅನೇಕ ಮಾನಸಿಕ ಸಮಸ್ಯೆಗಳಿಗೂ ಶಬ್ದಮಾಲಿನ್ಯ ಎಡೆ ಮಾಡುತ್ತದೆ. ನಿರಂತರವಾಗಿ ಅತೀ ಶಬ್ದಕ್ಕೆ ಕಿವಿಗಳನ್ನು ಒಡ್ಡುವುದು ಶ್ರವಣದೋಷ ಉಂಟಾಗಲು ಪ್ರಮುಖ ಕಾರಣಗಳಲ್ಲಿ ಒಂದಾಗಿದೆ ಎಂದು ಸಂದೇಶ ರವಾನಿಸಲಾಯಿತು.

'ಡೆಸಿಬೆಲ್'ನಿಂದ ಶಬ್ದವನ್ನು ಅಳತೆ ಮಾಡುವ ವಿಧಾನವಿದ್ದು, 90 ಡೆಸಿಬಲ್ (ಡಿಬಿಎ) ಗಳಿಗಿಂತ ಹೆಚ್ಚಿನ ಶಬ್ದವು ನಮ್ಮ ಕಿವಿಗಳಿಗೆ ಹಾನಿಕಾರಕ. ಶಬ್ದಮಾಲಿನ್ಯ ಇರುವ ಸ್ಥಳದಿಂದ ದೂರ ಸರಿಯುವುದು ಒಳ್ಳೆಯದು. ಆದರೆ ಅದು ಸಾಧ್ಯವಾಗದಿದ್ದರೆ, ಕಿವಿಯ ರಕ್ಷಣೆಗಾಗಿ ಇಯರ್ ಮಫ್ ಅಥವಾ ಇಯರ್ ಪ್ಲಗ್‌ಗಳನ್ನು ಬಳಸಬೇಕು. ವಿಪರೀತ ಶಬ್ದವಿದ್ದಲ್ಲಿ ಈ ಎರಡೂ ಉಪಕರಣಗಳನ್ನು ಬಳಸಿಕೊಳ್ಳಬೇಕು. ಶ್ರವಣದೋಷ ಬಂದ ಮೇಲೆ ಸರಿಪಡಿಸಲು ಸಾಧ್ಯವಿಲ್ಲ. ಹಾಗಾಗಿ ಈ ತೊಂದರೆಯನ್ನು ಬೇಗ ಗುರುತಿಸಿದರೆ ಮುಂದಾಗುವ ಹೆಚ್ಚಿನ ಹಾನಿಯನ್ನು ತಡೆಗಟ್ಟಬಹುದು ಎಂದು ಮಾಹಿತಿ ನೀಡಲಾಯಿತು.

ಸಂಸ್ಥೆಯ ಆವರಣದ ನಾಲೆಡ್ಜ್ ಪಾರ್ಕ್ ಕಟ್ಟಡದ ಬಳಿ ಶಾಸಕ ಎಲ್.ನಾಗೇಂದ್ರ ಜಾಥಾಗೆ ಹಸಿರು ನಿಶಾನೆ ತೋರಿದರು. ಸಂಸ್ಥೆಯ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಉಪಸ್ಥಿತರಿದ್ದರು. ಬಳಿಕ ಜಾಥಾವು, ಜೆಸಿ ಕಾಲೇಜು ರಸ್ತೆ (ಚದುರಂಗ ರಸ್ತೆ), ಹುಣಸೂರು ರಸ್ತೆ, ಮಾನಸಗಂಗೋತ್ರಿಯ ಬಯಲು ರಂಗಮಂದಿರ ರಸ್ತೆ, ಪಿಆರ್ ತಿಪ್ಪೇಸ್ವಾಮಿ ವೃತ್ತ, ಬೋಗಾದಿ ಮುಖ್ಯ ರಸ್ತೆ, ಶಂಕರ್‌ನಾಗ್ ವೃತ್ತದಲ್ಲಿ ಸಂಚರಿಸಿತು. ಮತ್ತೆ ಚದುರಂಗ ರಸ್ತೆ ಮೂಲಕ ಸಂಸ್ಥೆ ಆವರಣ ತಲುಪಿ ಜಾಥಾ ಅಂತ್ಯಗೊಂಡಿತು. ಸಂಸ್ಥೆಯ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಿಬ್ಬಂದಿ ಸೇರಿದಂತೆ ನೂರಾರು ಮಂದಿ ಜಾಥಾದಲ್ಲಿ ಪಾಲ್ಗೊಂಡಿದ್ದರು.

ಗದ್ದಲದ ಜಗತ್ತಿನಲ್ಲಿ ಶ್ರವಣ ರಕ್ಷಣೆಗೆ ಆದ್ಯತೆ ನೀಡಿ

ಜೆಎಸ್‌ಎಸ್ ವಾಕ್-ಶ್ರವಣ ಸಂಸ್ಥೆಯಿಂದ ಜಾಗೃತಿ ಜಾಥಾ



ಚಿಕ್ಕಗಡಿಯಾರ ವೃತ್ತದಲ್ಲಿ ಜೆಎಸ್‌ಎಸ್ ವಾಕ್–ಶ್ರವಣ ಸಂಸ್ಥೆ ವಿದ್ಯಾರ್ಥಿಗಳು ಶ್ರವಣ ರಕ್ಷಣೆ ಕುರಿತು ಸಂಗೀತ–ನೃತ್ಯದ ಮೂಲಕ ಜಾಗೃತಿ ಮೂಡಿಸಿದರು.

ಮೈಸೂರು, ಏ.27–ಗದ್ದಲದ ಜಗತ್ತಿನಲ್ಲಿ ನಿಮ್ಮ ಶ್ರವಣ ರಕ್ಷಣೆಗೆ ಆದ್ಯತೆ ನೀಡಿ... ನಿಮ್ಮ ಶ್ರವಣ ರಕ್ಷಣೆಗೆ ಮುಂದಾದರೆ, ಆತಂಕದ ಅಗತ್ಯವಿಲ್ಲ... ಎಂಬಿತ್ಯಾದಿ ಸಂದೇಶ ಒಳಗೊಂಡ ಫಲಕಗಳೊಂದಿಗೆ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಸಿಬ್ಬಂದಿ ಬುಧವಾರ ಜಾಗೃತಿ ಜಾಥಾ ನಡೆಸಿದರು.

ಸಂಸ್ಥೆ ವತಿಯಿಂದ ಅಂತಾರಾಷ್ಟ್ರೀಯ ಶಬ್ದ ಜಾಗೃತಿ ದಿನದ ಪ್ರಯುಕ್ತ ಹಮ್ಮಿಕೊಂಡಿದ್ದ ಜಾಥಾದಲ್ಲಿ ಹೀಗೆ ಸಂದೇಶ ರವಾನಿಸಲಾಯಿತು. ರಾಮಾನುಜ ರಸ್ತೆಯಲ್ಲಿರುವ ಸಂಸ್ಥೆ ಎದುರಿನಿಂದ ಆರಂಭಗೊಂಡ ಜಾಥಾವು, ಜೆಎಸ್‌ಎಸ್ ವಿದ್ಯಾಪೀಠ ರಸ್ತೆ, ಸಂಯ್ಯಾಜಿರಾವ್ ರಸ್ತೆ, ಕೆಆರ್ ವೃತ್ತ ಮಾರ್ಗವಾಗಿ ಚಿಕ್ಕ ಗಡಿಯಾರ ವೃತ್ತ ತಲುಪಿತು. ಚಿಕ್ಕ ಗಡಿಯಾರ ಆವರಣದಲ್ಲಿ ಸಮಾವೇಶಗೊಂಡ ವಿದ್ಯಾರ್ಥಿಗಳು, ಇಲ್ಲಿ ಸಂಗೀತ, ನೃತ್ಯ ಪ್ರದರ್ಶನ ಮತ್ತು ಭಾಷಣದ ಮೂಲಕ ಶ್ರವಣೇಂದ್ರಿಯ ರಕ್ಷಣೆಯ ಮಹತ್ವ ಸಾರಿದರು. ಆ ಮೂಲಕ ಹಾನಿಕಾರಕ ಶಬ್ದದಿಂದ ಶ್ರವಣ ರಕ್ಷಣೆಯ ವಿಧಾನ ಜಾಥಾ ಕೊನೆಗೊಂಡಿತು. ಸಂಸ್ಥೆಯ ಶ್ರವಣಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಹೇಮಂತ್, ಕಾರ್ಯಕ್ರಮದ ಸಂಚಾಲಕಿ ಡಾ.ಅಪೇಕ್ಷಾ ಮತ್ತಿತರರು ಪಾಲ್ಗೊಂಡಿದ್ದರು.



ಕೆಆರ್ ನಗರ ತಾಲೂಕಿನ ಸಿದ್ದಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ 12 ನಿರ್ದೇಶಕ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಮಾಜಿ ಅಧ್ಯಕ್ಷ ಎಂ.ಎಸ್.ಹರಿ ಚಿದಂಬರಂ ಬಣದ 10 ಮಂದಿ ಜಯಭೇರಿ ಬಾರಿಸಿದ್ದು, ಇದಕ್ಕೆ ಸಹಕರಿಸಿದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹರೀಶ್‌ಗೌಡ, ಸಿದ್ದಲಿಂಗಪುರ ಜಿಲ್ಲಾ ಪಂಚಾಯಿತಿ ಉಸ್ತುವಾರಿ ಮಂಜುಗೌಡ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ವಿಜೇತ ಅಭ್ಯರ್ಥಿಗಳಾದ ಹರಿ ಚಿದಂಬರಂ, ಕೆ.ಎಸ್.ರಂಗೇಶ್ ಕುಮಾರ್, ಅನಿಲ್‌ರಾಜ್, ಕೆ.ವಿ.ಕೃಷ್ಣೇಗೌಡ, ಮಹದೇವ್, ಮಂಜಮ್ಮ, ಕೃಷ್ಣೇಗೌಡ, ಎಸ್.ಡಿ.ದೇವಮ್ಮ, ಚಿಕ್ಕೆರೇಗೌಡ, ಶ್ರೀರಾಂಪುರ ಕೃಷ್ಣೇಗೌಡ, ಕೃಷ್ಣಮೂರ್ತಿ, ತ್ಯಾಗರಾಜ, ಪ್ರಕಾಶ್ ರಾಜೇಗೌಡ, ವೆಂಕಟೇಶ್ ಹಾಗೂ ಮುಖಂಡರು ಇದ್ದರು.

ಸಮಗ್ರ ಕೃಷಿ ಅಭಿಯಾನ ಪ್ರಚಾರ ರಥಕ್ಕೆ ಚಾಲನೆ



ಮೈಸೂರು,ಏ.27(ಎಂಟಿವೈ)– ಸಮಗ್ರ ಕೃಷಿ ಅಭಿಯಾನ ಪ್ರಚಾರ ರಥಕ್ಕೆ ವರುಣಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಹಸಿರು ನಿಶಾನೆ ಪ್ರದರ್ಶಿಸುವ ಮೂಲಕ ಚಾಲನೆ ನೀಡಿದರು.

ವರುಣಾ ವಿಧಾನಸಭಾ ಕ್ಷೇತ್ರದ ಕೀಳನಪುರದಲ್ಲಿ ಕೃಷಿ ಇಲಾಖೆ ವತಿಯಿಂದ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಪ್ರಚಾರ ರಥಕ್ಕೆ ಚಾಲನೆ ನೀಡಿ ಶುಭ ಕೋರಿದರು.

ಇದೇ ವೇಳೆ ಮಾತನಾಡಿದ ಅವರು, ಪ್ರಸ್ತುತ ಕೃಷಿ ಚಟುವಟಿಕೆ ಆರಂಭವಾಗುತ್ತಿದೆ. ಈಗಾಗಲೇ ಮೂರ್‍ನಾಲ್ಕು ಬಾರಿ ಮಳೆ ಬಿದ್ದಿರುವುದರಿಂದ ರೈತರು ಕೃಷಿ ಭೂಮಿಯನ್ನು ಹದ ಮಾಡಿಕೊಳ್ಳುತ್ತಿದ್ದಾರೆ. ಕೆಲವೇ ದಿನದಲ್ಲಿ ಬಿತ್ತನೆ ಕಾರ್ಯ ಆರಂಭವಾಗಲಿದ್ದು, ರೈತರು ಸಮಗ್ರ ಕೃಷಿ ಪದ್ಧತಿ ಅನುಸರಿಸುವುದಕ್ಕೆ ಮುಂದಾಗಬೇಕು. ಇತ್ತೀಚಿನ ದಿನಗಳಲ್ಲಿ ಕೃಷಿ ಉತ್ಪನ್ನಗಳ ಬೆಲೆ ಹೆಚ್ಚಾಗಿರುವುದರಿಂದ ರೈತರಿಗೆ ದೊಡ್ಡ ಹೊಡೆತ ಬಿದ್ದಂತಾಗಿದೆ ಎಂದರು.

ಇಂತಹ ಸಂದರ್ಭದಲ್ಲಿ ರೈತರು ತಾವು ಮಾಡುವ ಕೃಷಿ ಚಟುವಟಿಕೆಯಿಂದ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸಿಕೊಳ್ಳಲು ಸಾಧ್ಯವಾಗುವ ಬೆಳೆಗಳನ್ನು ಬೆಳೆಯಲು ಮುಂದಾಗಬೇಕು. ಎಲ್ಲರೂ ಒಂದೇ ಬೆಳೆಯನ್ನು ಅವಲಂಬಿಸಿದರೆ, ಕಟಾವು ಸಂದರ್ಭದಲ್ಲಿ ಬೆಲೆ ಕುಸಿತ ಸಂಭವಿಸಬಹುದು. ಈ ನಿಟ್ಟಿನಲ್ಲಿ ರೈತರಲ್ಲಿ ಜಾಗೃತಿ ಮೂಡಿಸಲು ಕೃಷಿ ಇಲಾಖೆ ಸಮಗ್ರ ಕೃಷಿ ಅಭಿಯಾನ ನಡೆಸುತ್ತಿದ್ದು, ರೈತರಲ್ಲಿ ಜಾಗೃತಿ ಮೂಡಿಸುತ್ತಿದೆ. ರೈತರು ಜಾಗೃತಿ ಮೂಡಿಸುವ ರಥದಲ್ಲಿ ದೊರೆಯುವ ಮಾಹಿತಿಯನ್ನು ಮನವರಿಕೆ ಮಾಡಿಕೊಂಡು ಹಾಗೂ ಇಲಾಖೆ ನೀಡುವ ಸಲಹೆಯನ್ನು ಪರಿಗಣಿಸಿ ಕೃಷಿ ಚಟುವಟಿಕೆ ಆರಂಭಿಸುವಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮೈಸೂರು ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರಾದ ಡಾ. ಹೆಚ್.ಬಿ.ಮಧುಲತಾ, ತಹಸೀಲ್ದಾರ್ ಗಿರೀಶ್, ಕೃಷಿ ಅಧಿಕಾರಿಗಳಾದ ಪಿ.ಎನ್.ಜೀವನ್, ಸಿ.ಎಂ. ಕಾರ್ತಿಕ್, ತಾಂತ್ರಿಕ ವ್ಯವಸ್ಥಾಪಕ ಎಸ್.ಜೆ ಹೇಮಂತ್, ಸಹಾಯಕ ತೋಟಗಾರಿಕಾ ಅಧಿಕಾರಿ ವಿದ್ಯಾಸಾಗರ್, ಮುಖಂಡರಾದ ಮಹದೇವಪ್ಪ, ಮಂಜು ಹಾಗೂ ವಿವಿಧ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಸದಸ್ಯರು ಮತ್ತು ಸುತ್ತಮುತ್ತಲಿನ ಗ್ರಾಮದ ರೈತರು ಪಾಲ್ಗೊಂಡಿದ್ದರು.

ಏ.30ರಂದು ಜೆಎಸ್‌ಎಸ್ ಮಹಿಳಾ ಕಾಲೇಜಿನ ಪದವೀಧರ ದಿನಾಚರಣೆ

ಮೈಸೂರು,ಏ.27(ಆರ್‌ಕೆಬಿ)–ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ (ಸ್ವಾಯತ್ತ) 13ನೇ ಪದವೀಧರರ ದಿನಾಚರಣೆಯು ಏ.30ರಂದು ಬೆಳಗ್ಗೆ 11ಕ್ಕೆ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಮೊರಬದ ಮಲ್ಲಿಕಾರ್ಜುನ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉಪಸ್ಥಿತಿಯಲ್ಲಿ ಪದವಿ ಪ್ರದಾನ ನಡೆಯಲಿದೆ. ಮುಖ್ಯ ಅತಿಥಿಯಾಗಿ ಶಿಕ್ಷಣ ಮತ್ತು ವಿದೇಶಾಂಗ ರಾಜ್ಯ ಸಚಿವ ಡಾ.ರಾಜ್ ಕುಮಾರ್ ರಂಜನ್‌ಸಿಂಗ್, ಭಾಗವಹಿಸುವರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಅಧ್ಯಕ್ಷತೆ ವಹಿಸುವರು. ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ ಭಾಗವಹಿಸುವರು ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಕೆ.ವಿ.ಸುರೇಶ್ ಮಾತನಾಡಿ, ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಪದವೀಧರರಾಗಿರುವ 670 ವಿದ್ಯಾರ್ಥಿಗಳ ಪೈಕಿ 348 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಪಡೆದಿದ್ದಾರೆ. 281 ಪ್ರಥಮ ದರ್ಜೆ ಮತ್ತು 38 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದರು. ಬಿಎ ವಿಭಾಗದಲ್ಲಿ ಆರ್.ಕುಸುಮಿತಾ, ಬಿಎಸ್ಸಿ ವಿಭಾಗದಲ್ಲಿ ಎಸ್.ಸಹನಾ, ಬಿಕಾಂ ವಿಭಾಗದಲ್ಲಿ ಐಶ್ವರ್ಯ, ಬಿಬಿಎಯಲ್ಲಿ ಮೇಘನಾ ನಾಯಕ್, ಬಿಸಿಎಯಲ್ಲಿ ದೀಪಿಕಾ, ಎಂಎ ಅರ್ಥಶಾಸ್ತ್ರದಲ್ಲಿ ನೀಲಮ್ಮ, ಎಂಕಾಂನಲ್ಲಿ ಅನುಷಾ, ಎಂಎಸ್ಸಿ ರಸಾಯನಶಾಸ್ತ್ರದಲ್ಲಿ ಎಸ್.ಮಮತಾ ಅಗ್ರಶ್ರೇಣಿ ಪಡೆದಿದ್ದಾರೆ ಎಂದರು. ಗೋಷ್ಠಿಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ನಿರಂಜನ ಮೂರ್ತಿ, ಕಾಲೇಜಿನ ಆಡಳಿತ ಮಂಡಳಿಯ ಡೀನ್ ಕೆ.ಬಿ.ಸುರೇಶ್, ಪರೀಕ್ಷಾ ನಿಯಂತ್ರಣಾಧಿಕಾರಿ ಎಂ.ಎಂ.ಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿಗೆ ಆಗಮಿಸಿದ್ದ ವಾಣಿಜ್ಯ ತೆರಿಗೆಗಳ ಆಯುಕ್ತೆ ಸಿ.ಶಿಖಾ ಅವರನ್ನು ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆಗಳ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ನೇತೃತ್ವದ ನಿಯೋಗ ಅಭಿನಂದಿಸಿ, ಜಿಎಸ್‌ಟಿ ಮತ್ತು ಹಲವಾರು ಸಮಸ್ಯೆಗಳ ಬಗ್ಗೆ ಚರ್ಚಿಸಿದರು. ಈ ವೇಳೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೈಗಾರಿಕಾ ಸರಬರಾಜು–ಮಾರಾಟ ಸಹಕಾರ ಸಂಘದ ಅಧ್ಯಕ್ಷ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ನಿರ್ದೇಶಕ ಡಿ.ಪದ್ಮನಾಭ, ಗೌರವ ಕಾರ್ಯದರ್ಶಿ ಶಿವಾಜಿರಾವ್, ನಿರ್ದೇಶಕ ಅಚ್ಯುತ್ ಇದ್ದರು.

ಇಂದು ಕೆಸರು ಗದ್ದೆ ಓಟ

ಮೈಸೂರು, ಏ.27– ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ 'ಬೇಸಿಗೆ ಬಂಡಿ' ಮಕ್ಕಳ ಬೇಸಿಗೆ ಶಿಬಿರದಲ್ಲಿ ಗುರುವಾರ ಕೆಸರು ಗದ್ದೆ ಓಟವನ್ನು ಏರ್ಪಡಿಸಲಾಗಿದೆ. ಮೈಸೂರು ವಿಮಾನ ನಿಲ್ದಾಣದ ಸಮೀಪವಿರುವ ನಿರ್ಮಲ ಧಾಮದಲ್ಲಿ ಕೆಸರು ಗದ್ದೆ ಓಟವನ್ನು ಆಯೋಜಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ. ಸಂ. 9108002966, 9449116887 ಸಂಪರ್ಕಿಸಬಹುದು.

ವಿಮಾನ ನಿಲ್ದಾಣಗಳಿಗೆ ಖ್ಯಾತ ನಾಮರ ಹೆಸರಿಡಲು ಆಗ್ರಹ

ಮೈಸೂರಿಗೆ ನಾಲ್ವಡಿ, ಹುಬ್ಬಳ್ಳಿಗೆ ಕುವೆಂಪು, ಕಲಬುರಗಿಗೆ ಬಸವೇಶ್ವರ ನಾಮಕರಣಕ್ಕೆ ಒತ್ತಾಯ



ಮೈಸೂರು,ಏ.27(ಆರ್‌ಕೆಬಿ)–ಮೈಸೂರು, ಶಿವಮೊಗ್ಗ ಸೇರಿದಂತೆ ರಾಜ್ಯದ ಏಳು ವಿಮಾನ ನಿಲ್ದಾಣಗಳಿಗೆ ಮಹಾನ್ ಸಾಧಕರ ಹೆಸರುಗಳನ್ನು ನಾಮಕರಣ ಮಾಡುವಂತೆ ಬೆಂಗಳೂರಿನ ನಾಡಪ್ರಭು ಕೆಂಪೇಗೌಡ ಕೇಂದ್ರ ಸಮಿತಿ, ಮೈಸೂರಿನ ಅಖಿಲ ಭಾರತ ಒಕ್ಕಲಿಗ ಮಹಾಸಭಾ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಕರ್ನಾಟಕದಲ್ಲಿ ವಿವಿಧ ವಿಮಾನ ನಿಲ್ದಾಣಗಳ ಪೈಕಿ ಮೈಸೂರು ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್, ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಪದ್ಮ ಭೂಷಣ ಕುವೆಂಪು, ಹಾಸನ ವಿಮಾನ ನಿಲ್ದಾಣಕ್ಕೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಮಂಗಳೂರು ವಿಮಾನ ನಿಲ್ದಾಣಕ್ಕೆ ನಾಡೋಜ ಕಯ್ಯಾರ ಕಿಞ್ಞಣ್ಣ ರೈ, ಕಲಬುರಗಿ ವಿಮಾನ ನಿಲ್ದಾಣಕ್ಕೆ ಜಗಜ್ಯೋತಿ ಬಸವೇಶ್ವರ, ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ರಾಣಿ ಕಿತ್ತೂರು ಚೆನ್ನಮ್ಮ, ಬೆಳಗಾವಿ ವಿಮಾನ ನಿಲ್ದಾಣಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಹೆಸರನ್ನು ನಾಮಕರಣ ಮಾಡುವಂತೆ ರಾಜ್ಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರದ ನಾಗರಿಕ ವಿಮಾನ ಯಾನ ಮಂತ್ರಾಲಯಕ್ಕೆ ನಾಮ ನಿರ್ದೇಶನ ಮಾಡಲು ನಿರ್ಧರಿಸಲಾಗಿದೆ ಎಂದು ಅಖಿಲ ಕರ್ನಾಟಕ ಒಕ್ಕಲಿಗ ಮಹಾಸಭಾದ ಗೌರವಾಧ್ಯಕ್ಷ ಡಾ.ಸಿ.ಪಿ.ಕೃಷ್ಣ ಕುಮಾರ್ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೈಸೂರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಅಪಾರವಾಗಿದೆ. ಇದೇ ವೇಳೆ ಕುವೆಂಪು ಅವರು ಶಿವಮೊಗ್ಗದವರೇ ಆಗಿರುವ ಕಾರಣ ಇಂಥವರ ಹೆಸರನ್ನು ಅಲ್ಲಿನ ವಿಮಾನ ನಿಲ್ದಾಣಗಳಿಗೆ ಇರಿಸುವುದರ ಮೂಲಕ ಅವರ ಹೆಸರು ಅಂತಾರಾಷ್ಟ್ರೀಯ ಮಟ್ಟಕ್ಕೆ ಹೋಗುವಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದೆ. ಹೀಗಿದ್ದರೂ ಸರ್ಕಾರ ಸೂಕ್ತವಾಗಿ ಪ್ರತಿಕ್ರಿಯಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ಕುರಿತಂತೆ ವಿಶ್ರಾಂತ ಕುಲಪತಿ ದೇಜಗೌ, ಹೆಸರಾಂತ ಕನ್ನಡ ಚಿತ್ರನಟಿ ಪದ್ಮಶ್ರೀ ಬಿ.ಸರೋಜಾದೇವಿ, ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಮಠದ ಗವಿಸಿದ್ದೇಶ್ವರ ಸ್ವಾಮೀಜಿ, ಜ್ಞಾನಪೀಠ ಪುರಸ್ಕೃತ ಚಂದ್ರಶೇಖರ ಕಂಬಾರ, ಹಿರಿಯ ಸಾಹಿತಿಗಳಾದ ಚಂದ್ರಶೇಖರ್ ಪಾಟೀಲ, ಕುಂ.ವೀರಭದ್ರಪ್ಪ, ಪ್ರೊ.ಜಿ.ಎಸ್.ಸಿದ್ದಲಿಂಗಯ್ಯ, ಬಿ.ಟಿ.ಲಲಿತಾ ನಾಯಕ್, ನಾಡೋಜ ಚನ್ನವೀರ ಕಣವಿ, ಮಾಜಿ ಸಚಿವರಾದ ಲೀಲಾದೇವಿ ಆರ್.ಪ್ರಸಾದ್, ರಾಣಿ ಸತೀಶ್, ದಿನೇಶ್ ಗುಂಡೂರಾವ್, ಜಿ.ಟಿ.ದೇವೇಗೌಡ, ಬಿ.ಎಲ್.ಶಂಕರ್, ಮಾಜಿ ಶಾಸಕರಾದ ವಾಸು, ಕೆ.ಎಸ್.ಪುಟ್ಟಣ್ಣಯ್ಯ ಸೇರಿದಂತೆ ಹಲವು ಸಾಹಿತಿಗಳು, ಸ್ವಾಮೀಜಿಗಳು, ಸಮುದಾಯ ಮುಖಂಡರು ಹಾಗೂ ವಿವಿಧ ಕ್ಷೇತ್ರಗಳ 30ಕ್ಕೂ ಹೆಚ್ಚು ಮಂದಿ ಸಹಿ ಮಾಡಿ ಈ ಹಿಂದೆಯೇ ಮನವಿ ಪತ್ರ ಸಲ್ಲಿಸಿದ್ದಾರೆ. ಆದರೆ ಕೇಂದ್ರ ಸರ್ಕಾರ ಮನವಿ ಅಂಗೀಕರಿಸಿಲ್ಲ. ಹೀಗಾಗಿ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹೇರಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್, ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ರಾಜ್ಯಾಧ್ಯಕ್ಷ ಬೆಟ್ಟೇಗೌಡ, ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದ ಟ್ರಸ್ಟಿ ಎ.ಜಿ.ದೇವರಾಜು, ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಮೈಸೂರು ಮತ್ತು ಚಾಮರಾಜನಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು,ಏ.27–ಮೈಸೂರಿನ ಬನ್ನಿಮಂಟಪದ ಸಾಯಿ ರಂಗ ವಿದ್ಯಾ ಸಂಸ್ಥೆಯ ಉಚಿತ ಕಿವುಡು ಬಾಲಕರ ವಸತಿ ಶಾಲೆ ಪ್ರಸಕ್ತ ಸಾಲಿನ 1ರಿಂದ 6ನೇ ತರಗತಿ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಿದೆ.

ಇಲ್ಲಿ 1 ರಿಂದ 10ನೇ ತರಗತಿಯವರೆಗೆ ವಿದ್ಯಾರ್ಥಿಗಳಿಗೆ ಊಟ, ವಸತಿ ಹಾಗೂ ಶಿಕ್ಷಣವನ್ನು ಸಂಪೂರ್ಣ ಉಚಿತವಾಗಿ ನೀಡಲಾಗುವುದು. ಜೊತೆಗೆ ವೃತ್ತಿ ತರಬೇತಿ (ಟೈಲರಿಂಗ್) ಹಾಗೂ ಕಂಪ್ಯೂಟರ್ ಶಿಕ್ಷಣ ಸಹ ನೀಡಲಾಗುತ್ತದೆ. ಮಾಹಿತಿಗಾಗಿ ಮೊ.ಸಂಖ್ಯೆ: 9342112739 (ರಘುನಾಥ್‌ಗೌಡ) ಸಂಪರ್ಕಿಸಬಹುದು.

ವೃದ್ಧ ನಾಪತ್ತೆ

ಮೈಸೂರು: ಮಂಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಏ.17ರಂದು ವೃದ್ಧ ಶಿವಣ್ಣ (86) ಎಂಬವರು ನಾಪತ್ತೆಯಾಗಿರುವ ಬಗ್ಗೆ ಅವರ ಪುತ್ರಿ ಭಾಗ್ಯ ಪೊಲೀಸರಿಗೆ ದೂರು ನೀಡಿದ್ದಾರೆ. ಇವರ ಬಗ್ಗೆ ಮಾಹಿತಿ ಸಿಕ್ಕರೆ ದೂ.ಸಂಖ್ಯೆ 0821–2418313, ನಗರ ಪೊಲೀಸ್ ಕಂಟ್ರೋಲ್ ರೂಂ: 2418339 ಸಂಪರ್ಕಿಸುವಂತೆ ಪ್ರಕಟಣೆ ಕೋರಿದೆ.

ನಗರದ ಭೂಮಿ, ನಿವೇಶನಗಳಿಗೆ ಗ್ರಾಪಂನಿಂದ ಖಾತೆ

ಹುಣಸೂರು, ಏ.27(ಕೆಕೆ)–ನಗರಸಭಾ ವ್ಯಾಪ್ತಿಯ ಭೂಪ್ರದೇಶ ಹಾಗೂ ನಿವೇಶನಗಳನ್ನು ಗ್ರಾಪಂನಿಂದ ಅಕ್ರಮ ಖಾತೆ ಮಾಡುವ ಮೂಲಕ ನಗರಸಭೆಗೆ ಬರಬೇಕಾದ ಲಕ್ಷಾಂತರ ರೂ. ಆದಾಯ ನಷ್ಟ ಮಾಡಿದ್ದಾರೆ. ಈ ಬಗ್ಗೆ ಸೂಕ್ತ ಕ್ರಮ ಆಗಬೇಕು ಎಂದು ಸದಸ್ಯ ಹೆಚ್.ಪಿ. ಸತೀಶ್ ಸಭೆಯಲ್ಲಿ ಅಧ್ಯಕ್ಷರು ಹಾಗೂ ಆಯುಕ್ತರ ಗಮನ ಸೆಳೆದು ಅಸಮಾಧಾನ ವ್ಯಕ್ತಪಡಿಸಿದರು.

ನಗರಸಭೆ ಸಭಾಂಗಣದಲ್ಲಿ ಇಂದು ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ನಗರದ ಗಡಿ ಭಾಗದ ಮೂಕನಹಳ್ಳಿ ಸರ್ವೆ ನಂ.124ರ ಭೂಪ್ರದೇಶ ನಗರ ವ್ಯಾಪ್ತಿಗೆ ಸೇರಿದ್ದು, ಈ ಪ್ರದೇಶದಲ್ಲಿನ ಖಾತೆಗಳನ್ನು ನಗರಸಭೆಯಿಂದ ಮಾಡಬೇಕಿದೆ. ಆದರೆ ಯಾವುದೇ ದಾಖಲೆಗಳನ್ನು ಪರಿಶೀಲಿಸದೆ ಮೂಕನಹಳ್ಳಿ ಗ್ರಾಮ ಪಂಚಾಯಿತಿಯವರು ಅಕ್ರಮವಾಗಿ ಖಾತೆ ಮಾಡಿಕೊಡುತ್ತಿದ್ದಾರೆ. ಅಲ್ಲದೆ ಕೆಇಬಿ ಮತ್ತು ಸೆಸ್ಕ್‌ಗಳಿಗೆ ನಿರಾಕ್ಷೇಪಣಾ ಪತ್ರ ನೀಡಿದ್ದಾರೆ. ಇದರಿಂದ ನಗರಸಭೆಗೆ ಲಕ್ಷಾಂತರ ಆದಾಯ ಸೋರಿಕೆಯಾಗುತ್ತಿದೆ ಎಂದು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರು, ಈ ಸಂಬಂಧ ನಗರದ ಗಡಿಭಾಗಗಳ ಪಂಚಾಯಿತಿಗಳಿಗೆ ನೋಟಿಸ್ ನೀಡಿ, ನಗರ ಪ್ರದೇಶದ ಭೂಪ್ರದೇಶವನ್ನು ಖಚಿತ

ನಗರಸಭೆಗೆ ಲಕ್ಷಾಂತರ ರೂ. ನಷ್ಟ; ಸದಸ್ಯರಿಂದ ಅಸಮಾಧಾನ



ಮಾಡಿಕೊಂಡು ಕ್ರಮ ವಹಿಸಲಾಗುವುದು. ಅಲ್ಲದೆ ಈಗಾಗಲೇ ಮಾಡಿರುವ ಖಾತೆಗಳನ್ನು ವಜಾಗೊಳಿಸಲು ಸೂಚಿಸುವುದಾಗಿ ಸಭೆಗೆ ತಿಳಿಸಿದರು.

ನಗರ ಪ್ರದೇಶದಲ್ಲಿನ ರಸ್ತೆಗಳ ರಿಪೇರಿ ಮತ್ತು ಸಣ್ಣಪುಟ್ಟ ಪ್ಯಾಚ್ ವರ್ಕ್‌ಗಾಗಿ ಗುತ್ತಿಗೆದಾರನಿಗೆ ಟೆಂಡರ್ ನೀಡಿದ್ದು, ಗುತ್ತಿದಾರ ಗುಣಮಟ್ಟದ ಕೆಲಸ ಮಾಡದೇ ತೇಪೆ ಕೆಲಸ ಮಾಡಿದ್ದಾರೆ. ಇವರ ಬಿಲ್ ತಡೆ ಹಿಡಿದು ಕಪ್ಪು ಪಟ್ಟಿಗೆ ಸೇರಿಸಬೇಕು ಎಂದು ಸದಸ್ಯರಾದ ಗಣೇಶ್, ಕೃಷ್ಣರಾಜಗುಪ್ತ, ವಿವೇಕ್ ಒತ್ತಾಯಿಸಿದರು.

ಪಕ್ಕದ ತಾಲೂಕುಗಳಾದ ಪಿರಿಯಾಪಟ್ಟಣ, ಕೆ.ಆರ್. ನಗರ, ಹೆಚ್.ಡಿ.ಕೋಟೆಗಳಲ್ಲಿ ಅನಧಿಕೃತ ಬಡಾವಣೆಗಳಿಗೂ ಖಾತೆ ಮಾಡಲಾಗುತ್ತಿದೆ ಹಾಗೂ ಇ–ಸ್ವತ್ತು ನೀಡಲಾಗುತ್ತಿದೆ. ಅದೇ ರೀತಿ ನಮ್ಮಲ್ಲಿಯೂ ನೀಡಿದರೆ ಜನರಿಗೆ ಅನುಕೂಲವಾಗಲಿದೆ. ಅಲ್ಲದೆ ಕಂದಾಯ ಕಟ್ಟುವುದಕ್ಕಾಗಿ ಚಲನ್ ಪಡೆಯಲು ನಗರಸಭೆಗೆ ಜನರು ತಿಂಗಳುಗಟ್ಟಲೇ ಅಲೆಯಬೇಕಾಗಿದೆ. ಕಚೇರಿ ಸಿಬ್ಬಂದಿ ವಿನಾಕಾರಣ ಜನರನ್ನು ಅಲೆಸುತ್ತಿದ್ದಾರೆ ಎಂದು ಸದಸ್ಯರಾದ ಸತೀಶ್, ಗಣೇಶ್ ಬಹುತೇಕರು ದೂರಿದರು.

ನಗರ ವ್ಯಾಪ್ತಿಯಲ್ಲಿ ಹಂದಿಗಳು ಮತ್ತು ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ನಿಯಂತ್ರಣಕ್ಕೆ ಯಾವ ಕ್ರಮ ಕೈಗೊಂಡಿದ್ದಿರಿ ಎಂದು ಸದಸ್ಯರು ಪ್ರಶ್ನಿಸಿದರು. ನಾಯಿಗಳ ಸಂತಾನಶಕ್ತಿ ಹರಣಕ್ಕೆ 14 ಲಕ್ಷ ರೂ. ಟೆಂಡರ್ ಕರೆಯಲಾಗಿದ್ದು, ಸದ್ಯದಲ್ಲೇ ಕ್ರಮ ವಹಿಸಲಾಗುವುದು ಎಂದ ಆಯುಕ್ತರು, ಹಂದಿಗಳ ಹಾವಳಿ ತಡೆಗೆ ನಗರ ವ್ಯಾಪ್ತಿಯ ಹೋಟೆಲ್‌ಗಳಲ್ಲಿನ ತ್ಯಾಜ್ಯ ಹೊರಗಡೆ ಹಾಕದೇ ನಗರಸಭೆಯ ವಾಹನಗಳಿಗೆ ನೀಡಲು ಮಾಲೀಕರಿಗೆ ತಿಳಿಸಲಾಗಿದೆ. ಈ ತ್ಯಾಜ್ಯವನ್ನು 8 ಬಯೋಗ್ಯಾಸ್ ಪ್ಲಾಂಟ್‌ಗೆ ಕಳುಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ನಗರದ ನೀರು ಸರಬರಾಜು ವ್ಯವಸ್ಥೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ 6 ತಿಂಗಳಿಂದ ಸಂಬಳ ನೀಡಿಲ್ಲ ಎಂದು ಸದಸ್ಯರು ಧ್ವನಿ ಎತ್ತಿದರು. ಆಯುಕ್ತರು ಈಗಾಗಲೇ ಒಂದು ತಿಂಗಳ ನೀಡಿದ್ದೇವೆ. ಮುಂದೆ ತೊಂದರೆಯಾಗದಂತೆ ಗುತ್ತಿಗೆದಾರರನ್ನು ಕರೆದು ಸಮಸ್ಯೆ ಸರಿಪಡಿಸುವುದಾಗಿ ತಿಳಿಸಿದರು.

ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಶ್ವೇತಾ ಮಂಜುನಾಥ್: ಸಾಮಾನ್ಯ ಸಭೆಯ ಬಳಿಕ ಸ್ಥಾಯಿ ಸಮಿತಿ ಅಧ್ಯಕ್ಷರು–ಸದಸ್ಯರ ಆಯ್ಕೆ ನಡೆಯಿತು. ನಗರಸಭಾ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ 28ನೇ ವಾರ್ಡ್‌ನ ಶ್ವೇತಾ ಮಂಜುನಾಥ್ ಆಯ್ಕೆಯಾದರೆ, ಸದಸ್ಯರಾಗಿ ಸಿ.ದೇವರಾಜ್, ಭವ್ಯ ಚಂದ್ರಶೇಖರ್, ರಮೇಶ್ ದೊಡ್ಡಹೆಜ್ಜೂರ್, ವಿವೇಕಾನಂದ, ಎಸ್.ಮನು, ರಮೇಶ್.ಹೆಚ್.ಎನ್, ರಾಣಿಪೆರುಮಾಳ್, ಸಮೀನಾ ಬಾನು ಆಯ್ಕೆಯಾಗಿರುವುದಾಗಿ ನೂತನ ಅಧ್ಯಕ್ಷೆ ಸಮೀನಾ ಪರ್ವೀನ್ ಸಭೆಯಲ್ಲಿ ಘೋಷಿಸಿದರು. ಸಭೆಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳಿದ್ದರು.

ಕೊಳ್ಳಿ ಶ್ರೀ ಮಲ್ಲಿಕಾರ್ಜುನಸ್ವಾಮಿ ಬ್ರಹ್ಮರಥೋತ್ಸವ

ಹೊಸೂರು, ಏ.27(ಕೆಪಿಎಂ)– ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಹೋಬಳಿಯ ಚೆನ್ನಂಗೆರೆ ಗ್ರಾಮದ ಕೊಳ್ಳಿ ಶ್ರೀ ಮಲ್ಲಿಕಾರ್ಜುನಸ್ವಾಮಿಯ ಬ್ರಹ್ಮರಥೋತ್ಸವ ಮಂಗಳವಾರ ವಿಜೃಂಭಣೆಯಿಂದ ಜರುಗಿತು.



ಬ್ರಹ್ಮರಥೋತ್ಸವದ ಹಿನ್ನೆಲೆಯಲ್ಲಿ ದೇವಾಲಯದಲ್ಲಿ ಮುಂಜಾನೆಯಿಂದಲೇ ಹೋಮ– ಹವನ ಸೇರಿದಂತೆ ಧಾರ್ಮಿಕ ಕೈಂಕರ್ಯ ಜರುಗಿದವು. ದೇವರಿಗೆ ವಿವಿಧ ಬಗೆಯ ಅಭಿಷೇಕ ನಡೆಸಿ, ಪೂಜೆ ಸಲ್ಲಿಸಲಾಯಿತು. ಬಳಿಕ ಪುಷ್ಪಾಲಂಕಾರ ಮಾಡಿದ ಉತ್ಸವ ಮೂರ್ತಿಯನ್ನು ದೇಗುಲದ ಪ್ರಾಂಗಣದಲ್ಲಿ ಸಿಂಗರಿಸಿದ್ದ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಪೂಜೆ ಸಲ್ಲಿಸುವ ಮೂಲಕ ಪ್ರಧಾನ ಅರ್ಚಕ ನಾಗೇಂದ್ರ, ಬ್ರಹ್ಮ ರಥೋತ್ಸವ ಚಾಲನೆ ನೀಡಿದರು. ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಗ್ರಾಮದ ಸಾವಿರಾರು ಭಕ್ತಾದಿಗಳು ಹರನಾಮ ಸ್ಮರಣೆ ಮಾಡುತ್ತಾ ರಥ ಎಳೆದು ಭಕ್ತಿ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಪ್ರಧಾನ ಅರ್ಚಕರು ಆದ ನಾಗೇಂದ್ರ, ಗ್ರಾಪಂ ಅಧ್ಯಕ್ಷೆ ಸವಿತಾ ಕುಚೇಲ, ಜೆಡಿಎಸ್ ಮುಖಂಡ ಅಭಿಲಾಶ್, ಗ್ರಾಪಂ ಮಾಜಿ ಸದಸ್ಯರಾದ ಮಲ್ಲಿಕಾರ್ಜುನ್, ರೈಸ್ ಮಿಲ್ ಮಾಲೀಕರಾದ ಸಿ.ಕೆ.ಜಗದೀಶ್, ಪ್ರಥಮ ದರ್ಜೆ ಗುತ್ತಿಗೆದಾರ ನಾಗರಾಜ್, ಹಿನಕಲ್ ಗ್ರಾಪಂ ಸದಸ್ಯರಾದ ದಿನೇಶ್, ಉದ್ಯಮಿ ಮಧುಸೂದನ್, ಮುಖಂಡರಾದ ರಘುನಾಥ್, ಪ್ರಕಾಶ್, ಸಿ.ಪಿ.ಕಾಂತರಾಜ್, ಅಂಬರೀಷ್, ದಿನೇಶ್, ಕೃಷ್ಣಪ್ಪ, ರಘು, ಶಂಕರ್ ಚಿಕ್ಕಹನಸೋಗೆ ಗ್ರಾಮದ ಮುಖಂಡ ಲೋಕೇಶ್, ಗ್ರಾಪಂ ಸದಸ್ಯರಾದ ಸೋಮಶೇಖರ್, ಮಾದಯ್ಯ, ಕೇಬಲ್ ಶ್ರೀಧರ್ ಇತರರು ಪಾಲ್ಗೊಂಡಿದ್ದರು. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಇಲಾಖೆ ಬಿಗಿ ಭದ್ರತೆ ಮಾಡಲಾಗಿತ್ತು.

ಮೈಸೂರಲ್ಲಿ ಐಕ್ಯತಾ ಸಮಾವೇಶ: ತಿ.ನರಸೀಪುರ ಕ್ಷೇತ್ರದಿಂದ

10 ಸಾವಿರಕ್ಕೂ ಹೆಚ್ಚು ಮಂದಿ ಭಾಗಿ ನಿರೀಕ್ಷೆ

ತಿ.ನರಸೀಪುರ, ಏ.27(ಎಸ್‌ಕೆ)–ಸಂವಿಧಾನ ಉಳಿವು ಹಾಗೂ ಹಿಂದುಳಿದ ವರ್ಗಗಳ ಮೀಸಲಾತಿ ರಕ್ಷಣೆಗಾಗಿ ಮೇ 4ರಂದು ಮೈಸೂರಿನ ಜೆಕೆ ಮೈದಾನದಲ್ಲಿ ಹಿಂದುಳಿದ ವರ್ಗಗಳ ಶೋಷಿತ ಸಮುದಾಯಗಳ ಐಕ್ಯತಾ ಸಮಾವೇಶ ಆಯೋಜಿಸಲಾಗಿದ್ದು, ತಿ.ನರಸೀಪುರ ಕ್ಷೇತ್ರದಿಂದ ಹಿಂದುಳಿದ–ಶೋಷಿತ ಸಮಾಜದ 10 ಸಾವಿರಕ್ಕೂ ಹೆಚ್ಚು ಬಂಧುಗಳು ಭಾಗವಹಿಸಿ ಸಮಾವೇಶ ಯಶಸ್ವಿಗೊಳಿಸುವಂತೆ ಕುರುಬರ ಸಂಘದ ರಾಜ್ಯ ಅಧ್ಯಕ್ಷ ಪಿ.ಸುಬ್ರಹ್ಮಣ್ಯ ಮನವಿ ಮಾಡಿದರು.



ಪಟ್ಟಣದ ತಾಲೂಕು ಕುರುಬ ಸಂಘದ ಕಚೇರಿಯಲ್ಲಿ ತಾಲೂಕು ಹಿಂದುಳಿದ ವರ್ಗಗಳ–ಶೋಷಿತ ಸಮುದಾಯಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೀಸಲಾತಿ ವಿರೋಧಿ ಶಕ್ತಿಗಳು ವ್ಯವಸ್ಥಿತವಾಗಿ ಸಂವಿಧಾನದ ಮೇಲೆ ದಾಳಿ ನಡೆಸುತ್ತಿವೆ. ಹಾಗಾಗಿ ಹಿಂದುಳಿದ ಮತ್ತು ಶೋಷಿತ ಸಮಾಜಗಳು ಮೀಸಲಾತಿ ಉಳಿಸಿಕೊಳ್ಳುವುದರ ಜೊತೆಗೆ ಸಂವಿಧಾನದ ರಕ್ಷಣೆಗಳಿಗೆ ಮುಂದಾಗಬೇಕಿದೆ. ಪ್ರಜ್ಞಾವಂತಿಕೆ ದೂರದೃಷ್ಟಿ ರೂಢಿಸಿಕೊಂಡು 2023ರ ಚುನಾವಣೆಯಲ್ಲಿ ಬಹುಜನ ವರ್ಗ ನಿರ್ಣಾಯಕ ರಾಜಕೀಯವಾಗಿ ಶಕ್ತಿ ಆಗಬೇಕೆಂಬುದು ಐಕ್ಯತಾ ಸಮಾವೇಶದ ಆಶಯ ಎಂದರು.

ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ನಂತರ ಅಧಿಕಾರಕ್ಕೆ ಬಂದ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಎಲ್ಲಾ ಜಾತಿಯ ಬಡವರು, ಶ್ರಮಿಕರು, ಮಹಿಳೆಯರು, ಹಿಂದುಳಿದವರು, ಶೋಷಿತರ ಅಭಿವೃದ್ಧಿಗೆ ಕಾರಣರಾದರು. ರಾಜ್ಯದಲ್ಲಿ ಸುವರ್ಣ ಯುಗವನ್ನು ಸೃಷ್ಟಿಸಿದರು. ಮತ್ತೊಮ್ಮೆ ಆ ಯುಗವನ್ನು ಸೃಷ್ಟಿಸುವ ಶಕ್ತಿ ನಮ್ಮ ಕೈಯಲ್ಲೇ ಇದೆ. ಆದ್ದರಿಂದ ಎಲ್ಲರೂ ಸಂಘಟಿತರಾಗೋಣ. ಸಂವಿಧಾನ ಮೀಸಲಾತಿ ಉಳಿಸೋಣ, ಸಾಮಾಜಿಕ ಸಮಾನತೆ ಕಾಪಾಡುವ ಸರ್ಕಾರ ಅಸ್ತಿತ್ವಕ್ಕೆ ತರೋಣ ಎಂದು ಕರೆ ನೀಡಿದರು.

ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷ ಶಿವರಾಮು ಮಾತನಾಡಿ, ಹೆಚ್.ಕಾಂತರಾಜ್ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ವರದಿ ಜಾರಿಯಾಗಬೇಕು. ಹಿಂದುಳಿದ ವಿವಿಧ ಅಭಿವೃದ್ಧಿ ನಿಗಮಗಳಿಗೆ ಸಮರ್ಪಕ ಅನುದಾನ ಬಿಡುಗಡೆ ಮಾಡಬೇಕು. ಸ್ಥಳೀಯ ಸಂಸ್ಥೆಗಳ ಮೀಸಲಾತಿ ರಕ್ಷಣೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಟಿಎಂ ನಂಜುಂಡಸ್ವಾಮಿ ಮಾತನಾಡಿದರು. ಸಭೆಯಲ್ಲಿ ತಾಲೂಕು ಕುರುಬ ಸಂಘದ ಕಾರ್ಯದರ್ಶಿ ಬಸವರಾಜು, ಪುರಸಭೆಯ ಮಾಜಿ ಅಧ್ಯಕ್ಷ ಬಸವಣ್ಣ, ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ, ಮಹಿಳಾ ಘಟಕದ ಅಧ್ಯಕ್ಷೆ ಕುಪ್ಯ ಭಾಗ್ಯಮ್ಮ, ಕುರುಬರ ಸಂಘದ ನಿರ್ದೇಶಕರಾದ ಅಶ್ವಿನ್, ಸಂಜು, ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ಅರುಣ್ ಕುಮಾರ್ ಗೌಡ, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ನಾಗೇಶ್, ತಾಲೂಕು ಅಧ್ಯಕ್ಷ ನಾಗೇಂದ್ರ ಹಿಂದುಳಿದ ವರ್ಗಗಳ ಅಧ್ಯಕ್ಷ ಸಿದ್ದಶೆಟ್ಟಿ, ಉಪ್ಪಾರ ಸಮುದಾಯ ಅಧ್ಯಕ್ಷ ರಾಮಶೆಟ್ಟಿ, ತಾಪಂ ಮಾಜಿ ಸದಸ್ಯ ರಮೇಶ್, ಏಳುಮಲೆ ಮಂಜು, ಲೋಕೇಶ್, ಯೋಗೇಶ್ ಮತ್ತಿತರು ಹಾಜರಿದ್ದರು.

ನೇಮಕ



ತಿ. ನರಸೀಪುರ, ಏ. 27 (ಎಸ್‌ಕೆ)– ಕನ್ನಡ ಸಾಹಿತ್ಯ ಪರಿಷತ್ತಿನ ತಲಕಾಡು ಹೋಬಳಿ ಘಟಕದ ಅಧ್ಯಕ್ಷರಾಗಿ ಸುಂದರ್ ನಾಯಕ ಅವರನ್ನು ನೇಮಕ ಮಾಡಿ ಟಿ. ನರಸೀಪುರ ತಾಲೂಕು ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ ಆದೇಶ ನೀಡಿದ್ದಾರೆ.

ಅವಿರೋಧ ಆಯ್ಕೆ



ಹೆಚ್.ಡಿ.ಕೋಟೆ, ಏ.27–ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಪ್ರಧಾನ ಕಾರ್ಯ ದರ್ಶಿಯಾಗಿ ನೇರಳೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಸೋಮಸುಂದರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹೆಚ್.ಡಿ.ಕೋಟೆ ಅಭಿವೃದ್ಧಿಗೆ ಶ್ರಮಿಸಿದ ತೃಪ್ತಿ ನನಗಿದೆ

ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜು

ಸರಗೂರು, ಏ.27(ನಾಗೇಶ್)–ಹೆಚ್.ಡಿ. ಕೋಟೆ ಹಿಂದುಳಿದ ತಾಲೂಕನ್ನು ನೋಡಲ್ ಕ್ಷೇತ್ರವಾಗಿ ಪಡೆದು ನನ್ನ ಅಧಿಕಾರ ಅವಧಿಯಲ್ಲಿ ಸಕ್ರಿಯವಾಗಿ ಕೆಲಸ ನಿರ್ವಹಿಸುವ ತೃಪ್ತಿ ನನಗಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯರೂ ಆದ ನಿರ್ಮಾಪಕ ಸಂದೇಶ್ ನಾಗರಾಜು ತಿಳಿಸಿದರು.

ತಾಲೂಕಿನ ಚಿಕ್ಕದೇವಮ್ಮ ಬೆಟ್ಟದ ಚಿಕ್ಕದೇವಮ್ಮ ದೇವಸ್ಥಾನದಲ್ಲಿ ಸರಗೂರು ಪಪಂ ಸದಸ್ಯ ಶ್ರೀನಿವಾಸ್ ಏರ್ಪಡಿಸಿದ್ದ ವಿಶೇಷ ಪೂಜೆ ಹಾಗೂ ದಾಸೋಹ ಕಾರ್ಯಕ್ರಮಕ್ಕೆ ಆಗಮಿಸಿ ಅವರು ಮಾತನಾಡಿದರು.

ಜನಪ್ರತಿನಿಧಿಯಾದವರು ನೊಂದವರು, ದೀನ–ದಲಿತರು ಗಿರಿಜನರು ಹಾಗೂ ರೈತರ ಪರವಾಗಿ ಕೆಲಸ ಮಾಡುವ ಮನೋಭಾವ ಹೊಂದಬೇಕು. ಹಾಗಿದ್ದಾಗ ಮಾತ್ರ ಅಭಿವೃದ್ಧಿ ಸಾಧ್ಯ. ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಸಂದರ್ಭದಲ್ಲಿ ಗಡಿಭಾಗ ಮತ್ತು ಹಿಂದುಳಿದಿರುವ ಕ್ಷೇತ್ರವಾಗಿರುವ ಹೆಚ್.ಡಿ.ಕೋಟೆಯನ್ನು ನೋಡಲ್ ತಾಲೂಕನ್ನಾಗಿ ಆಯ್ಕೆ ಮಾಡಿಕೊಂಡು ಅನೇಕ ಅಭಿವೃದ್ಧಿ ಕೆಲಸ ಮಾಡುವ ಜೊತೆಗೆ ಅಧಿವೇಶನದಲ್ಲಿ ಅನೇಕ ವಿಚಾರಗಳನ್ನು ಚರ್ಚಿಸಿ ಪರಿಹರಿಸಿದ್ದೇನೆ. ಇದರ ಜೊತೆಗೆ ನನ್ನ ಕ್ಷೇತ್ರ ವ್ಯಾಪ್ತಿಗೆ ಬರುವ ಪ್ರತಿಯೊಂದು ಪ್ರಮುಖ ಸಮಸ್ಯೆಗಳನ್ನು ಅಧಿವೇಶನದಲ್ಲಿ ಸಂಬಂಧಪಟ್ಟ ಸಚಿವರು ಮತ್ತು ಮುಖ್ಯಮಂತ್ರಿಗಳ ಗಮನಕ್ಕೆ ತರುವ ಕೆಲಸ ನಿರಂತರವಾಗಿ ಮಾಡಿದ್ದು, ಕೆಲವೊಂದು ಕಾರಣಗಳಿಂದ ಈ ಬಾರಿ ವಿಧಾನಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಲಿಲ್ಲ. ಮುಂದೆ ಒಳ್ಳೆದಿನಗಳು ಬರಬಹುದು. ನಾನು ಜನಪ್ರತಿ ನಿಧಿ ಆಗಲಿ, ಆಗದೇ ಇರಲಿ ಈ ಕ್ಷೇತ್ರದ ಜನಸಾಮಾನ್ಯರ ಬಗ್ಗೆ ಪ್ರೀತಿ–ವಿಶ್ವಾಸ, ಅಭಿಮಾನ ಎಂದೆಂದು ಇರುತ್ತದೆ ಎಂದರು.



ಸರಗೂರು ತಾಲೂಕಿನ ಚಿಕ್ಕದೇವಮ್ಮನವರ ಬೆಟ್ಟಕ್ಕೆ ಭೇಟಿ ನೀಡಿದ್ದ ಮಾಜಿ ಎಂಎಲ್‌ಸಿ ಸಂದೇಶ್ ನಾಗರಾಜು ಅವರನ್ನು ಪಪಂ ಸದಸ್ಯ ಶ್ರೀನಿವಾಸ್ ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಮುಖಂಡರಾದ ಸಿ.ವಿ.ನಾಗರಾಜು, ಚಿಕ್ಕವೀರನಾಯಕ, ರವಿ ನರಸೀಪುರ, ಪುರದಕಟ್ಟೆ ಬಸವರಾಜು, ಪ್ರದೀಪ, ಗುರು, ಚೆನ್ನಪ್ಪ, ಶಿವಪ್ಪ, ಮಟಕೆರೆ ರಾಜೇಶ್, ಹೊಸಮಾಳ ಪ್ರಕಾಶ್ ಶ್ರೀನಿವಾಸ್, ಮಂಜು, ಶಂಭುಗೌಡ, ಮಾರುತಿ, ಭೈರೇಗೌಡ, ಸೇರಿದಂತೆ ಅನೇಕರಿದ್ದರು.

ಕೊಳತ್ತೂರು ಹಾಲು ಉತ್ಪಾದಕರ ಸಂಘಕ್ಕೆ ಕೃಷ್ಣ ಅಧ್ಯಕ್ಷ

ಉಪಾಧ್ಯಕ್ಷರಾಗಿ ಎಂ.ರಾಜು ಆಯ್ಕೆ



ತಿ. ನರಸೀಪುರ, ಏ.27(ಎಸ್‌ಕೆ)–ತಾಲೂಕಿನ ಕೊಳತ್ತೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಕೃಷ್ಣ, ಉಪಾಧ್ಯಕ್ಷರಾಗಿ ಎಂ.ರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಸಭಾಂಗಣದಲ್ಲಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ ಸಂಬಂಧ ಕರೆದಿದ್ದ ಚುನಾವಣಾ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೃಷ್ಣ, ಉಪಾಧ್ಯಕ್ಷ ಸ್ಥಾನಕ್ಕೆ ಎಂ.ರಾಜು ಹೊರತು ಪಡಿಸಿ ಬೇರ್‍ಯಾರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧವಾಗಿ ಘೋಷಿಸಲಾಯಿತು. ಚುನಾವಣಾಧಿಕಾರಿ ಪ್ರಭಾಮಣಿ ಕಾರ್ಯನಿರ್ವಹಿಸಿದರು.

ಈ ಸಂದರ್ಭದಲ್ಲಿ ನಿರ್ದೇಶಕರಾದ ಆರ್. ಸೋಮಣ್ಣ, ಕೆ.ಶಂಕರ, ಲೋಕೇಶ, ತಿಮ್ಮರಾಯಗೌಡ, ನಾಗೇಗೌಡ, ಮಹದೇವಶೆಟ್ಟಿ, ಕಾಳಯ್ಯ, ಲೋಲಮ್ಮ, ರತ್ನಮ್ಮ, ಕಾರ್ಯದರ್ಶಿ ಸಿದ್ದರಾಜು ಹಾಜರಿದ್ದು, ಅಧ್ಯಕ್ಷ–ಉಪಾಧ್ಯಕ್ಷರನ್ನು ಅಭಿನಂದಿಸಿದರು. ಹಾಲು ಪರೀಕ್ಷಕ ಅಭಿಷೇಕ್, ಸಹಾಯಕ ಚಂದನ್, ಗೋವಿಂದ, ಗ್ರಾಮದ ಮುಖಂಡರಾದ ಕೆ.ಎಸ್.ಕುಮಾರ್, ಸಿದ್ದರಾಜು ಕೆ.ಎಂ. ನಂಜುಂಡಸ್ವಾಮಿ, ಮರಿಸ್ವಾಮಿ, ರಾಜೇಂದ್ರ, ಅಂಗಡಿ ಸಿದ್ದರಾಜು, ನಂಜುಂಡ, ಚೆಲುವ, ಪುಟ್ಟಸ್ವಾಮಿ, ಪಿ.ಮಹದೇವ, ಟೈಲರ್ ಶಿವಯ್ಯ, ಶಂಕರ್, ರವಿ ಮತ್ತಿತರರಿದ್ದರು.

ರಾಗಿ ಖರೀದಿ ನೋಂದಣಿ ಅವ್ಯವಸ್ಥೆ

ಕೇಂದ್ರದ ಬಳಿ ರಾತ್ರಿಯಿಡೀ ರೈತರ ಪರದಾಟ



ಪಿರಿಯಾಪಟ್ಟಣ, ಏ.27–ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿಗೆ ನೋಂದಣಿ ಪ್ರಕ್ರಿಯೆ ಆರಂಭಿಸಲಾಗಿದ್ದು, ತಾಂತ್ರಿಕ ದೋಷ ಉಂಟಾದ ಕಾರಣ ತಾಲೂಕಿನ ಬೆಟ್ಟದಪುರ ಗ್ರಾಮದ ರೈತರು ಮಂಗಳವಾರ ರಾತ್ರಿಯಿಡಿ ಪರದಾಡುವಂತಾಯಿತು.

ಬೆಟ್ಟದಪುರ ಗ್ರಾಮದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆವರಣದಲ್ಲಿ ಸರ್ಕಾರ ಎರಡನೇ ಬಾರಿಗೆ ರಾಗಿ ಖರೀದಿಸಲು ರೈತರಿಂದ ನೋಂದಣಿ ಪ್ರಕ್ರಿಯೆ ಸೋಮವಾರದಿಂದ ಆರಂಭಿಸಿದೆ. ಆದರೆ ಆರಂಭದ ದಿನದಲ್ಲೇ ತಾಂತ್ರಿಕ ದೋಷ ಎದುರಾಗಿದ್ದು, ಹೆಚ್ಚಿನ ಸಂಖ್ಯೆಯ ರೈತರು ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲೇ ಕಾಳ ಕಳೆಯುವಂತಾಯಿತು. ಮಂಗಳವಾರವೂ ಇದೇ ಸಮಸ್ಯೆ ಮುಂದುವರೆದಿದ್ದು, ರಾತ್ರಿ 9 ಗಂಟೆಗೆ ಆನ್‌ಲೈನ್ ಸರಿಯಾಗಬಹುದು ಎಂಬ ವದಂತಿ ಹಿನ್ನೆಲೆಯಲ್ಲಿ ಅಮಾಯಕ ರೈತರು ರಾತ್ರಿಯಿಡೀ ಸರತಿ ಸಾಲಿನಲ್ಲಿ ನಿಂತಿದ್ದಾರೆ. ತಾಂತ್ರಿಕ ಕಾರಣದಿಂದ ಆನ್‌ಲೈನ್ ನೋಂದಣಿ ಲಾಕ್ ಓಪನ್ ಆಗದ ಕಾರಣ ಸಾವಿರಾರು ರೈತರು ಬಳಿಕ ಹಿಂತಿರುಗಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ರೈತರು ಆಗಮಿಸಿದ ಕಾರಣ ನೂಕುನುಗ್ಗಲು ಕೂಡ ಉಂಟಾಯಿತು. ಅಲ್ಲದೆ ರಾತ್ರಿ 1 ಗಂಟೆಯವರೆಗೂ ರೈತರು ತಮ್ಮ ಹೆಸರು ನೋಂದಾಯಿಸಿ ಎಪಿಎಂಸಿ ಆವರಣದಲ್ಲಿ ಮಲಗಿದ್ದಾರೆ. ಸರ್ಕಾರ ರಾಗಿ ಖರೀದಿಗೆ ಡೆಡ್ ಲೈನ್ ನೀಡಿರುವುದೇ ಈ ಯಡವಟ್ಟಿಗೆ ಕಾರಣ ಎಂದು ರೈತ ಮುಖಂಡರು ಬೇಸರ ವ್ಯಕ್ತಪಡಿಸಿದ್ದು, ಸಣ್ಣ ಹಿಡುವಳಿದಾರರಿಗೆ ನಿಯಮಗಳನ್ನು ವಿಧಿಸಿರುವ ಕಾರಣ ಮತ್ತಷ್ಟು ತೊಂದರೆಯಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಅತೀ ಹೆಚ್ಚು ಸ್ಥಾನ

ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿಶ್ವಾಸ

ಹೆಚ್.ಡಿ.ಕೋಟೆ, ಏ27(ಮಂಜು)–ಮೈಸೂರು ವಿಭಾಗದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅತಿ ಹೆಚ್ಚು ಸ್ಥಾನ ಗೆಲ್ಲಿಸುವ ನಿಟ್ಟಿನಲ್ಲಿ ಪಕ್ಷದ ಸಂಘಟನೆ ಮಾಡಲಾಗುತ್ತಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.



ತಾಲೂಕಿನ ಕರಪುರ ಜಂಗಲ್ ರೆಸಾರ್ಟ್‌ನಲ್ಲಿ ವನಮಹೋತ್ಸವದ ಅಂಗವಾಗಿ ಗಿಡಗಳನ್ನು ನಡೆಯುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಪಕ್ಷದ ರಾಷ್ಟ್ರೀಯ ಮತ್ತು ರಾಜ್ಯದ ವರಿಷ್ಠರು ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ. ಹೆಚ್.ಡಿ.ಕೋಟೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಸೂಕ್ತ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು. ತಾಲೂಕು ಉಸ್ತುವಾರಿ ವಹಿಸಿರುವ ಎಂ.ಅಪ್ಪಣ್ಣ ಸೇರಿದಂತೆ ಕಾರ್ಯಕರ್ತರು ಮುಖಂಡರು ಪಕ್ಷವನ್ನು ಬಲಿಷ್ಠವಾಗಿಸುತ್ತಿದ್ದಾರೆ. ಬಿಜೆಪಿ ಗೆಲ್ಲಲು ಪೂರಕವಾದ ವಾತಾವರಣವಿದೆ ಎಂದರು. ಇತ್ತೀಚೆಗೆ ಚುನಾವಣೆ ಸ್ಪರ್ಧಿಸಬೇಕೆಂದು ಅಪ್ಪಣ್ಣ, ಸಿದ್ದರಾಜು, ಡಾ.ಕೃಷ್ಣಸ್ವಾಮಿ ಸೇರಿದಂತೆ ಇನ್ನಿತರರು ಆಸಕ್ತಿ ಹೊಂದಿದ್ದು, ಗೆಲ್ಲುವಂತ ಅಭ್ಯರ್ಥಿಗಳಿಗೆ ಕ್ಷೇತ್ರದಲ್ಲಿ ಪಕ್ಷದಿಂದ ಟಿಕೆಟ್ ನೀಡಲಾಗುವುದು. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಶತಸಿದ್ಧ ಎಂದರು. ಇದೇ ಸಂದರ್ಭದಲ್ಲಿ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಅಧ್ಯಕ್ಷ ಅಪ್ಪಣ್ಣ, ಮ್ಯಾನೇಜರ್ ಅನಿಕೇತನ, ಸಮಾಜ ಸೇವಕ ಡಾ.ಕೃಷ್ಣಸ್ವಾಮಿ, ಹೆಚ್.ಸಿ.ಲಕ್ಷ್ಮಣ್, ತಾಲೂಕು ಬಿಜೆಪಿ ಅಧ್ಯಕ್ಷ ಗುರುಸ್ವಾಮಿ, ಬಸವರಾಜು, ರುದ್ರಪ್ಪ, ಗಿರೀಶ್, ವೆಂಕಟಸ್ವಾಮಿ, ಮಹದೇವ, ಶಿವಕುಮಾರ್, ಗಿರೀಶ್‌ಮೂರ್ತಿ, ಗುರುಸ್ವಾಮಿ, ಕಾಶಿಪತಿ, ಸತೀಶ್, ರಾಜು, ಯೋಗೇಶ್, ವಿವೇಕ್, ನಂದೀಶ, ಲಕ್ಷ್ಮಣ್, ಶಿವಣ್ಣ ಶಿವರಾಜಪ್ಪ ಶಿವರಾಜು, ನಟರಾಜ್, ಚೆನ್ನಪ್ಪ, ಕೆಂಡಗಣ್ಣ, ನವೀನ, ಪರಶಿವ, ಗೋಪಾಲಯ್ಯ, ಮಂಡ್ಯ ಶಿವಕುಮಾರ್, ಶಿವು ಇತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಕೆಜಿಎಫ್ 2 (ತ): ಬೆ.8ಕ್ಕೆ, ಬೆ.11.30ಕ್ಕೆ, ಮ.3.15ಕ್ಕೆ, ಸಂ.6.30ಕ್ಕೆ, ರಾ.9.55ಕ್ಕೆ.

ಸ್ಕ್ರೀನ್ 2 ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.15ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಆರ್‌ಆರ್‌ಆರ್ (ತೆ): ಮ.2.45ಕ್ಕೆ.

ಸ್ಕ್ರೀನ್ 3 ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.25ಕ್ಕೆ, ಬೀಸ್ಟ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ.

ಸ್ಕ್ರೀನ್ 4 ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.45ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಬೀಸ್ಟ್ (ತ): ಬೆ.8.40ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ.

ಸ್ಕ್ರೀನ್ 2 ಬೀಸ್ಟ್ (ತ): ಬೆ.8ಕ್ಕೆ, ಬೆ.11.10ಕ್ಕೆ, ಮ.2.30ಕ್ಕೆ, ಸಂ.5.50ಕ್ಕೆ, ರಾ.9.10ಕ್ಕೆ.

ಸ್ಕ್ರೀನ್ 3 ಬೀಸ್ಟ್ (ತ): ಬೆ.8.20ಕ್ಕೆ, ಬೆ.11.45ಕ್ಕೆ, ಫೆಂಟಾಸ್ಟಿಕ್ ಬೀಸ್ಟ್ಸ್ (ಇಂ): ಮ.3.05ಕ್ಕೆ, ಜೇಮ್ಸ್ (ಕ): ಸಂ.6.10ಕ್ಕೆ, ಆರ್‌ಆರ್‌ಆರ್ (ಹಿಂ): ರಾ.9.20ಕ್ಕೆ.

ಸ್ಕ್ರೀನ್ 4 ಬೀಸ್ಟ್ (ತ): ಬೆ.8.10ಕ್ಕೆ, ಜೇಮ್ಸ್ (ಕ): ಬೆ.11.35ಕ್ಕೆ, ಆರ್‌ಆರ್‌ಆರ್ (ತೆ): ಮ.2.45ಕ್ಕೆ, ರಾ.9.50ಕ್ಕೆ, ಕೆಜಿಎಫ್ (ಕ): ಸಂ.6.25ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಆರ್‌ಆರ್‌ಆರ್ (2ಡಿ)(ಕ): ಬೆ.11ಕ್ಕೆ, ತ್ರಿಕೋನ (ಕ): ಸಂ.4ಕ್ಕೆ, ಗಣಿ (ತೆ): ಸಂ.6.45ಕ್ಕೆ.

ಸ್ಕ್ರೀನ್ 2 ಆರ್‌ಆರ್‌ಆರ್ (2ಡಿ)(ತೆ): ಮ.1.30ಕ್ಕೆ.

ಸ್ಕ್ರೀನ್ 3 ಆರ್‌ಆರ್‌ಆರ್ (2ಡಿ)(ಕ): ಸಂ.4ಕ್ಕೆ, ರಾ.7.45ಕ್ಕೆ.

ಸ್ಕ್ರೀನ್ 4 ವರ್ಣಪಟಲ (ಕ): ಬೆ.11ಕ್ಕೆ, ಜೇಮ್ಸ್ (ಕ): ಮ.1.30ಕ್ಕೆ, ರಾ.7.30ಕ್ಕೆ, ಗಣಿ (ತೆ): ಸಂ.4.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್ (ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಖತ್ರಾ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಾತ್ತು ವಾಲತ್ತಲ ರೆಂಡು ಕಾದಲ್ (ತ)	4 ಪ್ರದರ್ಶನಗಳು
ಸಂಗಂ	
ಕೆಜಿಎಫ್ 2 (ಕ)	4 ಪ್ರದರ್ಶನಗಳು
ಲಿಡೋ	
ಬೀಸ್ಟ್ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೀಸ್ಟ್ (ಕ)	4 ಪ್ರದರ್ಶನಗಳು



ಎಸ್‌ಆರ್‌ಹೆಚ್ ವಿರುದ್ಧ ಗುಜರಾತ್‌ಗೆ ರೋಚಕ ಗೆಲುವು

ಮುಂಬೈ, ಏ.27– ಯುವ ಆಟಗಾರ ವೃದ್ಧಿಮಾನ್ ಶಾ ಆಕರ್ಷಕ ಅರ್ಧಶತಕ ಹಾಗೂ ರಾಹುಲ್ ತೆವಾಟಿಯಾ, ರಶೀದ್‌ಖಾನ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಗುಜರಾತ್ ಟೈಟನ್ಸ್ 5 ವಿಕೆಟ್‌ಗಳ ರೋಚಕ ಗೆಲುವು ದಾಖಲಿಸಿತು. ಈ ಮೂಲಕ ಟೂರ್ನಿಯಲ್ಲಿ ಆಡಿದ 8 ಪಂದ್ಯಗಳಲ್ಲಿ 7ರಲ್ಲಿ ಗೆಲುವು ದಾಖಲಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ ನಿಗದಿತ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 196ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರವಾಗಿ ಅಭಿಷೇಕ್ ಶರ್ಮಾ 65, ಮಾರ್ಕರಮ್ 56, ಶಶಾಂಕ್ ಸಿಂಗ್ 25, ರಾಹುಲ್ ತ್ರಿಪಾಠಿ 16ರನ್ ಗಳಿಸಿದರು. ಬೌಲಿಂಗ್‌ನಲ್ಲಿ ಗುಜರಾತ್ ಪರವಾಗಿ ಮಹಮ್ಮದ್‌ಶಮಿ 3, ಯಶ್‌ದಯಾಳ್, ಅಲ್ಜಾರಿ ಜೋಸೆಫ್ ತಲಾ ಒಂದು ವಿಕೆಟ್ ಪಡೆದರು.

197ರನ್‌ಗಳ ಬೃಹತ್ ಗುರಿ ಬೆನ್ನತ್ತಿದ್ದ ಗುಜರಾತ್‌ಗೆ ನಾಯಕ ಶುಭಮನ್‌ಗಿಲ್(22) ಹಾಗೂ ವೃದ್ಧಿಮಾನ್ ಶಾ(68) ಉತ್ತಮ ಆರಂಭ ನೀಡಿದರು. ಇವರ ನಂತರ ಬಂದ ನಾಯಕ ಹಾರ್ದಿಕ್ ಪಾಂಡ್ಯೆ 10, ಡೇವಿಡ್ ಮಿಲ್ಲರ್ 17ರನ್ ಗಳಿಸಿ ಔಟಾಗುವ ಮೂಲಕ ನಿರಾಶೆ ಮೂಡಿಸಿದರು. ಒಂದು ಹಂತದಲ್ಲಿ ಗುಜರಾತ್ 16 ಓವರ್‌ಗಳಲ್ಲಿ 140ರನ್‌ಗಳಿಗೆ ಪ್ರಮುಖ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಸ್ಫೋಟಕ ಬ್ಯಾಟಿಂಗ್ ನಡೆಸಿದ ರಾಹುಲ್ ತೆವಾಟಿಯಾ ಅಜೇಯ 40 ಹಾಗೂ ರಶೀದ್‌ಖಾನ್ ಅಜೇಯ 31ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು.

ಅಂತಿಮವಾಗಿ ಗುಜರಾತ್ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 199 ರನ್ ಗಳಿಸಿ ಗೆಲುವಿನ ಕೇಕೆ ಹಾಕಿತು. ಬೌಲಿಂಗ್‌ನಲ್ಲಿ ಹೈದರಾಬಾದ್ ಪರವಾಗಿ ಉಮ್ರಾನ್ ಮಲ್ಲಿಕ್ 5 ವಿಕೆಟ್ ಪಡೆದು ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಮೈಸೂರು ತಾಲೂಕಿನ ಹೊಸ ಕಾಮನ ಕೊಪ್ಪಲಿನಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಗೆ ನಾಗವಾಲ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ ಗುದ್ದಲಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ತಾಪಂ ಮಾಜಿ ಸದಸ್ಯ ಹುಯಿಲಾಳು ಮಹದೇವು, ಗ್ರಾಪಂ ಸದಸ್ಯರಾದ ಮಹೇಶ್, ಬೊಮ್ಮೇನಹಳ್ಳಿ ಮಹದೇವು, ಬಿ.ಕೆ.ಈಶ್ವರ್, ಕೆಂಪೇಗೌಡ, ಭಾಗ್ಯ ರಮೇಶ್, ಸಿಗಳ್ಳಿ ಸೋಮಣ್ಣ, ಎಸ್.ಜೆ.ಕುಮಾರ್, ಹುಯಿಲಾಳು ಮಂಜುನಾಥ್, ಮಾಲೇಗೌಡ, ಶ್ರೀಧರ್, ಪಿಡಿಓ ಡಾ.ಶೋಭಾರಾಣಿ, ಕಾರ್ಯದರ್ಶಿ ಯಶ್ವಂತ್, ರುದ್ರೇಗೌಡ ಇದ್ದರು.

ಎಸ್‌ಡಿಪಿಐನಿಂದ ಮೈಸೂರಲ್ಲಿ ಇಫ್ತಾರ್ ಕೂಟ



ಮೈಸೂರು,ಏ.27(ಜಿಎ)–ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ನಗರ ಘಟಕದ ವತಿಯಿಂದ ಮೈಸೂರಿನ ರಾಜೀವ್‌ನಗರದಲ್ಲಿ ಮುಸ್ಲಿಂ ಬಾಂಧವರಿಗಾಗಿ ಇಫ್ತಾರ್ ಕೂಟ ಆಯೋಜಿಸಿತ್ತು.

ಈ ವೇಳೆ ಎಸ್‌ಡಿಪಿಐನ ರಾಜ್ಯ ಪ್ರಧಾನ ಕಾರ್ಯದರ್ಶಿ ಭಾಸ್ಕರ್ ಪ್ರಸಾದ್ ಮಾತನಾಡಿ, ಕೆಲವು ವರ್ಷಗಳ ಹಿಂದೆ ಇಫ್ತಾರ್ ಕೂಟ ಎಂದರೆ ಪರಸ್ಪರ ಮಾತನಾಡಿ ಉತ್ತಮ ಆಹಾರ ಸೇವಿಸುವ ವಾತಾವರಣ ಇರುತ್ತಿತ್ತು ಆದರೆ ಇಂತಹ ಸಂತೋಷದ ಕೂಟದ ಸಂದರ್ಭದಲ್ಲಿಯೂ ನಾವು ಈಗಿನ ವ್ಯವಸ್ಥೆ ಬಗ್ಗೆ ಮಾತನಾಡುವ ಸ್ಥಿತಿ ಇದೆ ಎಂದು ವಿಷಾದಿಸಿದರು. ರಾಜ್ಯದ ಮುಖ್ಯಮಂತ್ರಿಗಳು ಯಾವುದೇ ಧರ್ಮ, ಜಾತಿ ನೋಡದೇ ಎಲ್ಲರನ್ನೂ ಸಮಾನತೆಯಿಂದ ನೋಡಬೇಕು. ಆದರೆ ಅವರು ಹಾಗೇ ನಡೆದುಕೊಳ್ಳುತ್ತಿಲ್ಲ. ಮತ್ತೊಂದು ಕಡೆ ಈಶ್ವರಪ್ಪನವರು ಸದನದಲ್ಲಿ ಆರ್‌ಎಸ್‌ಎಸ್‌ನ 100 ಅಜೆಂಡಾಗಳನ್ನು ಜಾರಿ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಗೃಹಮಂತ್ರಿಗಳು ರಾಜ್ಯದಲ್ಲಿ ನಡೆಯುತ್ತಿರುವ ಘಟನೆಗಳ ಕುರಿತು ಮೌನ ವಹಿಸುತ್ತಿದ್ದಾರೆ. ಹೀಗೆ ಆದರೆ ನಮ್ಮ ಸಮಸ್ಯೆಗಳನ್ನು ಯಾರ ಬಳಿ ತಿಳಿಸಬೇಕು ಎಂದು ಪ್ರಶ್ನಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಡಿಪಿಐ ಜಿಲ್ಲಾ ಕಾರ್ಯದರ್ಶಿ ಮಹಮ್ಮದ್ ಶಫೀ ಉಲ್ಲ, ರಾಜ್ಯ ಸಮಿತಿ ಸದಸ್ಯ ಅಮ್ಜಾದ್ ಖಾನ್, ಜಿಲ್ಲಾಧ್ಯಕ್ಷ ರಫತ್ ಖಾನ್, ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್ (ಜನ್ನಿ), ನಿವೃತ್ತ ಪ್ರಾಧ್ಯಾಪಕ ನಂಜರಾಜ್ ಅರಸ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಟಿ ತಾರಾಗೆ ಮಾತೃ ವಿಯೋಗ



ಮೈಸೂರು,ಏ.27–ಹಿರಿಯ ನಟಿ ತಾರಾ ಅನುರಾಧ ಅವರ ತಾಯಿ ಪುಷ್ಪ(76) ಹೃದಯಾಘಾತದಿಂದ ನಿಧನರಾದರು. ಮೈಸೂರಿಗೆ ಇಬ್ಬರೂ ಶೂಟಿಂಗ್‌ಗಾಗಿ ಬಂದಿದ್ದರು. ಈ ವೇಳೆ ಪುಷ್ಪ ಅಸ್ವಸ್ಥರಾಗಿದ್ದು ತಕ್ಷಣ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು ಚಿಕಿತ್ಸೆ ಫಲಕಾರಿಯಾಗದೆ ಬುಧವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಕೊನೆಯುಸಿರೆಳೆದಿದ್ದಾರೆ. ಮೈಸೂರಿನಿಂದ ಪಾರ್ಥಿವ ಶರೀರವನ್ನು ಬೆಂಗಳೂರಿನ ಜೆ.ಪಿ.ನಗರದ ನಿವಾಸಕ್ಕೆ ಕೊಂಡೊಯ್ಯಲು ವ್ಯವಸ್ಥೆ ಮಾಡಲಾಗಿದೆ ಎಂದು ತಾರಾ ಪತಿ, ಅಳಿಯ ವೇಣು ತಿಳಿಸಿದರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಮೈಸೂರು ನಗರ, ನರಸಿಂಹರಾಜ ಮೊಹಲ್ಲಾ, ಬಡ ಮಕಾನ್ ಬಡಾವಣೆ, 2ನೇ ಕ್ರಾಸ್‌ನಲ್ಲಿ ವಾಸವಾಗಿರುವ ಆಯಿಷಾ ಖಾನಂ ಕೋಂ ಹುಮಾಯೂನ್ ಫರ್ ರವರಿಂದ ಮೈಸೂರು ತಾ॥, ಜಯಪುರ ಹೋ ॥, ಸಿಂದುವಳ್ಳಿ ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂ 290 ರಲ್ಲಿ 3 ಎಕರೆ 11 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆಯುತ್ತಿದ್ದು ಈ ಸ್ವತ್ತಿಗೆ ಸಂಬಂದಿಸಿದಂತೆ ಯಾರಿಗಾದರೂ ಹಕ್ಕು, ಅಥವಾ ತಂಟೆ – ತಕರಾರು ಇದ್ದಲ್ಲಿ 7 ದಿನಗಳ ಒಳಗೆ ನಮ್ಮ ಗಮನಕ್ಕೆ ತರುವುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಸದರಿ ಜಮೀನನ್ನು ಕ್ರಯ ನೋಂದಣಿ ಮಾಡಿಸಿಕೊಳ್ಳುತ್ತಾರೆ.

ಸಿ.ಎಂ. ರೇವಣ್ಣಕುಮಾರ ಬಿ.ಕಾಂ. ಎಲ್ .ಎಲ್.ಬಿ,
ವಕೀಲರು
ನಂ.2345, ಎರಡನೇ ಮಹಡಿ,
ಪಂಪಾಪತಿರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಲೇಟ್ ಕಾವೇರಿಯಪ್ಪ ರವರ ಮಗ ನಾದ ಶ್ರೀ ಬಿ.ಕೆ. ಅಶೋಕ್ ನಂಜಪ್ಪ ಅಲಿಯಾಸ್ ಬಿ.ಕೆ. ನಂಜಪ್ಪ ರವರು ಈ ಕೆಳಗೆ ನಮೂದಿಸಿರುವ ಸ್ವತ್ತಿನ ಮಾಲೀಕರಾಗಿದ್ದು, ಸದರಿ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ ಆಕ್ಷೇಪಣೆ, ಸಿವಿಲ್ ವ್ಯಾಜ್ಯ ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಲಕ್ಷ್ಮೀಪುರಂ 2ನೇ ಮುಖ್ಯ ರಸ್ತೆ (ಈ ಹಿಂದೆ ಚೇತುಹಳ್ಳಿ ಬಡಾವಣೆ 5ನೇ ಡ್ರೈನೇಜ್ ಪ್ರದೇಶ), ಸ್ವತ್ತಿನ ಸಂಖ್ಯೆ 942 ಹೊಸ ನಂ. ಸಿ.ಹೆಚ್.–3 [ಹಳೇ ನಂ. 14, ಬ್ಲಾಕ್ 88, ಸಿಟಿ ಸರ್ವೆ ನಂ. 1566] ರ ವಿಸ್ತೀರ್ಣ ಪೂರ್ವ–ಪಶ್ಚಿಮ 176 ಅಡಿಗಳು ಮತ್ತು ಉತ್ತರ–ದಕ್ಷಿಣ 145 ಅಡಿಗಳು ಮತ್ತು ಇದರಲ್ಲಿರತಕ್ಕ ಕಟ್ಟಡವನ್ನೊಳಗೊಂಡ ಪೂರ್ತಾ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ: ಗಲ್ಲಿ, ಪಶ್ಚಿಮಕ್ಕೆ: ಲಕ್ಷ್ಮೀಪುರಂ 2ನೇ ಮುಖ್ಯ ರಸ್ತೆ, ಉತ್ತರಕ್ಕೆ: ಖಾಸಗಿ ಸ್ವತ್ತಿನ ನಂ. 943/4, 943/3 & 943/6 [ಹಳೇ ನಂ. 09] ಮತ್ತು ದಕ್ಷಿಣಕ್ಕೆ: ಖಾಸಗಿ ಸ್ವತ್ತಿನ ನಂ. 941 & 941/2 [ಹಳೇ ನಂ. 14/ಎ].

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್ ನಂ.1458/ಎ,
ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್
ಸಮೀಪ, ಮೈಸೂರು. ಮೊ:9844640641
Email:
sldlawfirm2021@gmail.com

ಸಾರ್ವಜನಿಕ ಪ್ರಕಟಣೆ


ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶ್ರೀ ಸುತಾರ್ ಗೆಬಾಜಿ ಅವರ ಮಗ ಶ್ರೀ. ಪುಕ್ ರಾಜ್ ರವರು ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾಗಿದ್ದು, ನನ್ನ ಕಕ್ಷಿದಾರರಿಗೆ ಸದರಿ ಸ್ವತ್ತನ್ನು ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಸೀತಾವಿಲಾಸ್ ಅಗ್ರಹಾರ ರಸ್ತೆಯಲ್ಲಿರುವ ಖಾಲಿ ನಿವೇಶನ ಸಂಖ್ಯೆ 10/1, ಹೊಸ ಸಂಖ್ಯೆ ಸಿಹೆಚ್–3, ಸ್ವತ್ತಿನ ಅಳತೆ ಪೂರ್ವ–ಪಶ್ಚಿಮ: 09 ಅಡಿಗಳು, ಉತ್ತರ–ದಕ್ಷಿಣ: 116 ಅಡಿಗಳು, ಒಟ್ಟು ವಿಸ್ತೀರ್ಣ 1044 ಚದರ ಅಡಿಗಳುಳ್ಳ ಸ್ವತ್ತಿನ ಪೈಕಿ ದಕ್ಷಿಣ ಭಾಗದ ವಿಸ್ತೀರ್ಣ ಪೂರ್ವ–ಪಶ್ಚಿಮ: 09 ಅಡಿಗಳು ಮತ್ತು ಉತ್ತರ–ದಕ್ಷಿಣ: 50 ಅಡಿಗಳುಳ್ಳ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ: ಲೇಟ್ ಶಂಕರ್ ಪಂಡಿತ್ ರವರಿಗೆ ಸೇರಿದ ಸ್ವತ್ತಿನ ಸಂಖ್ಯೆ. 10, ಪಶ್ಚಿಮಕ್ಕೆ: ದಾಸಮಿದೇವಿ ಮತ್ತು ಇತರರಿಗೆ ಸೇರಿದ ಸ್ವತ್ತು, ಉತ್ತರಕ್ಕೆ: ಮುಖ್ಯ ರಸ್ತೆ, ಮತ್ತು ದಕ್ಷಿಣಕ್ಕೆ: ಗಲ್ಲಿ–ಎಂ.ಎನ್. ಜೋಯಿಸ್ ರಸ್ತೆ.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್, ನಂ. 1458/ಎ,
ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್
ಹತ್ತಿರ, ಮೈಸೂರು.ಮೊ: 9844640641
email:
sldlawfirm2021@gmail.com

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಬೊಮ್ಮಣ್ಣ

ನಿಧನ: 18.04.2022

ಇವರು ದಿ.18.04.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ. 28.04.2022ರ ಗುರುವಾರ ಬೆಳಗ್ಗೆ 10.30 ಗಂಟೆಗೆ ನಮ್ಮ ಸ್ವಗ್ರಾಮ # 143, 2ನೇ ಮೇನ್, 2ನೇ ಹಂತ, ಗೋಕುಲಂ, ಮೈಸೂರು ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:
ಶ್ರೀಮತಿ ಗಾಯಿತ್ರಮ್ಮ, ಮೃತರ ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಭೋಜನ : 12.30 ಗಂಟೆಗೆ

3ನೇ ವರ್ಷದ ಸವಿನೆನಪು



ನಿಮ್ಮ ಅಗಲಿಕೆ ನಮ್ಮನ್ನು ಭಾದಿಸುತ್ತಿದೆ ನಿಮ್ಮ ನಡೆ, ನುಡಿ, ಆದರ್ಶ ನಮಗೆ ದಾರಿದೀಪವಾಗಿದೆ.

ಕು॥ ಶಂಕರಮ್ಮ ಎಂ
(ಪರಿಸರ ವಾಯು ಮಾಲಿನ್ಯ ಇಲಾಖೆ)
ಗಾಂಧಿನಗರ, ಮೈಸೂರು

ದುಃಖತಪ್ತರು: ನಾಗಲಕ್ಷ್ಮಿ, ಸಹೋದರ–ಸಹೋದರಿಯರು, ಮಕ್ಕಳು ಹಾಗೂ ಕುಟುಂಬವರ್ಗದವರು

8ನೇ ವರ್ಷದ ಸವಿನೆನಪು



ಶ್ರೀಮತಿ ಸಿ.ಬಿ. ಪವಿತ್ರ

ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ,
ಇಂತಿ ದುಃಖತಪ್ತರು:
ತಂದೆ: ಬೀರೇಗೌಡ ಬಿ. ನಿವೃತ್ತ ಎಎಸ್‌ಐ, ಪೋಲೀಸ್ ಇಲಾಖೆ
ತಾಯಿ: ಸಾವಿತ್ರಮ್ಮ ಮತ್ತು ತಂಗಿಯರು, ಮಕ್ಕಳಾದ ನಯನ, ವಂದನ ಮತ್ತು ಕುಟುಂಬವರ್ಗ.